| ಚುಟುಕುಗಳು | ◆ ಶುಭ ಎಲ್., ಅಂತಿಮ ಬಿ.ಕಾಂ. | 47 |
| ಸ್ನೇಹ | ◆ ಶಿವರಂಜಿನಿ ಎಂ., ಅಂತಿಮ ಬಿ.ಕಾಂ. | 48 |
| ಸ್ಫೂರ್ತಿ ಸೆಲೆ | ◆ ಶಬರಿನ್, ದ್ವಿತೀಯ ಬಿ.ಎ. (ಹೆಚ್.ಇ.ಜಿ.) | 48 |
| ನೆನಪು | ◆ ಎಂ. ಪ್ರೀತಿ, ಅಂತಿಮ ಬಿ.ಕಾಂ. | 49 |
| ಪೂರ್ವಭಾವಿ ಹಾಡು : ಗುಣಿತಾಕ್ಷರಗಳ ಕಲ್ಪನೆ ಬರಲು ಈ ಹಾಡು | ◆ ಮಮತ ಸಿ., ದ್ವಿತೀಯ ಬಿ.ಎ. (ಹೆಚ್.ಇ.ಕೆ.) | 50 |
| ಅಮ್ಮನ ಪ್ರೀತಿ | ◆ ವಿಜಯ ಎಸ್., ದ್ವಿತೀಯ ಬಿ.ಕಾಂ. | 50 |
| ಒಲವೆಂದರೆ | ◆ ಶವನ ತಸ್ಮಿಯಾ, ಅಂತಿಮ ಬಿ.ಕಾಂ. | 51 |
| ಸಂಜೀವಿನಿ | ◆ ಚೈತ್ರ ಎಂ., ಅಂತಿಮ ಬಿ.ಕಾಂ. | 51 |
| ಯಶಸ್ಸು | ◆ ಕೆ. ಸುಕನ್ಯ, ಅಂತಿಮ ಬಿ.ಕಾಂ. | 52 |
| ಕವನ | ◆ ವಜ್ರ ಎಸ್., ಅಂತಿಮ ಬಿ.ಕಾಂ. | 52 |
| ಕವನಗಳು | ◆ ಶರ್ಮಿಳಾ ಎಸ್., ಅಂತಿಮ ಬಿ.ಎ. (ಹೆಚ್.ಇ.ಕೆ.) | 53 |
| ಜೀವನದ ಸಂಗತಿ | ◆ ದಿವ್ಯ ಜೆ., ತೃತೀಯ ಬಿ.ಎ. (ಹೆಚ್.ಇ.ಕೆ.) | 53 |
| ಕಾರ್ಗಿಲ್ ನೆನಪು... | ◆ ಮಹೇಶ್ವರಿ ಎಸ್., ತೃತೀಯ ಬಿ.ಎ. (ಹೆಚ್.ಇ.ಕೆ.) | 54 |
| ನನ್ನ ಕವನ | ◆ ಮಾನಸ ಎಂ., ಪ್ರಥಮ ಬಿ.ಕಾಂ. | 55 |
| ಪ್ರಕೃತಿ | ◆ ಹಂಸವೇಣಿ ಎಸ್., ಅಂತಿಮ ಬಿ.ಕಾಂ. | 55 |
| ಸೈನಿಕರು | ◆ ಸವಿತ ಎಂ., ಅಂತಿಮ ಬಿ. ಕಾಂ. | 56 |
| ಮಾತು | ◆ ಅಂಜು ಎಸ್., ಅಂತಿಮ ಬಿ.ಎ. (ಹೆಚ್.ಇ.ಜಿ.) | 56 |

ಗ್ರಂಥಾಲಯ ... ಜೆ. ಎಸ್. ಎಸ್. ಮಹಿಳಾ ಕಾಲೇಜು ಕೊಳ್ಳೇಗಾಲ-571440



# ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು



◆ ಅನಿತಾ ಎಸ್.
ಅಂತಿಮ ಬಿ.ಕಾಂ.

ಶ್ರೀ ಶಿವರಾತ್ರಿ ಮಹಾಸ್ವಾಮಿಗಳು ಹುಟ್ಟಿದುದು 1916ನೇ ಇಸವಿಯಲ್ಲಿ ಅವರು ಹುಟ್ಟಿದ ಊರು ಮೈಸೂರು ಜಿಲ್ಲೆ ನಂಜನಗೂಡು ಸಮೀಪ ಕಪಿಲಾನದಿ ತೀರದಲ್ಲಿರುವ ಸುತ್ತೂರಿನಲ್ಲಿ. ಅವರ ತಂದೆ ಮಲ್ಲಿಕಾರ್ಜುನಸ್ವಾಮಿ ತಾಯಿಯ ಹೆಸರು ಮರಮ್ಮಣ್ಣಿ ಆಗ ಸುತ್ತೂರು ಮಠದ ಹಿರಿಯ ಗುರುಗಳಾಗಿದ್ದವರು ಪಟ್ಟದ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು ಮಗು ರಾಜೇಂದ್ರ ಮಹಾಸ್ವಾಮಿಗಳು ಹುಟ್ಟಿದ ಕೂಡಲೆ ಶಿವರಾತ್ರೀಶ್ವರರಿಗೆ ಏನೇನೊ ಹೊಳೆಯಿತು ಈ ಮಗು ಸಾಮಾನ್ಯವಾದುದಲ್ಲ ಇದರ ಭವಿಷ್ಯ ಬಹಳ ಉಜ್ವಲವಾಗಿದೆ. ಮುಂದೆ ಈ ಮಗುವಿನಿಂದ ಮಾನವ ಸಮಾಜಕ್ಕೆ ಅನನ್ಯವಾದ ಸೇವೆ ಸಲ್ಲಲಿದೆ. ಲಕ್ಷಾಂತರ ಜನಕ್ಕೆ ಮಾರ್ಗದರ್ಶನ ಮಾಡುವಂತಹ ಗುರುವಾಗುವ ಲಕ್ಷಣಗಳಿವೆ. ಈ ಮಗುವೆ ಆನಂತರ ಸುತ್ತೂರು ಮಠದ 23ನೆಯ ಜಗದ್ಗುರುಗಳಾದುದು ಇವರೇ ಮಾನವರ ಒಳತಿಗಾಗಿ ಲೋಕೋತ್ತರ ಸೇವೆಯನ್ನು ಮಾಡಿದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಶ್ರೀ ಶಿವರಾತ್ರಿ ರಾಜೇಂದ್ರರು ಬಾಲ್ಯವನ್ನು ಸುತ್ತೂರು ಮಠದಲ್ಲಿಯೇ ಹೆಚ್ಚಾಗಿ ಕಳೆದರು. ಮಠದ ವಾತಾವರಣವೇ ಅವರಿಗೆ ಪ್ರಿಯವಾಗಿತ್ತು. ಒಂದು ಕಡೆ ತಂದೆ ತಾಯಿಗಳು ಮತ್ತೊಂದು ಕಡೆ ಅವರ ಗುರುಗಳು ತಂದೆ ತಾಯಿಯರ ಪ್ರೀತಿಯನ್ನು ಅನುಭವಿಸುತ್ತಲೇ ಅವರು ಗುರುಗಳಿಗೆ ಹತ್ತಿರವಾದರು. ಗುರುಗಳಿಗೆ ಹತ್ತಿರವಾದಂತೆ ಅವರಿಗೆ ಬಾಲ್ಯದಲ್ಲಿಯೇ ಶಿಸ್ತಿನ ಜೀವನ ಅಳವಟ್ಟಿತು. ಎಲ್ಲ ಮಕ್ಕಳಂತೆ ಆಟವಾಡುತ್ತಲೆ ಶಾಲೆಗೆ ಹೋದರು. ಆದರೆ ಅವರ ಒಲವು ಮಾತ್ರ ದಿವ್ಯ ಜೀವನದ ಕಡೆಗೆ ಅಂತಹ ಜೀವನಕ್ಕೆ ಅವರ ಗುರುಗಳ ಮಾರ್ಗದರ್ಶನವೆ ಮುಖ್ಯವಾಯಿತು. ಗುರುಗಳ ಅಭಿಲಾಷೆಯಂತೆ ಸುತ್ತೂರಿನಲ್ಲಿಯೆ ಅವರ ಪ್ರಾಥಮಿಕ ವಿದ್ಯಾಭ್ಯಾಸವೂ ಮುಂದುವರಿಯಿತು. ಹೀಗೆ ಶಿವರಾತ್ರಿ ರಾಜೇಂದ್ರರ ವ್ಯಕ್ತಿತ್ವ ರೂಪುಗೊಳ್ಳತೊಡಗಿತು.

ಎಳೆಯ ವಯಸ್ಸಿನಲ್ಲಿಯೆ ಶಿವರಾತ್ರಿ ರಾಜೇಂದ್ರರಿಗೆ ಹೊಸ ಹೊಸ ವಿಚಾರಗಳು ಹೊಳೆಯುತ್ತಿದ್ದವು. ಅವರ ಆಲೋಚನೆಗಳೂ ಸಹ ಬೇರೆಯವರಿಗೆ ಆಶ್ಚರ್ಯ ಉಂಟು ಮಾಡುವಂತಿದ್ದುವು. ಇದನ್ನು ಕಂಡ ಅವರ ಗುರುಗಳು ಸಂತೋಷಪಡುತ್ತಿದ್ದರು. ಮುಂದೆ ಇವರು ಒಳ್ಳೆಯ ಗುರುಗಳಾಗುತ್ತಾರೆಂದು ಹೆಮ್ಮೆ ಪಡುತ್ತಿದ್ದರು. ಆದ್ದರಿಂದ ಅವರಿಗೆ ಇನ್ನೂ ಉತ್ತಮವಾದ ಶಿಕ್ಷಣ ದೊರಕಿದರೆ ಒಳ್ಳೆಯದೆಂದು ಭಾವಿಸಿದರು ಶಿವರಾತ್ರಿ ರಾಜೇಂದ್ರರಿಗೆ ಪ್ರಾಥಮಿಕ ಶಿಕ್ಷಣ ಮುಗಿದೇ ಇರಲಿಲ್ಲ. ಅಷ್ಟರಲ್ಲೆ ಅವರನ್ನು ಮೈಸೂರಿಗೆ ಕಳುಹಿಸುವುದೆಂದು. ಅವರ ಗುರುಗಳು ತೀರ್ಮಾನಿಸಿದರು. ಆಗ ಮೈಸೂರಿನಲ್ಲಿ ಸಂಸ್ಕೃತ, ವೇದ ಮುಂತಾದ ಧಾರ್ಮಿಕ ಸಾಹಿತ್ಯ ಓದಲು ಅವಕಾಶವಿತ್ತು. ಇದರಿಂದ ಶಿವರಾತ್ರಿ ರಾಜೇಂದ್ರರ ಜ್ಞಾನ ಇನ್ನೂ ಹೆಚ್ಚಾಗುತ್ತವೆಂದು ಅವರ ಗುರುಗಳು ಭಾವಿಸಿದ್ದರು. ಆದರೆ ಅವರನ್ನು ಮೈಸೂರಿಗೆ ಕಳುಹಿಸುವ ಮುನ್ನ ಒಂದು ಮುಖ್ಯವಾದ ಕಾರ್ಯ ನಡೆಯಬೇಕಿತ್ತು ಅಂದರೆ ಶಿವರಾತ್ರಿ ರಾಜೇಂದ್ರರಿಗೆ ಆದಷ್ಟು ಬೇಗ ಸನ್ಯಾಸ ದೀಕ್ಷೆ ಕೊಡಬೇಕು. ಅವರನ್ನು ಮುಂದಿನ ಜಗದ್ಗುರುಗಳೆಂದು ನಿಯೋಜಿಸಬೇಕು. ಅದರಿಂದ ಅವರ ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಿನ ಉತ್ಸಾಹ ಬರುತ್ತದೆ. ಹೀಗೆಲ್ಲ ಶಿವರಾತ್ರಿ ರಾಜೇಂದ್ರರ ಗುರುಗಳು ಆಲೋಚಿಸುತ್ತಿದ್ದರು. ಶಿವರಾತ್ರಿ ರಾಜೇಂದ್ರರು ಸನ್ಯಾಸ ದೀಕ್ಷೆ ಸ್ವೀಕರಿಸಿದಾಗ ಅವರಿಗೆ ಹನ್ನೆರಡು ವರ್ಷಗಳಷ್ಟೆ. ಅವರ ಪಟ್ಟಾಧಿಕಾರ ಮಹೋತ್ಸವ ಬಹಳ ಅದ್ದೂರಿಯಾಗಿ ನಡೆಯಿತು ಈ ಸಮಾರಂಭ ನಡೆದುದು 1928ರಲ್ಲಿ ಆ ಸಮಾರಂಭಕ್ಕೆ ಮಠಾಧಿಪತಿಗಳು, ಸ್ವಾಮಿಗಳು ಸಾಧು

ಸಂತರೆಂದು ನೂರಾರು ಜನರು ಬಂದಿದ್ದರು. ಇದಾದ ಮೇಲೆ ಶಿವರಾತ್ರಿ ರಾಜೇಂದ್ರರು ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದರು. ಅವರ ಸಹಾಯಕ್ಕೆಂದು ಶಿವಪ್ರಭುಸ್ವಾಮಿಗಳೆಂಬ ಮತ್ತೊಬ್ಬರು ಸ್ವಾಮಿಗಳು ಬಂದರು.

ಶಿವರಾತ್ರಿ ರಾಜೇಂದ್ರರಿಗೆ ಶಿಕ್ಷಣ ನೀಡಲು ಆ ಕಾಲದ ಪ್ರಸಿದ್ಧ ವಿದ್ವಾಂಸರು ನೇಮಕವಾದರು. ಸಂಸ್ಕೃತದ ಜೊತೆಗೆ ಕನ್ನಡ ಮತ್ತು ಇಂಗ್ಲಿಷ್ ಕಲಿಯಲು ವ್ಯವಸ್ಥೆಯಾಯಿತು. ಶಿವರಾತ್ರಿ ರಾಜೇಂದ್ರರು ಮುಂದೆ ಜಗತ್ತನ್ನೇ ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡರು. ಶಿವರಾತ್ರಿ ರಾಜೇಂದ್ರರಿಗೆ ಮಾತ್ರ ತಾವೊಬ್ಬರು ವಿದ್ಯಾವಂತರಾದರೆ ಸಾಕೆ? ತಾವೊಬ್ಬರು ಉದ್ಧಾರವಾದರೆ ಸಾಕೆ? ಎಂಬ ಪ್ರಶ್ನೆಗಳು ಕಾಡತೊಡಗಿದವು. ತಾವೊಬ್ಬರು ಮಠಾಧಿಪತಿಗಳು ಸಕಲರ ಉದ್ಧಾರಕ್ಕೆ ಶ್ರಮಿಸುವುದೇ ಒಬ್ಬ ನಿಜವಾದ ಗುರುವಿನ ಸಂಕಲ್ಪವಾಗಬೇಕು ಎಂದೆಲ್ಲ ಅವರು ಚಿಂತಿಸತೊಡಗಿದರು. ಶಿವರಾತ್ರಿ ರಾಜೇಂದ್ರರು 1930ರಲ್ಲಿ ಮೈಸೂರಿಗೆ ಬಂದರೆಂದು ತಿಳಿಯುತ್ತದೆ. ಬ್ರಿಟಿಷರ ಆಳ್ವಿಕೆಯಲ್ಲಿ ದೇಶ ಆರ್ಥಿಕವಾಗಿ ಅತ್ಯಂತ ಬಡವಾಗಿತ್ತು ಇದರ ಜೊತೆಗೆ ಜನರಲ್ಲಿ ಅನಕ್ಷರತೆ ಮತ್ತು ಅಜ್ಞಾನ ಬೇರೆ, ಎಲ್ಲಿ ಬಡತನ ಮತ್ತು ಅನಕ್ಷರತೆ ಇರುತ್ತದೊ ಆ ದೇಶ ಮುಂದುವರಿಯುವುದಿಲ್ಲ. ಭಾರತದ ಸ್ಥಿತಿಗತಿಯೂ ಹಾಗೆಯೇ ಆಗಿತ್ತು. ಇದನ್ನು ಸೂಕ್ಷ್ಮ ಮತಿಗಳೂ ಮತ್ತು ಮೃದುಹೃದಯರೂ ಆಗಿದ್ದ ಶಿವರಾತ್ರಿ ರಾಜೇಂದ್ರರು ಬಹುಬೇಗ ಅರ್ಥಮಾಡಿಕೊಂಡರು.

ದೇಶ ಉದ್ಧಾರವಾಗಬೇಕಾದರೆ ಎಲ್ಲರೂ ವಿದ್ಯಾವಂತ ರಾಗಬೇಕು ಆಗ ಮಾತ್ರ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಬರುತ್ತದೆಂದು ಶಿವರಾತ್ರಿ ರಾಜೇಂದ್ರರು ಅರಿತರು. ವಿದ್ಯಾಪ್ರಸಾರವೇ ತಮ್ಮ ಬಾಳಿನ ಗುರಿಯಾಗಬೇಕೆಂದು ತೀರ್ಮಾನಿಸಿದರು. ಅದರಲ್ಲೂ ಬಡವರು ಮತ್ತು ದೀನದಲಿತರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಕಂಕಣಬದ್ಧರಾದರು. ಅದಕ್ಕಾಗಿ ತಮ್ಮ ವಿದ್ಯಾಭ್ಯಾಸವನ್ನೇ ಬಲಿಕೊಟ್ಟರು. ಶಿವರಾತ್ರಿ ರಾಜೇಂದ್ರರ ಉದ್ದೇಶವು ಸಮಾಜದ ಉದ್ಧಾರವೇ ತಮ್ಮ ಬದುಕಿನ ಗುರಿ ಎಂದು ತೀರ್ಮಾನಿಸಿ ಕಾರ್ಯೋನ್ಮುಖರಾದರು.

ಶಿವರಾತ್ರಿ ರಾಜೇಂದ್ರರಲ್ಲಿ ಇಂತಹ ಅಪೂರ್ವ ಬದಲಾವಣೆಗಳಾಗಲು ಅವರ ಮಾನವೀಯ ಗುಣಗಳೇ ಕಾರಣ. ಅವರದು ವಯಸ್ಸಿಗೆ ಮೀರಿದ ಗ್ರಹಣಶಕ್ತಿ, ಜೊತೆಗೆ ದಯೆ, ಕರುಣೆ ಮತ್ತು ವಾತ್ಸಲ್ಯಗಳೇ ತುಂಬಿದ ಹೃದಯವಂತರು ಸಕಲ ಜೀವಿಗಳನ್ನು ಪ್ರೀತಿಸುವ ಚೇತನ ಅವರದು. ವಿದ್ಯಾರ್ಥಿ ಶಿವರಾತ್ರಿ ರಾಜೇಂದ್ರರಿಗೆ ಅವರ ಗುರುಗಳು ಅಗತ್ಯವಾದ ಎಲ್ಲ ಅನುಕೂಲಗಳನ್ನು ಒದಗಿಸಿದ್ದರು. ಅವರ ಊಟೋಪಚಾರಕ್ಕೆಂದು ದವಸಧಾನ್ಯ ತರಕಾರಿ ಸಹ ಸುತ್ತೂರಿನಿಂದ ಬರುತ್ತಿತ್ತು. ಅವರಿಗೆ ಯಾವುದಕ್ಕೂ ಕೊರತೆಯಿರಲಿಲ್ಲ. ಆದರೆ ಶಿವರಾತ್ರಿ ರಾಜೇಂದ್ರರಿಗೆ ಆದುದೇ ಬೇರೆ! ತಾವು ಓದಿ ವಿದ್ಯಾವಂತರಾಗಲು ಎಷ್ಟೆಲ್ಲಾ ಅನುಕೂಲಗಳಿವೆ, ಆದರೆ ಇದೇ ಮೈಸೂರಿನಲ್ಲಿ ನೂರಾರೂ ವಿದ್ಯಾರ್ಥಿಗಳಿಗೆ ಒಂದು ಹೊತ್ತಿನ ಊಟಕ್ಕೂ ವ್ಯವಸ್ಥೆಯಿಲ್ಲವಲ್ಲ, ಈ ವಿದ್ಯಾರ್ಥಿ ಯುವಜನರೇ ತಾನೆ ನಾಳೆ ರಾಷ್ಟ್ರ ನಿರ್ಮಾಣ ಮಾಡಬೇಕಾದವರು? ಇವರ ಸ್ಥಿತಿಗತಿಗಳು ಸುಧಾರಿಸದ ಹೊರತು ಇವರು ಚೆನ್ನಾಗಿ ಓದಲು ಸಾಧ್ಯವೆ? ಎಂಬಂತಹ ಪ್ರಶ್ನೆಗಳು ಅವರಿಗೆ ಎದುರಾದವು. ಆ ಕೂಡಲೆ ಅವರಿಗೆ ಉತ್ತರವೂ ದೊರಕಿತ್ತು. ಶಿವರಾತ್ರಿ ರಾಜೇಂದ್ರರು ಆ ದಿನವೇ ಮೊದಲ ಹೆಜ್ಜೆ ಇಟ್ಟರು. ಅದರ ಪ್ರಕಾರ ನಾಲ್ಕಾರು ಮಂದಿ ಬಡ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಿದರು. ಅಂದರೆ ತಾವಿದ್ದ ವಸತಿಯಲ್ಲೆ ಅವರಿಗೂ ಊಟ ಆ ವಿದ್ಯಾರ್ಥಿಗಳ ಯೋಗಕ್ಷೇಮ ಈಗ ಶಿವರಾತ್ರಿ ರಾಜೇಂದ್ರರದು. ಹೀಗೆ ಸುತ್ತೂರು ಮಠದ ಮೊದಲ ಪ್ರಸಾದನಿಲಯ ಮೈಸೂರಿನಲ್ಲಿ ಆರಂಭವಾಯಿತು. ಶಿವರಾತ್ರಿ ರಾಜೇಂದ್ರರು ಈ ರೀತಿ ತಾವಿದ್ದ ಕಡೆಯೇ ಒಂದು ಹಾಸ್ಟೆಲ್ ತೆರೆದೇಬಿಟ್ಟರು ಶಿವರಾತ್ರೀಶ್ವರರಿಗೆ ತಮ್ಮ ಮಠ ದೇಶಸೇವೆ ಮಾಡುವ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಟ್ಟಿತು. ತಮ್ಮ ಶಿಷ್ಯರ ಯೋಜನೆಯನ್ನು ನಿಜಕ್ಕೂ ಮೆಚ್ಚಿಕೊಂಡಿದ್ದರು ಹೀಗೆ ಸುತ್ತೂರು ಮಠ ತನ್ನ ಮೊದಲ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿತು. ಆ ಮೂಲಕ ಅದು ವಿದ್ಯಾಕ್ಷೇತ್ರಕ್ಕೆ ಕಾಲಿಟ್ಟಿತು. ಆ ನಂತರದ ಒಂದೆರಡು ವರ್ಷಗಳಲ್ಲೆ ವಿದ್ಯಾರ್ಥಿನಿಲಯ ದೊಡ್ಡದಾಯಿತು. ಸುಮಾರು 1942ರ ವೇಳೆಗೆ ವಿದ್ಯಾರ್ಥಿ

ನಿಲಯದಲ್ಲಿ ಮೂರುನೂರು ಮಂದಿ ವಿದ್ಯಾರ್ಥಿಗಳಿದ್ದರೆಂದು ತಿಳಿಯುತ್ತದೆ. ಶ್ರೀಗಳವರ ಆಶ್ರಯ ಕೇಳಿಕೊಂಡು ಯಾವ ವಿದ್ಯಾರ್ಥಿಯೆ ಬರಲಿ ಆ ವಿದ್ಯಾರ್ಥಿ ಯಾವ ಜಾತಿ ಮತಕ್ಕೆ ಸೇರಿರಲಿ ಆತನಿಗೆ ಶಿವರಾತ್ರಿ ರಾಜೇಂದ್ರರ ಶ್ರೀರಕ್ಷೆ ದೊರಕುತ್ತಿತ್ತು. ಆದರೆ ಅಷ್ಟು ಮಂದಿ ವಿದ್ಯಾರ್ಥಿಗಳಿಗೆ ಊಟ ಹಾಕುವುದು ಸಣ್ಣ ಕೆಲಸವೇನು? ಅದು ಆ ಕಾಲದಲ್ಲಿ ಹೀಗೆ ಸುಮಾರು 1945 ರ ವೇಳೆಗೆ ಸುತ್ತೂರು ಹಾಸ್ಟೆಲ್ ಎಂಬ ಹೆಸರು ನಾಡಿನಾದ್ಯಂತ ಪ್ರಸಿದ್ಧವಾಯಿತು. ಇದರೊಂದಿಗೆ ಶಿವರಾತ್ರಿ ರಾಜೇಂದ್ರರ ಕಷ್ಟಪರಂಪರೆಗಳೂ ಹೆಚ್ಚು ತೊಡಗಿದುವು 1950ರ ವೇಳೆಗೆ ಮೈಸೂರಿನಲ್ಲಿ ಮೂರು ವಿದ್ಯಾರ್ಥಿನಿಲಯಗಳು ಆರಂಭವಾದುದು. ಅನೇಕರೊಟಿ, ಕ್ಯಾತನಹಳ್ಳಿ ಹಾಸ್ಟೆಲ್ ಮತ್ತು ಮೇನ್ ಬಿಲ್ಡಿಂಗ್ ಇವೇ ಆ ಮೂರು ವಿದ್ಯಾರ್ಥಿನಿಲಯಗಳು ಇಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಂದ ಹಿಡಿದು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳವರೆಗೂ ಅವಕಾಶವಾಯಿತು. ಹಿಂದುಳಿದ ಪ್ರದೇಶದಲ್ಲಿದ್ದ ಚಾಮರಾಜನಗರದ ಹಾಸ್ಟೆಲ್ ಕೂಡ ವಿದ್ಯಾರ್ಥಿಗಳಿಂದ ತುಂಬಿಕೊಂಡಿತ್ತು. ಇದೇ ವೇಳೆಯಲ್ಲಿ ಕೃಷ್ಣರಾಜನಗರ, ಯಳಂದೂರು, ತಿರುಮಕೂಡಲು ನರಸೀಪುರ ಮತ್ತು ಸುತ್ತೂರಿನಲ್ಲಿಯೂ ವಿದ್ಯಾರ್ಥಿನಿಲಯಗಳು ಆರಂಭವಾದುವು ಹೀಗೆ ಶಿವರಾತ್ರಿ ರಾಜೇಂದ್ರರು ಉಚಿತ ವಿದ್ಯಾರ್ಥಿನಿಲಯಗಳ ಒಂದು ಸರಮಾಲೆಯನ್ನು ತೆಗೆದರು. ಓದಿದರೆ ಸುತ್ತೂರು ಹಾಸ್ಟೆಲ್ ವಿದ್ಯಾರ್ಥಿಯಾಗಿ ಓದಬೇಕು ಎಂಬ ನಾಣ್ನುಡಿ ಹುಟ್ಟಿಕೊಂಡಿತ್ತು. ಸುಮಾರು 1950ರ ವೇಳೆಗೆ ಶಿವರಾತ್ರಿ ರಾಜೇಂದ್ರರ ಆಲೋಚನೆಗಳು ಮತ್ತೊಂದು ದಿಕ್ಕಿನಲ್ಲಿ ಹರಿಯತೊಡಗಿದ್ದವು. ಅವರಿಗೆ ತಮ್ಮ ಸೇವಾಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಬಯಕೆಯಾಯಿತು ಅಂದರೆ ವಿದ್ಯಾರ್ಥಿನಿಲಯಗಳ ಜೊತೆಗೆ ಶಾಲಾ ಕಾಲೇಜುಗಳನ್ನು ತೆರೆಯುವ ಆಲೋಚನೆಯಾಯಿತು. ಹಾಗೆ ಮಾಡುವುದರಿಂದ ಅಸಂಖ್ಯಾತ ವಿದ್ಯಾಕಾಂಕ್ಷಿಗಳಿಗೆ ಶಿಕ್ಷಣವನ್ನು ನೀಡಬಹುದೆಂಬ ಚಿಂತನೆ ಅವರದು. ಇದರ ಫಲವಾಗಿ 1954ರಲ್ಲಿ ಅವರು ಪ್ರಪ್ರಥಮ ಪ್ರೌಢಶಾಲೆಯನ್ನು ತೆರೆದರು. ಅದು ಮೈಸೂರಿನ ರಾಮಾನುಜ ರಸ್ತೆಯಲ್ಲಿ ಆರಂಭವಾಯಿತು. ಆ ವೇಳೆಗೆ ಒಂದೆರಡು ಸಂಸ್ಕೃತ ಮತ್ತು ವೇದ ಪಾಠಶಾಲೆಗಳೂ ಆರಂಭವಾಗಿದ್ದವು. ಇದನ್ನೆಲ್ಲಾ ಸಮರ್ಥವಾಗಿ ನಡೆಸಿಕೊಂಡು ಹೋಗಲು ಒಂದು ಆಡಳಿತ ಕೇಂದ್ರದ ಅವಶ್ಯಕತೆ ಕಂಡುಬಂದಿತು. ಇದಕ್ಕನುಗುಣವಾಗಿ 1954ನೇ ವರ್ಷದಲ್ಲಿಯೆ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವೂ ಅಸ್ತಿತ್ವಕ್ಕೆ ಬಂದಿತು. ಈ ಮಹಾವಿದ್ಯಾಪೀಠದ ಅಧ್ಯಕ್ಷರಾಗಿ ಶಿವರಾತ್ರಿ ರಾಜೇಂದ್ರರು ಆಧುನಿಕ ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶ ಮಾಡಿದುದು ಒಂದು ಐತಿಹಾಸಿಕ ಘಟನೆಯಾಯಿತು.

ಆರಂಭದಿಂದ ಹಿಡಿದು ಅವರು ಲಿಂಗೈಕ್ಯರಾಗುವವರೆಗೂ ಶಿವರಾತ್ರಿ ರಾಜೇಂದ್ರರ ಬದುಕು ಅತ್ಯಂತ ಕ್ರಿಯಾಶೀಲವಾಗಿತ್ತು. ಅವರದು ಬಿಡುವಿಲ್ಲದ ದಿನಚರಿ ಪ್ರತಿದಿನ ಬೆಳಿಗ್ಗೆ 4 ಗಂಟೆಗೆ ಏಳುವುದರೊಂದಿಗೆ ಅವರ ದಿನಚರಿಯ ಆರಂಭ. ಬೆಳಗಿನ ಸ್ನಾನ ಪೂಜೆ ಮತ್ತು ಪ್ರಸಾದ ಮುಗಿಸಿಕೊಂಡು 8.30ಕ್ಕೆ ತಮ್ಮ ಕಾಯಕ ಆರಂಭಿಸುತ್ತಿದ್ದರು. ಮತ್ತೆ ಅವರು ವಿಶ್ರಾಂತಿಗೆಂದು ತೆರಳುತ್ತಿದ್ದುದು ರಾತ್ರಿ 10 ಗಂಟೆಯ ನಂತರ ಅಂದರೆ ಅವರು ಪ್ರತಿದಿನ 16 ರಿಂದ 18 ಗಂಟೆಗಳವರೆಗೆ ಕಾರ್ಯನಿರತರಾಗಿರುತ್ತಿದ್ದರು. ಈ ಅವಧಿಯಲ್ಲಿ ಅವರದು ವಿಭಿನ್ನ ರೀತಿಯ ಕೆಲಸಕಾರ್ಯಗಳು ವಿದ್ಯಾರ್ಥಿನಿಲಯಗಳ ಆಡಳಿತ ಕಾಲೇಜುಗಳ ಆಡಳಿತ ಮತ್ತು ಶಾಲೆಗಳ ಆಡಳಿತವೆಂದು ಸ್ವತಃ ಅವರೇ ನೋಡಿಕೊಳ್ಳುತ್ತಿದ್ದರು. ಶ್ರೀ ಶಿವರಾತ್ರಿ ರಾಜೇಂದ್ರರ ಜೀವಿತದ ಅವಧಿಯಲ್ಲಿ ಸುಮಾರು ಒಂದುನೂರು ಶಿಕ್ಷಣ ಸಂಸ್ಥೆಗಳು ಸ್ಥಾಪನೆಯಾದುವು ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಆರಂಭಿಸಿ ಅವರು ಮಾಡಿದ ಉಪಕಾರ ಮರೆಯುವಂತಹುದೆ ಅಲ್ಲ ಆ ಕಾಲದಲ್ಲಿ ಆಧುನಿಕ ವಿದ್ಯೆಯನ್ನು ಹಳ್ಳಿಯ ಬಡಜನರ ಮನೆಯ ಬಾಗಿಲಿಗೆ ಒಯ್ದರು. ತಾಲ್ಲೂಕು ಕೇಂದ್ರಗಳಲ್ಲಿ ಕಾಲೇಜುಗಳನ್ನು ತೆರೆದರು ಉಪಾಧ್ಯಾಯರ ತರಬೇತಿ ಸಂಸ್ಥೆಗಳನ್ನು ಆರಂಭಿಸಿದರು. ತಾಂತ್ರಿಕ ಶಿಕ್ಷಣಕ್ಕೆ ತಳಹದಿ ಹಾಕಿದರು. 1963ನೇ ವರ್ಷದಲ್ಲಿ ಮೈಸೂರಿನಲ್ಲಿರುವ ಶ್ರೀ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಆರಂಭವಾಯಿತು. ಅವರ ಬದುಕಿನ ಕೊನೆಯ ಹಂತದಲ್ಲಿ ಜಗದ್ಗುರು ಶ್ರೀ

ಶಿವರಾತ್ರೀಶ್ವರ ಮೆಡಿಕಲ್ ಕಾಲೇಜು ಮೈಸೂರಿನಲ್ಲಿ ಸ್ಥಾಪನೆಯಾಯಿತು. ಇದಕ್ಕೂ ಮುನ್ನವೆ 1970ರ ಆರಂಭದಲ್ಲಿ ಒಂದು ಆರೋಗ್ಯಕೇಂದ್ರವನ್ನು ತೆರೆದಿದ್ದರು. ಇದೇ ಮುಂದೆ ಜೆಎಸ್‌ಎಸ್ ಆಸ್ಪತ್ರೆಯ ಸ್ಥಾಪನೆಗೆ ಬುನಾದಿಯಾಯಿತು. ಅದೇ ಸಮಯದಲ್ಲಿ ಒಂದು ದೊಡ್ಡ ಆರೋಗ್ಯಕೇಂದ್ರವನ್ನು ತೆರೆದಿದ್ದರು. ಈ ನಡುವೆ ಅಂಗವಿಕಲರಿಗೆ ಬುದ್ಧಿಮಾಂದ್ಯರಿಗೆ ಮತ್ತು ಅಂಧರಿಗೆ ವಿವಿಧ ರೀತಿಯ ಶಾಲೆಗಳು ಮತ್ತು ಪಾಲಿಟೆಕ್ನಿಕ್ ಆರಂಭವಾಗಿದ್ದುವು ಹೀಗೆ ಶಿವರಾತ್ರಿ ರಾಜೇಂದ್ರರು ಸುತ್ತೂರು ಮಠದ ಕೀರ್ತಿ ಎಲ್ಲೆಲ್ಲಿಯೂ ಹಬ್ಬಲು ಕಾರಣರಾದರು. ಇಲ್ಲಿ ಓದಿದವರು ಪ್ರಪಂಚದ ಅನೇಕ ಕಡೆ ಹೋಗಿ ಕೆಲಸ ಮಾಡತೊಡಗಿದರು. ಹೀಗೆ ಶಿವರಾತ್ರಿ ರಾಜೇಂದ್ರರು ಲಕ್ಷಾಂತರ ಮಂದಿಗೆ ಗುರುಗಳಾದರು, ತಾಯಿಯಾದರು, ತಂದೆಯಂತೆ ರಕ್ಷಕರಾದರು. ಇದರೊಂದಿಗೆ ಸುತ್ತೂರು ಮಠ ನಿಜವಾಗಿಯೂ ಒಂದು ಮಹಾವಿದ್ಯಾ ಪೀಠವೇ ಆಯಿತು. ಅವರು ತಾ. 6-12-1986 ಶನಿವಾರ ಲಿಂಗೈಕ್ಯರಾದರು. ಸುತ್ತೂರು ಕಾಡುಮಠದಲ್ಲಿ ಶಿವರಾತ್ರಿ ರಾಜೇಂದ್ರರ ಸಮಾಧಿಯಿದೆ.

## ಗಮನವೇ ಧ್ಯಾನ



◆ ವಿಜಯ ಎಸ್.
ದ್ವಿತೀಯ ಬಿ.ಕಾಂ.

ಒಂದು ಊರಿನಲ್ಲಿ ಒಬ್ಬ ಕುಂಬಾರನಿದ್ದ, ಆತನೊಂದು ದಿನ ಕುಂಡವನು ಮಾಡುವ ಕೆಲಸದಲ್ಲಿ ಮಗ್ನನಾಗಿದ್ದ. ಚಕ್ರವನ್ನು ತಿರುಗಿಸುತ್ತಾ ಮಣ್ಣಿನ ಮುದ್ದೆಯನ್ನು ಅಂದವಾದ ಕುಂಡವನ್ನಾಗಿ ಮಾಡಲು ಕೈಗಳನ್ನು ನಿಪುಣತೆಯಿಂದ ಆಡಿಸುತ್ತಿದ್ದ. ಅಷ್ಟರಲ್ಲಿ ಒಬ್ಬ ಹೊಸ ಮನುಷ್ಯ ಅಲ್ಲಿಗೆ ಬಂದು 'ಇಲ್ಲಿ ಡಾಕ್ಟರ್ ವೇಣು ಮಾಧವ ಮನೆ ಎಲ್ಲಿ?' ಎಂದು ಕೇಳಿದ.

ಕುಂಬಾರ ತನ್ನ ಕೆಲಸದಲ್ಲಿ ಮಗ್ನನಾಗಿದ್ದಾನೆ. ಕನಿಷ್ಟ ದೊಡ್ಡ ಮನುಷ್ಯನ ಕಡೆಗೆ ಕೂಡ ನೋಡಲಿಲ್ಲ, ಅವನು ಮತ್ತೆ 'ನೋಡಪ್ಪಾ ಮಿಮಿಕ್ರಿ ಮಾಡುವ ಡಾಕ್ಟರ್ ವೇಣುಮಾಧವರ ಮನೆ ಎಲ್ಲಿ?' ಸ್ವರ ಎತ್ತರಿಸಿ ಕೇಳಿದ ಅವನು ನೋಡಲಿಲ್ಲ ಬಹುಶಃ ಕಿವುಡನಿರಬೇಕೆಂದು ಮನುಷ್ಯ ಅಲ್ಲಿಂದ ಹೊರಟ. ನಿಮಿಷದ ನಂತರ ಕುಂಬಾರ ತನ್ನ ಕೆಲಸವನ್ನು ಪೂರೈಸಿ ಅವನನ್ನು ಗಟ್ಟಿಯಾಗಿ ಕೂಗಿದ. ಆಶ್ಚರ್ಯದಿಂದ ಆತ ಹಿಂದೆ ಬಂದ.

'ಇಷ್ಟು ಹೊತ್ತು ನನ್ನನೇನೋ ಕೇಳಿದಿರಿ' ಎಂದು ಕುಂಬಾರ ಕೇಳಿದ.

'ಗಂಟಲು ಬಿರಿಯುವಂತೆ ಕೇಳಿದೆ ಡಾಕ್ಟರ್ ಮನೆ ಎಲ್ಲಿ?' ಎಂದು ಮತ್ತೆ ಕೇಳಬೇಕಾ' 'ಅಯ್ಯ ಇಷ್ಟು ಹೊತ್ತು ನಾನು ಈ ಕುಂಡವನ್ನು ಅಂದವಾಗಿ ಮಾಡುವುದರಲ್ಲಿ ಮುಳುಗಿದ್ದೆ. ಆಗ ನನಗೆ ನಿಮ್ಮ ಒಂದು ಮಾತು ಕೂಡ ಕೇಳಿಸಲಿಲ್ಲ' ಎಂದ. ಓದಿಕೊಳ್ಳುವವರು ನೆನಪಿಡಬೇಕಾದ ಒಳ್ಳೆಯ ವಿಷಯವಿದೆ ನಾವು ಓದಿಕೊಳ್ಳುವ ಕೊಠಡಿಯಲ್ಲಿ ರೇಡಿಯೋ ಹಾಕಿದ್ದರೂ ಮನೆಯವರು ಮಾತನಾಡುತ್ತಿದ್ದರೂ ವಾಹನಗಳ ಸಪ್ಪಳವಿದ್ದರೂ ನಮ್ಮ ಕೆಲಸದ ಮೇಲೆ ಮಾತ್ರ ಗಮನವಿಡಬೇಕು. ಬಸ್ ಡ್ರೈವರ್ ಬಸ್ಸಿನಲ್ಲಿನ ಮಾತುಗಳು ಕೇಳುತ್ತಿರುವ ಹಾಡುಗಳು ರಸ್ತೆಯ ಮೇಲಿನ ರೋಡಿನ ವಾಹನಗಳ ಚಲನೆ ಹೀಗೆ ಏನಿದ್ದರೂ ತನ್ನ ಬಸ್ಸನ್ನು ಏಕಾಗ್ರತೆಯಿಂದ ನಡೆಸಿ ಗಾಮ್ಯಸ್ಥಾನಕ್ಕೆ ಸೇರಿಸುತ್ತಾನೆ ಹೀಗೆ ನಾವು ಓದಿಕೊಂಡು ನಾವು ಓದುವ ವಿಷಯವನ್ನು ಆಸಕ್ತಿಯಿಂದ ಶ್ರದ್ಧೆಯಿಂದ ಗಮನವಿಟ್ಟು ಓದಿದ್ದರೆ ನಮ್ಮ ಸುತ್ತಮುತ್ತ ನಡೆಯುವ ಯಾವ ಘಟನೆಗಳು ನಮಗೆ ಗೊತ್ತಾಗುವುದಿಲ್ಲ ಜೊತೆಗೆ ನಮ್ಮ ಏಕಾಗ್ರತೆ ಕೂಡ ಹೆಚ್ಚುತ್ತದೆ.



# ಗುರುವಿನ ಪಾತ್ರ ಮತ್ತು ಅಗತ್ಯತೆ

◆ ನಂದಿನಿ ಕೆ.ಎಂ.
ದ್ವಿತೀಯ ಬಿ.ಎಂ. (ಎಚ್.ಇ.ಕೆ.)

ವಿದ್ಯಾರ್ಥಿಗಳ ಗುರಿ ಮುಟ್ಟಿಸಲು ಮತ್ತು ಅವರ ಜ್ಞಾನ ವಿಸ್ತರಿಸಲು ಗುರುವಿನ ಪಾತ್ರ ತುಂಬಾ ಅಗತ್ಯವಾಗಿದೆ. ಅದಕ್ಕೆ ಪುರಾತನರು ಹೇಳುವಂತೆ "ಮುಂದೆ ಗುರಿ ಇರಬೇಕು ಹಿಂದೆ ಗುರು ಇರಬೇಕು" ಎಂದು ಹೇಳುತ್ತಾರೆ. ಗುರುಗಳು ತಾಯಿಗಿಂತ ಮೇಲ್ಮಟ್ಟದಲ್ಲಿರುತ್ತಾರೆ. ಏಕೆಂದರೆ ತಾಯಿ ಹಡೆದರೆ ಅದಕ್ಕೆ ಜ್ಞಾನ ಅರಿವು ಎಂಬ ಮಂತ್ರಾಕ್ಷರವನ್ನು ಬಿತ್ತುವುದು ಗುರು. ಜೀವನದ ಸಂಗತಿಗಳ ಬಗ್ಗೆ ಅರಿವು ಮೂಡಿಸುವುದರಲ್ಲಿ ಗುರುಗಳ ಪಾತ್ರ ಮಹತ್ವದ್ದಾಗಿದೆ. ವಿದ್ಯಾರ್ಥಿಗಳು ಕೆಟ್ಟ ದಾರಿಯನ್ನು ಹಿಡಿದರೆ ಅವರಿಗೆ ಬುದ್ಧಿ ಮಾತು ಹೇಳಿ ಅವರ ಮನಸ್ಸಿಗೆ ನಾಟುವಂತೆ ಸೂಕ್ಷ್ಮವಾಗಿ ತಿಳಿಸಿ ಹೇಳಿ ಅವರನ್ನು ಸರಿದಾರಿಗೆ ತರುವ ಪಾತ್ರವನ್ನು ಗುರುಗಳು ಮಾಡುತ್ತಾರೆ. "ಅಜ್ಞಾನದಿಂದ ಜ್ಞಾನದ ಕಡೆಗೆ ಕತ್ತಲೆಯಿಂದ ಬೆಳಕಿನಡೆಗೆ ಕರೆದೊಯ್ಯುವವರೇ ಗುರುಗಳು. ಜಗತ್ತಿನ ಸತ್ಯ-ಸುಳ್ಳು ಸಂಗತಿಗಳು ಕಷ್ಟ-ಸುಖಗಳ ಬಗ್ಗೆ ಸೂಕ್ಷ್ಮವಾಗಿ ತಿಳಿಸಿ ಹೇಳುತ್ತಾರೆ.

**ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ**
**ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ**

ಆಗಿನ ಕಾಲದಲ್ಲಿ ವಿದ್ಯಾರ್ಥಿಗಳು ಗುರುಗಳನ್ನು ದೇವರಿಗೆ ಹೋಲಿಸಿ ಅವರಿಗೆ ಭಕ್ತಿ ಭಾವನೆ ತೋರುತ್ತಿದ್ದರು. ಆಗಿನ ಕಾಲದ ವಿದ್ಯಾರ್ಥಿಗಳು "ಗುರುವೇ ನಮಃ" ಎಂದು ಹೇಳಿದರೆ ಈಗಿನ ಕಾಲದ ವಿದ್ಯಾರ್ಥಿಗಳು ಗುರುವೇ ಏನ್ ಮಹಾ ಎನ್ನುವ ದುಸ್ಥಿತಿ ಒದಗಿ ಬಂದಿದೆ. ಹೀಗೆ ಮಕ್ಕಳ ಸರ್ವೋತೋಮುಖ ಬೆಳವಣಿಗೆಗೆ ಗುರುಗಳು ಮಹತ್ವವಾದ ಪಾತ್ರ ವಹಿಸಿದ್ದಾರೆ. ಗುರುಗಳು ಮಾಡುವ ಸಹಕಾರ ಜನ್ಮ ಜನ್ಮಾಂತರಕ್ಕೂ ಮೋಕ್ಷಕ್ಕೂ ಸಂಬಂಧಪಡುವ ಉಪಕಾರವಾಗಿದೆ ವಿದ್ಯಾರ್ಥಿಗಳ ತಪ್ಪನ್ನು ತಿದ್ದಿ ಅವರನ್ನು ಸರಿದಾರಿಗೆ ತರಬೇಕೆ ಹೊರತು ಅದರ ತಪ್ಪನ್ನು ಪ್ರೋತ್ಸಾಹಿಸುವುದಿಲ್ಲ. ಇದು ಗುರುವಿನ ಕರ್ತವ್ಯವೂ ಅಲ್ಲ. ತಂದೆ ನಾಶವಾಗುವ ದೇಹವನ್ನು ಸಿರಿ-ಸಂಪತ್ತನ್ನು ನೀಡಿದರೆ ಗುರುವು ವಿದ್ಯಾರ್ಥಿಗಳಿಗೆ ಅಮರ ಸಿರಿಯನ್ನೇ, ದಿವ್ಯಜ್ಞಾನ ಜೀವನವನ್ನು ಕರುಣಿಸುತ್ತಾರೆ. ಪ್ರತಿಯೊಬ್ಬ ಯಶಸ್ಸಿನ ಹಿಂದೆ ಗುರುವಿನ ಪಾತ್ರ ಅವಶ್ಯಕತೆ ತುಂಬಾ ಇದೆ. ಯಾವುದೇ ವಿದ್ಯಾರ್ಥಿ ಸಾಧನೆ ಸಾಧಿಸುವ ಉತ್ಸಾಹ, ಹುಮ್ಮಸ್ಸು ಇದ್ದು ಅವರಿಗೆ ಇನ್ನಷ್ಟು ಪ್ರೋತ್ಸಾಹ ನೀಡಿ ಅವರ ಪ್ರತಿಭೆಯನ್ನು ಹೊರಹೊಮ್ಮುವಂತೆ, ಜಗತ್ತಿಗೆ ತೋರಿಸುವಂತೆ ಪ್ರೋತ್ಸಾಹ ನೀಡುತ್ತಾರೆ. ಈ ಗುರುಗಳು, ತಮ್ಮ ಕುಟುಂಬದ ನೋವು ಮನಸ್ಸಿನ ನೋವನ್ನು ಮರೆತು ಅವರ ಪ್ರತಿಭೆ, ಗುರಿ - ಸಾಧನೆ ನೋಡಿ ತಂದೆ-ತಾಯಿಗಿಂತಲೂ ಹೆಚ್ಚಿನ ಸಂತೋಷವನ್ನು ಗುರುಗಳು ಅನುಭವಿಸುತ್ತಾರೆ ಹೆಮ್ಮೆಯಿಂದ ಹೊಗಳಿ ಇತರರಿಗೂ ಮಾರ್ಗದರ್ಶನವಾಗಿ ಗುರುಗಳು ನೆರವಾಗುತ್ತಾರೆ. ಇತರರಿಗೂ ಉತ್ಸಾಹ - ಹುಮ್ಮಸ್ಸು ತುಂಬುತ್ತಾರೆ. ಯಾವುದೇ ಜಾತಿ, ಧರ್ಮ ಇತರರ ಬಗ್ಗೆ ತಾವು ಯಾವುದೇ ರೀತಿಯ ತಾರತಮ್ಯ ಮಾಡುವುದಿಲ್ಲ. ಇತರರು ಮಾಡಬಾರದು ಎಂದು ಸೂಕ್ಷ್ಮವಾಗಿ ತಿಳಿಸುತ್ತಾರೆ. ಇದಕ್ಕೆ ಉದಾಹರಣೆ: ಶಿವಾಜಿಗೆ ಮಾದರಿಯಾಗಿ ದಾದಾಜಿಕೊಂಡದೇವ, ಅರ್ಜುನ, ಏಕಲವ್ಯ ಇವರ ಗುರು ದ್ರೋಣಚಾರ್ಯ, ಇವರು ತಮ್ಮ ಶಿಷ್ಯ ಅರ್ಜುನನ ಮಾತನ್ನು ಕೇಳಿ ಏಕಲವ್ಯ ಕೀಳು ಜಾತಿ ಎಂದು ಅವರಿಗೆ ಕಲಿಸಿದ ಪಾಠ ಮರೆತು ಹೋಗಲಿ ಎಂದು ಶಾಪ ನೀಡಿ ಗುರುದಕ್ಷಿಣೆಯ ನೆಪವಾಗಿ ಹೆಬ್ಬರಳನ್ನು ನೀಡುವಂತೆ ಹೇಳಿದಾಗ ಮಾತಾಡದೆ ತಮ್ಮ ಗುರುವಿನ ಮಾತನ್ನು ಮೀರದೆ ಅವರ ಮಾತನ್ನು ತಿರಸ್ಕರಿಸದೆ ಅವರ ಮಾತಿಗೆ ಸಮ್ಮತಿಸಿ ಹೆಬ್ಬೆರಳನ್ನು ನೀಡಿದ ಇದರಿಂದ ಗುರು ದ್ರೋಣಚಾರ್ಯ ಪಶ್ಚಾತ್ತಾಪ ಅನುಭವಿಸಿದ ಪ್ರಸಂಗ ಇಲ್ಲಿದೆ. ಹೀಗೆ ಗುರು-ಶಿಷ್ಯರ ಸಂಬಂಧ ಈ ರೀತಿ ಇದೆ. ಆ ದ್ರೋಣನಿಗೆ ಇದ್ದಂತಹ ಭಕ್ತಿ

ಭಾವ ಈ ಚಿತ್ರಣದಲ್ಲಿ ಬಹಳ ಸೊಗಸಾಗಿ ಮೂಡಿದೆ.

**ದುಂಬಿಯ ಝುಂಕಾರ, ಮನಸ್ಸಿನ ಓಂಕಾರ**
**ತಾಯಿಯ ಮಮಕಾರ, ಸ್ನೇಹಿತರ ಪರೋಪಕಾರ**

ಗುರುವಿನ ಸಹಕಾರ ಇದ್ದರೆ ಬಾಳುವೇ ನೀ ನೂರಾರು ಕಾಲ, ಹೀಗೆ ಗುರುಗಳು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಧಾನ ಸ್ಥಾನವನ್ನು ಪಡೆದಿದ್ದಾರೆ.

## ಗುರು ನಮನ



◆ ಕೆ. ಜಗದಾಂಬ
ಪ್ರಥಮ ಬಿ.ಕಾಂ.

ನಿಸ್ವಾರ್ಥ ಮನುಷ್ಯ, ಜೀವನದ ಜ್ಯೋತಿ ಬಾಳಿಗೆ ಅರ್ಥ ನೀಡುವ ದೈವ ಅವರೇ "ಗುರುಗಳು" ಎಂದಿಗೂ ಗುರು ಸ್ಥಾನ ಬಹಳ ದೊಡ್ಡದು ಅದಕ್ಕೆ ಯಾರೂ ಬೆಲೆ ಕಟ್ಟಲಾಗದು ಇದಕ್ಕೆ ನಿದರ್ಶನವೇ ನಮ್ಮ ಸೌರಮಂಡಲದ ಗ್ರಹಗಳಲ್ಲಿ ಗುರುಗ್ರಹವೇ ದೊಡ್ಡದು ಜೀವನದಲ್ಲಿ ಕೇವಲ ವಿದ್ಯೆಯನ್ನು ಕಲಿಸುವವರು ಅಷ್ಟೆ ಗುರುಗಳಲ್ಲ ನಾವು ಹುಟ್ಟಿದಾಗ ನಮಗೆ ಭಾಷೆ ಕಲಿಸುವವರು ತಾಯಿ ಎನ್ನುವ ಗುರು, ಬಾಲ್ಯವಸ್ಥೆಯಲ್ಲಿ ಭಾವನೆ ತೋರಿಸುವವರು ಕುಟುಂಬ ಎಂಬ ಗುರು, ಬುದ್ಧಿ ಹೇಳುವ ಸ್ನೇಹಿತ ದಾರಿ ತೋರಿಸುವ ಶಿಕ್ಷಕ, ಕೊನೆಗೆ ಪ್ರೀತಿ ತೋರಿಸುವ ಮಕ್ಕಳಿಂದ ತಿಳಿದುಕೊಳ್ಳುತ್ತೇವೆ ಇವರೆಲ್ಲರೂ ನಮ್ಮ ಬಾಳಿನ ಗುರು ಸಮಾನರು.

ಗುರು ಎಂಬುವವರ ಮಹತ್ವ ದೊಡ್ಡದು ತಾಯಿಯೇ ಮೊದಲ ಗುರು ಎನ್ನುತ್ತಾರೆ. ಇಲ್ಲಿ ತಾಯಿಯ ತೂಕ, ಗುರುವಿನ ತೂಕ ಸಮಾನವಾದದ್ದು "ಗುರುವಿನ ಗುಲಾಮನಾಗುವ ತನಕ ಸಿಕ್ಕುವುದಿಲ್ಲ ಮುಕ್ತಿ" ಇದು ಹಿರಿಯರ ಮಾತು. ಈ ಮಾತಿನಂತೆ ನಾವು ಗುರುಗಳು ಉಪಕಾರಕ್ಕೆ ಪ್ರತಿ ಉಪಕಾರಮಾಡಿ ಅವರಿಗೆ ತೃಪ್ತಿ ಕೃತಜ್ಞತೆಯನ್ನು ನೀಡಬೇಕು. ಪ್ರತಿ ಉಪಕಾರವಾಗಿ ನಾವು ಸಮಾಜಕ್ಕೆ ಒಳ್ಳೆ ವ್ಯಕ್ತಿಯಾಗಿ ನಾವು ಸತ್ತರೂ, ನಾವು ಮಾಡಿದ ಕಾರ್ಯಗಳು ಚಿರಋಣಿಯಾಗಿರಬೇಕು ಇದು ಎಲ್ಲಾ ಗುರುಗಳ ಆಶಯ, ಇದರಿಂದ ನಮಗೆ ತಿಳಿಯುವುದು ಗುರುಗಳು ಅವರ ಶಿಷ್ಯರನ್ನು (ಅವರಿಂದ ಕಲಿತವರನ್ನು) ಅವರಿಗಿಂತ ದೊಡ್ಡ ಸ್ಥಾನದಲ್ಲಿ ನೋಡುವುದಕ್ಕೆ ಇಷ್ಟಪಡುತ್ತಾರೆ.

ಎಲ್ಲರ ಜೀವನದಲ್ಲೂ ಗುರು ಎಂಬ ವ್ಯಕ್ತಿ ಇದ್ದೇ ಇರುತ್ತಾರೆ ಅವ ಸೂರ್ಯನಿಲ್ಲದೇ ಜಗತ್ತು ಬೆಳಕು ಕಾಣಲು ಸಾಧ್ಯವಿಲ್ಲ ಹಾಗೇ ಗುರುಗಳಿಲ್ಲದೇ ಯಾವುದೇ ವ್ಯಕ್ತಿ ಉನ್ನತ ಮಟ್ಟಕ್ಕೆ ಬರಲು ಸಾಧ್ಯವಿಲ್ಲ ಎಂದಿಗೂ ಗುರಿ ಮುಂದೆ ಗುರು ಹಿಂದೆ ಇರುತ್ತಾರೆ. ಗುರು-ಶಿಷ್ಯರ ಸಂಬಂಧವೂ ಅತ್ಯಂತ ಅಪೂರ್ವವಾದದ್ದು ಉದಾ: ದ್ರೋಣಾಚಾರ್ಯರಿಗೆ ಗುರುದಕ್ಷಿಣೆಯಾಗಿ ಹೆಬ್ಬೆರಳನ್ನು ಕೊಟ್ಟಂತಹ ಏಕಲವ್ಯ, ಸ್ವಾಮಿ ವಿವೇಕಾನಂದರು - ರಾಮಕೃಷ್ಣ ಪರಮಹಂಸರು, 'ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರಾ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರಿ ಗುರುವೇ ನಮಃ' ಎಂದು ಹೇಳುತ್ತಿದ್ದೇವೆ.

ಕ್ರಮೇಣ ಅದರ ಬದಲೂ ಈಗ 'ಗುರು ಏನೋ ಮಹಾ' ಎಂದು ಹೇಳುತ್ತಾರೆ. ಯಾರು ಕದಿಯಲಾಗದ ಆಸ್ತಿಯನ್ನು ಕೊಟ್ಟಂತಹ ದಿಗಂತ ವ್ಯಕ್ತಿ ಗುರು ಇವರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು ಜೀವನದಲ್ಲಿ ಯಾರನ್ನು ಮರೆತರು ಗುರುವನ್ನು ಮರೆಯಬೇಡ.

## ಜ್ಞಾನ ಮತ್ತು ಶಿಕ್ಷಣ



◆ ಭಾವನಾ ಡಿ.
ಪ್ರಥಮ ಬಿ.ಎ. (ಎಚ್.ಇ.ಕೆ.)

ಮನುಷ್ಯನಿಗೆ ಜ್ಞಾನವೆಂಬುದು ತುಂಬಾ ಅವಶ್ಯಕ. ಜ್ಞಾನವೆಂಬ ಜ್ಯೋತಿ ಬೆಳಗದೆ ಪ್ರಪಂಚ ಬೆಳಗಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದಂತಹ ಜ್ಞಾನವನ್ನು ಹೊಂದಿರಬೇಕು. ಆಗಂತ ಅಜ್ಞಾನದಿಂದ ವರ್ತಿಸಬಾರದು. ವ್ಯಕ್ತಿಯು ಅಜ್ಞಾನದಿಂದ ವರ್ತಿಸುವುದು ಬೇರೆಯವರಿಗೆ ಅವರ ನಡವಳಿಕೆಯನ್ನು ತಿಳಿಸುತ್ತದೆ. ಹೀಗಾಗಿ ಯಾವುದೇ ವ್ಯಕ್ತಿಯು ಸಾಮಾನ್ಯ ಜ್ಞಾನವನ್ನಾದರು ಹೊಂದಿರಬೇಕು. ಆದ್ದರಿಂದ ಯಾವುದೇ ವ್ಯಕ್ತಿಯು ಸಂಪೂರ್ಣ ಜ್ಞಾನ ಹೊಂದಿದಾಗ ಮಾತ್ರ ಅವನು ಜ್ಞಾನಿಯಾಗುತ್ತಾನೆ. ಒಬ್ಬ ವ್ಯಕ್ತಿಯು ಜ್ಞಾನವನ್ನ ಹೊಂದಲು ಮುಖ್ಯವಾಗಿ "ಶಿಕ್ಷಣ" ಎಂಬುದು ಅತ್ಯವಶ್ಯಕವಾಗಿರಬೇಕು. ಮತ್ತು ಶಿಕ್ಷಣ ಇಲ್ಲದಿದ್ದರು ಸಹ ಕೆಲವರು ಜ್ಞಾನಿಗಳಾಗಿರುತ್ತಾರೆ. ಇಂತಹವರಿಗೆ ಹೋಲಿಸಿದರೆ ಶಿಕ್ಷಣವನ್ನು ಉತ್ತಮವಾಗಿ ಪಡೆದಿರುವವರು ಕೂಡ ಕೆಲವೊಮ್ಮೆ ಅಜ್ಞಾನಿಗಳಾಗಿ ವರ್ತಿಸುತ್ತಾರೆ. ಇವರು ಹೀಗೆ ವರ್ತಿಸಿದರೇ ಶಿಕ್ಷಣ ಪಡೆದವರಿಗೂ ಮತ್ತು ಶಿಕ್ಷಣ ಪಡೆದಿಲ್ಲದವರಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಹೀಗಾಗಿ "ತುಂಬಿದ ಕೊಡ ತುಳುಕುವುದಿಲ್ಲ" ಎನ್ನುವ ಹಾಗೇ ಸಂಪೂರ್ಣ ಜ್ಞಾನ ಹೊಂದಿರುವ ವ್ಯಕ್ತಿಯು ಯಾವತ್ತು ಅಹಂಕಾರದಿಂದ ವರ್ತಿಸುವುದಿಲ್ಲ. ಕೆಲವೊಮ್ಮೆ ವರ್ತಿಸಬಹುದಾಗಿರುತ್ತದೆ. ಆದರೆ ಅಲ್ಪಜ್ಞಾನಿಯಾದವನು ಪ್ರಪಂಚವನ್ನೇ ಅರಿತವನು, ಎಲ್ಲವೂ ನನ್ನಿಂದ ಸಾಧ್ಯ ಎಂದು ಅಹಂಕಾರದಿಂದ ವರ್ತಿಸುವನು.

ಮತ್ತೊಂದು ಕಡೆ "ವಿದ್ಯೆ ಎಂಬ ಹೂವಿಗೆ ವಿದ್ಯಾರ್ಥಿಯೇ ದುಂಬಿ" ಎಂಬ ಮಾತಿನಂತೆ ಹೂವಿನ ಮಕರಂದವನ್ನು ದುಂಬಿ ಹೇಗೆ ಸವಿಯುತ್ತದೆಯೋ ಅದೇ ರೀತಿ ವಿದ್ಯಾರ್ಥಿಯು ಕೂಡ ಶಿಕ್ಷಣದ ಸವಿಯನ್ನು ಸವಿದು ಹೆಚ್ಚು ಹೆಚ್ಚಾಗಿ "ಜ್ಞಾನ"ವನ್ನು ಪಡೆದುಕೊಳ್ಳಬೇಕು. ಜ್ಞಾನವವನ್ನು ಪಡೆದುಕೊಳ್ಳುವುದರಿಂದ "ವಿವೇಕಾನಂದರು ಚಿಕಾಗೋ ಸಮ್ಮೇಳನದಲ್ಲಿ ಮಾಡಿದ ಭಾಷಣದ ರೀತಿ" ವಿದೇಶಗಳಲ್ಲಿ ಬೋಧನೆಗಳನ್ನು ಮಾಡಿ, ಸ್ವದೇಶ ಗಳಲ್ಲಿಯೂ ಕೂಡ ಪ್ರಖ್ಯಾತಿಯನ್ನು ಪಡೆಯಬಹುದು.

ದೇವರು ನಮಗೆ ಜ್ಞಾಪಕ ಶಕ್ತಿಯನ್ನು ಕೊಟ್ಟಿರುವುದರ ಮೂಲಕ "ನಾವು ಜ್ಞಾನಾರ್ಜನೆಯನ್ನ" ಹೆಚ್ಚಿಸಿಕೊಳ್ಳಬಹುದು, ಆದರೇ ಜ್ಞಾನ ಎಂಬುದು ಎಲ್ಲರಿಗೂ ಇರುವುದಿಲ್ಲ. ಜ್ಞಾನ ಇದ್ದವರೆಲ್ಲಾ ಜ್ಞಾನಿಗಳಾಗಿರುವುದಿಲ್ಲ. ಆದ್ದರಿಂದ ನಮಗೆ "ಅಜ್ಞಾನವು ಜ್ಞಾನದ ವೈರಿಯಲ್ಲ"

ಸ್ವಾಮಿ ವಿವೇಕಾನಂದರು ಜ್ಞಾನ, ಶಿಕ್ಷಣಕ್ಕೆ ಮಹತ್ವ ಕೊಟ್ಟಿದ್ದರು. ಏಳಿ! ಎದ್ದೇಳಿ! ಗುರಿ ತಲುಪುವವರೆಗೆ ನಿಲ್ಲದಿರಿ ಎಂಬುದು ದೇಶದ ಯುವಕರಿಗೆ ಸಂದೇಶವಾಗಿತ್ತು. ಇಂತಹ ಸಂದೇಶಗಳ ಮೂಲಕ ಯುವಕ - ಯುವತಿಯರು ಶಿಕ್ಷಣ ಪಡೆಯುವುದರ ಮೂಲಕ "ಜ್ಞಾನ"ವನ್ನ ಹೆಚ್ಚಿಸಿಕೊಂಡು ಅಜ್ಞಾನಿಗಳಾಗಿ ವರ್ತಿಸದೆ ತಮ್ಮ ತಮ್ಮ ಕನಸುಗಳನ್ನ ಹಿಡೇರಿಸಿಕೊಳ್ಳುತ್ತಾರೆ. ಹೀಗೆ ಶಿಕ್ಷಣ ಮತ್ತು ಜ್ಞಾನ ನಮ್ಮ ಬದುಕಿಗೆ ಅವಶ್ಯಕವಾಗಬೇಕು.

ಶಿಕ್ಷಣವಿಲ್ಲದೇ ಹೋದರೆ ಹೆಚ್ಚಿನ ಜ್ಞಾನ ವೃದ್ಧಿಸಿಕೊಳ್ಳಲು ಸಾಧ್ಯವಿಲ್ಲ. ಹೀಗೆ ಶಿಕ್ಷಣ ಮತ್ತು ಜ್ಞಾನಕ್ಕೂ ಅವಿನಾಭಾವ ಸಂಬಂಧ ಉಂಟು. ಶಿಕ್ಷಣವನ್ನು ಬಿಟ್ಟು ಜ್ಞಾನ, ಜ್ಞಾನವನ್ನು ಬಿಟ್ಟು ಶಿಕ್ಷಣ ಉಳಿಯುವುದು ಕಷ್ಟಸಾಧ್ಯ.



## ವಿದ್ಯೆ ಜ್ಞಾನಾರ್ಜನೆಗೊ? ಹಣ ಸಂಪಾದನೆಗೊ?

◆ ಕಾವ್ಯಶ್ರೀ ಎನ್.
ಅಂತಿಮ ಬಿ.ಎ. (ಹೆಚ್.ಇ.ಪಿ.)

"ಜ್ಞಾನವೆಂಬ ಜ್ಯೋತಿ ಬೆಳಗಬೇಕಾದರೆ ವಿದ್ಯೆ ಎಂಬ ಬತ್ತಿ ಹತ್ತಿ ಉರಿಯಬೇಕು" ಎಂಬ ಜ್ಞಾನಿಗಳ ನುಡಿ ಎಷ್ಟು ಅರ್ಥಗರ್ಭಿತವಾಗಿದೆ. ವಿದ್ಯೆಯಿಂದ ಮಾತ್ರ ಜ್ಞಾನ ಪಡೆಯಲು ಸಾಧ್ಯ, ಎಂಬುದನ್ನು ಈ ಉಕ್ತಿ ತಿಳಿಸುತ್ತದೆ. ಆದರೆ ಇಂಥ ನುಡಿ ಮುತ್ತುಗಳು ದಿನೇ ದಿನೇ ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುವ ರೀತಿಯಲ್ಲಿ ವ್ಯಾಪಾರ ಪ್ರಪಂಚದಲ್ಲಿ ಜನರ ಮನೋಧರ್ಮ ವರ್ತಿಸುತ್ತಿದೆ. ದಾಸರು ಹೇಳಿದಂತೆ "ಹಣವೇ ನಿನ್ನಯ ಗುಣವೇನಯ್ಯ?" ಎನ್ನುವ ವಿಡಂಬನೆಯೇ ನಮ್ಮ ಇಂದಿನ ಜನರ ಮನೋಧರ್ಮವನ್ನು ಅಕ್ಷರಶಃ ಪ್ರತಿಬಿಂಬಿಸುವಂತಾಗಿದೆ. ಇಂದಿನ ಪರಿಸ್ಥಿತಿಯಲ್ಲಿ "ಹಣವೆಂಬ ಜ್ಯೋತಿ ಬೆಳಗಬೇಕಾದರೆ ವಿದ್ಯೆ ಎಂಬ ಬತ್ತಿ ಹೊತ್ತಿ ಉರಿಯಬೇಕು" ಎಂದು ಜನ ಭಾವಿಸಿದಂತಿದೆ.

ಹಿಂದೆ ವಿದ್ಯಾರ್ಜನೆಗೆ ವಿದ್ಯಾರ್ಥಿಗಳು ಗುರುಕುಲಾಶ್ರಮಕ್ಕೆ ಹೋಗಿ ಕಷ್ಟಪಟ್ಟು ಓದಿ ದೀಕ್ಷೆ ಪಡೆದು ಗುರುವಿನ ಕೃಪೆಗೆ ಪಾತ್ರರಾಗಿ ಅವರಿಂದ ತಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳುತ್ತಿದ್ದರು. ವಿದ್ಯೆಗೋಸ್ಕರ ತಮ್ಮ ಸಕಲ ಐಶ್ವರ್ಯ, ಭೋಗ, ಸುಖ-ವಿಲಾಸಗಳನ್ನು ತೊರೆದು ಗುರುಕುಲ ಆಶ್ರಮಗಳಲ್ಲೇ ಇದ್ದು ಏಕಾಗ್ರತೆಯಿಂದ ವಿದ್ಯಾಭ್ಯಾಸ ಮಾಡುತ್ತಿದ್ದರು. ಆದರೆ ಇಂದು ಮೋಜಿಗಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಂದಾಗ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಐಶ್ವರ್ಯ ಪ್ರದರ್ಶನವಾಗುತ್ತಿದ್ದೆಯೇ ಹೊರತು ಅವರ ಬುದ್ಧಿಶಕ್ತಿ ಪ್ರದರ್ಶನವಾಗುತ್ತಿಲ್ಲ. ಸಮಯ ಕಳೆಯಲಿಕ್ಕಾಗಿ ಕೆಲವರು ಹಣ ಸಂಪಾದನೆಗಾಗಿಯೇ ಕೆಲವರು ಹಣ ಸಂಪಾದನೆ ಮಾಡುವ ಮೂಲ ಶಕ್ತಿಯಾದ ಹುದ್ದೆಗಾಗಿ ಮತ್ತು ಇನ್ನಿತರ ಸ್ವಾರ್ಥ ಚಿಂತನೆಗಾಗಿಯೇ ಕೆಲವರು ವಿದ್ಯೆ ಕಲಿಯಲು ಬರುತ್ತಾರೆಯೇ ಹೊರತು ಯಾರೂ ನಿಜವಾದ ಆನಂದವನ್ನುಂಟುಮಾಡುವ ಜ್ಞಾನ ಪಡೆಯಲು ವಿದ್ಯಾಲಯಗಳಿಗೆ ಬರುವುದಿಲ್ಲ. ನಿಜವಾದ ಜ್ಞಾನ ಸಂಪಾದನೆಗಾಗಿ ಬರುವವರು ಎಲ್ಲೋ ಬೆರಳೆಣಿಕೆಯಷ್ಟು ಮಂದಿ ಮಾತ್ರ. ಅಂಥವರು ಉಳಿದವರ ದೃಷ್ಟಿಯಲ್ಲಿ "ಗಾಂಧಿಗಳು" ವಿದ್ಯೆ ಆಡಂಬರದ ವಸ್ತುವಲ್ಲ. ಆದರೆ ಪೋಷಕರು, ವೈದ್ಯ, ಅಭಿಯಂತರ, ವಕೀಲ ಮುಂತಾದ ದೊಡ್ಡ ಹುದ್ದೆಗಳಿಗಾಗಿ, ಹಣಸಂಪಾದನೆ ಮಾಡುವ ದಂಧೆಗಾಗಿ ಓದಿಸುತ್ತಾರೆ. ಪುಸ್ತಕವೆಂಬುದು ಬರಿ ಕಾಗದವಲ್ಲ ಅದರಲ್ಲಿರುವುದು ಬುದ್ಧಿ ವಿವೇಕ ಎಂಬುದು ಅವರಿಗೆ ಅರಿವಾಗಿರುವುದಿಲ್ಲ. ಹೆಚ್ಚು ಓದಿದವರೆಲ್ಲ ಜ್ಞಾನಿಗಳಲ್ಲ "ಓದಿದ ಓದು ತಾ ಮೇದ ಕಬ್ಬಿನ ಸಿಪ್ಪೆಯಂತೆ. ಓದಿನ ಅರ್ಥ ತಿಳಿದೊಡೆ ಸಿಪ್ಪೆ ಕಬ್ಬಾದಂತೆ" ಎಂಬ ಸರ್ವಜ್ಞನ ಮಾತು ಎಷ್ಟು ಸಮಂಜಸವಾಗಿದೆ. ಓದಿದ್ದನ್ನು ಕಲಿತದ್ದನ್ನು ಅರ್ಥೈಸಿ ಮನದಟ್ಟು ಮಾಡಿಕೊಂಡಾಗ ಮಾತ್ರ ನಾವು ನಿಜವಾದ ಜ್ಞಾನಿಗಳಾಗಬಹುದು. ಆದರೆ ಇಂದು ವಿದ್ಯೆಯನ್ನು ಹಣಕ್ಕಾಗಿ ಮಾರಿಕೊಳ್ಳುವವರ, ವಿದ್ಯೆಯನ್ನು ಹಣ ಕೊಟ್ಟು ಕೊಂಡು ಕೊಳ್ಳುವವರ ಸಂಖ್ಯೆಯೇ ಹೆಚ್ಚಾಗಿದೆ. ಅಷ್ಟೇ ಏಕೆ ಇಂದು ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ವೃತ್ತಿಪರ ಕಾಲೇಜುಗಳನ್ನು ತೆರೆಯುವವರು ಹಣ ಮಾಡುವ ಉದ್ದೇಶವನ್ನೇ ಇರಿಸಿಕೊಂಡಿರುತ್ತಾರೆ. ಹಾಗಾಗಿ ವಿದ್ಯೆ ಎಂಬುದು ಮಾರಾಟದ ವಸ್ತುವಾಗಿದ್ದು, ಶಾಲಾ ಕಾಲೇಜುಗಳು ವ್ಯಾಪಾರೋದ್ಯಮ ಕೇಂದ್ರಗಳಾಗಿವೆ. "ದಾನ ದಾನಗಳಲ್ಲೆಲ್ಲ ವಿದ್ಯಾದಾನವೇ ಶ್ರೇಷ್ಠ" ಎಂಬ ಮಾತು ಇಂದು ಒಂದು ರೀತಿ ವ್ಯಂಗ್ಯವಾಗಿದ್ದು ಅಪಹಾಸ್ಯಕೀಡಾಗಿದೆ.

'ಹಣ' ಮತ್ತು 'ಸರ್ಟಿಫಿಕೇಟಿನಿಂದ' ಮಾತ್ರ ಇಂದು ಉದ್ಯೋಗ ಲಭಿಸುತ್ತಿದೆ. ಗುಣಮಟ್ಟ, ಕೌಶಲ್ಯತೆ, ಪ್ರತಿಭೆ ಮುಂತಾದ ಅರ್ಹತೆಗಳೆಲ್ಲ ತಮ್ಮ ಮಹತ್ವ ಕಳೆದು ಕೊಂಡಿದೆ. ಈ ಕಾರಣದಿಂದಲೇ ವಿದ್ಯೆ ಇಂದು

ಜ್ಞಾನಾರ್ಜನೆಯ ಮಾರ್ಗದಿಂದ ಹಣ ಸಂಪಾದನೆಯ ಮಾರ್ಗವಾಗಿ ಮಾರ್ಪಟ್ಟಿದೆ. ಹಾಗಾಗಿ ಜನರು ವಿದ್ಯೆಗಿಂತ ಹಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದಾರೆ.

'ದೇಶ ಸುತ್ತು, ಕೋಶ ಓದು' ಎಂಬ ನಾಣ್ಣುಡಿ ಇಂದು ಬೇರೆಯೇ ಆದ ಅರ್ಥವನ್ನು ಪಡೆದುಕೊಂಡಿದೆ. ಕೋಶ ಓದಿ ಜ್ಞಾನ ಪಡೆಯುವ ಬದಲು ದೇಶ ಸುತ್ತಿ ಹಣ ಸಂಪಾದನೆ ಮಾಡುವುದೇ ಲೇಸು ಎಂಬಷ್ಟರ ಮಟ್ಟಿಗೆ ಅರ್ಥವ್ಯಾಪ್ತಿ ಪಡೆದುಕೊಂಡಿದೆ.

ವಾಸ್ತವವಾಗಿ ವಿಚಾರ ಮಾಡಿದಾಗ 'ಹಣ' 'ವಿದ್ಯೆ' ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಒಂದನ್ನು ಬಿಟ್ಟು ಮತ್ತೊಂದು ಇರಲು ಸಾಧ್ಯವಿಲ್ಲ. ಹಣವಿಲ್ಲದೆ ಬದುಕು ಸಾಗಿಸಲು ಸಾಧ್ಯವಿಲ್ಲ. ಎನ್ನುವಷ್ಟರ ಮಟ್ಟಿಗೆ ಸಂಕೀರ್ಣತೆ ನಮ್ಮ ಸಮಾಜದಲ್ಲಿ ಉಂಟಾಗಿದೆ. ಹಾಗೆಯೇ ವಿದ್ಯೆಯಿಲ್ಲದೇ ಹಣಗಳಿಸಲು ಸಾಧ್ಯವಿಲ್ಲ ಎಂಬ ಮಾತು ಅಷ್ಟೇ ಸತ್ಯವಾಗಿದೆ. ನಮ್ಮಲ್ಲಿರುವ ಹಣದ ಸದುಪಯೋಗವಾಗಬೇಕಾದರೆ ವಿದ್ಯೆ ಬೇಕೇ ಬೇಕು. ಹಣವನ್ನು ಹಲವಾರು ಮಾರ್ಗಗಳಲ್ಲಿ ಸಂಪಾದನೆ ಮಾಡಬಹುದು. ಆದರೆ ಹಣ ಸಂಪಾದನೆಗೆ ಮಾರ್ಗ ತೋರಿಸುವ ವಿದ್ಯೆ ಸಂಪಾದಿಸುವುದು ಬಹಳ ಕಷ್ಟಕರ. ವಿದ್ಯೆ ಶಾಶ್ವತವಾದುದು ಅದನ್ನು ಯಾರಿಂದಲೂ ಕದಿಯಲಾಗುವುದಿಲ್ಲ. ಮನುಷ್ಯನಿಗೆ ವಿದ್ಯೆಯೇ ರೂಪವು, ವಿದ್ಯೆಯೇ ಗುಪ್ತವಾದ ಧನವು ಆದ್ದರಿಂದಲೇ ವಿದ್ಯಾವಿಹೀನನು ಪಶುವಿಗೆ ಸಮಾನ ಎನ್ನುತ್ತದೆ ಸುಭಾಷಿತ. ಇಂಥ ಬೆಲೆ ಕಟ್ಟಲಾಗದ ಮೌಲ್ಯಯುತವಾದ ವಿದ್ಯೆ ಕಲಿಯಲು ಬೇಕಾಗಿರುವುದು ಶ್ರದ್ಧೆ ಮತ್ತು ಶ್ರಮ. ನಾವು ಶ್ರಮಪಟ್ಟು ಕಲಿತ ವಿದ್ಯೆಯಿಂದ ವಿನಯವನ್ನು, ವಿನಯದಿಂದ ಯೋಗ್ಯತೆಯನ್ನು, ಯೋಗ್ಯತೆಯಿಂದ ಹಣವನ್ನು ವಿದ್ಯೆಯಿಂದ ಅಂತಿಮವಾಗಿ ಪರಮ ಆತ್ಮ ಸುಖ-ಸಂತೋಷವನ್ನು ಪಡೆಯಬಹುದಾಗಿದೆ.

ಒಟ್ಟಿನಲ್ಲಿ ಈ ಜಗತ್ತಿನಲ್ಲಿ ನೆಮ್ಮದಿಯ ಬದುಕು ಸಾಗಿಸಬೇಕಾದರೆ ವಿದ್ಯೆ ಬೇಕು. "ಪುಸ್ತಕ ಪ್ರೇಮವಿಲ್ಲದವನು ಹಣವಂತನಾದರೂ ದರಿದ್ರನೇ" ಎಂಬ ನುಡಿ ಅದೆಷ್ಟು ಅರ್ಥಗರ್ಭಿತವಾಗಿದೆ. ವಿದ್ಯೆ ಇರುವುದು ಹಣ ಗಳಿಸಿ ಅನೈತಿಕ ಜೀವನ ಸಾಗಿಸುವುದಕ್ಕಲ್ಲ ಜ್ಞಾನ ದೇವಿಗೆ ಬದುಕಿನಲ್ಲಿ ಸದ್ಗತಿಯನ್ನು ಕಂಡುಕೊಳ್ಳುವುದಕ್ಕಾಗಿ ಎಂಬ ಸತ್ಯ ನಮ್ಮ ಜನರ ಅರಿವಿಗೆ ಬಂದರೆ ಸಾಕು.

## ಚುಟುಕುಗಳು

### ನೆನಪು

ಕಾಲೇಜಿನಲ್ಲಿ ಕಲಿಯುವುದೇ ಜೀವನ ಪಾಠ
ಕಲಿಯುವವರಲ್ಲಿ ಕೆಲವರು ಪ್ರೇಮದ ಪಾಠ
ಬಿಟ್ಟು ಹೋಗುವವರು ಅರ್ಥದಲ್ಲೇ ಕಾಲೇಜಿನ ಪಾಠ!
ಆಗ
ಬಾಳೆಲ್ಲಾ ಕಷ್ಟ ನೋವಿನಲ್ಲಿ ನರಳಿ ನಲುಗುವಾಗ
ನೆನಪಿಗೆ ಬರುವುದು ಕಾಲೇಜಿನಲ್ಲಿ ಕಲಿಯದಾ
ಜೀವನದ ಪಾಠ

### ಜ್ಞಾನ

ಜ್ಞಾನವಿರುವುದು ಸಾಗರದಷ್ಟು
ಪಡೆದಿರುವುದು ನಾವು ಸಾಸಿವೆಯಷ್ಟು
ಪಡೆಯಬೇಕಿದೆ ಇನ್ನೂ ಬೆಟ್ಟದಷ್ಟು
ಕಡೆಗೂ ಪಡೆದವು ಮಣ್ಣಿನ ಕಣದಷ್ಟು

◆ ಕಾವ್ಯಶ್ರೀ ಎಸ್.
ಅಂತಿಮ ಬಿ.ಎ. (ಹೆಚ್.ಇ.ಪಿ.)

ಶಿಕ್ಷಣದ ಮುಖ್ಯ ಕೆಲಸವೆಂದರೆ ನಮ್ಮ ಬದುಕು ಪೂರ್ಣವಾಗುವಂತೆ ಸಹಕರಿಸುವುದು. - ಹರ್ಬರ್ಟ್‌ಸ್ಪೆನ್ಸರ್

## ಧರ್ಮೋ ರಕ್ಷತಿ ರಕ್ಷಿತಾಃ



◆ ಮಾನಸ ಎಂ.
ಪ್ರಥಮ ಬಿ.ಕಾಂ.

ಗುರುಗಳು ಗುರುಕುಲದಲ್ಲಿ ತಮ್ಮ ಶಿಷ್ಯರೊಡನೆ ಮಾತನಾಡುತ್ತ ಕುಳಿತಿದ್ದರು. ಆಗ ತಕ್ಷಣ ಅವರು,

ಎಲ್ಲರೂ ಗಮನವಿಟ್ಟು ಕೇಳಿ. ನಿಮಗೊಂದು ಸಮಸ್ಯೆಯನ್ನು ಹೇಳುತ್ತಿದ್ದೇನೆ. ಅದರ ನಿಜವಾದ ಅರ್ಥವನ್ನು ಯಾರಾದರೂ ಹೇಳ ಬಲ್ಲಿರಾ ಎಂದು ಕೇಳಿದರು. ಎಲ್ಲರೂ ಶಾಂತರಾಗಿ ಗುರುಗಳ ಮಾತನ್ನು ಕೇಳತೊಡಗಿದರು.

ಗುರುಗಳು ಒಂದು ಕಥೆಯನ್ನು ಹೇಳಿದರು. ಒಬ್ಬ ಮನುಷ್ಯ ದೇವರನ್ನು ಪ್ರಾರ್ಥಿಸಿದಾಗ ಅವನು ಭೂಮಿಯ ಮೇಲೆ ಬದುಕಿ ಉಳಿಯುವ ದಿನಗಳು ಹೆಚ್ಚಿಲ್ಲ ಎಂದು ಗೊತ್ತಾಯಿತು.

ಅವನಿಗೆ ಭಯ, ದುಃಖ ಆದವು.

ತನ್ನನ್ನು ನೆಲದಲ್ಲಿ ಹೂಳಿದಾಗ ಗೋರಿಯಲ್ಲಿ ತಾನೊಬ್ಬನೇ ಇರಬೇಕಲ್ಲ ಎಂಬ ಭಯ ಕಾಡತೊಡಗಿತು. ತನಗೆ ಯಾರಾದರೂ ಜೊತೆಯಾಗಿರಲು ಒಪ್ಪಿಯಾರು ಎಂದು ಕೊಂಡು ತನಗೆ ಅತ್ಯಂತ ಆಪ್ತರಾದ ಮೂವರು ಸ್ನೇಹಿತರನ್ನು ನೆನಪಿಸಿಕೊಂಡು ಮೊದಲನೇ ಸ್ನೇಹಿತನ ಹತ್ತಿರ ಹೋದ.

"ಗೆಳೆಯಾ ನನಗೆ ತುಂಬಾ ಭಯವಾಗುತ್ತಿದೆ. ಯಾವಾಗಲೂ ನನ್ನ ಜೊತೆಗೆ ಇರುತ್ತಿಯಾ" ಎಂದು ಕೇಳಿದ.

"ಗೆಳೆಯಾ ನೀನೇಕೆ ಚಿಂತೆ ಮಾಡುತ್ತಿ? ನಾನು ಸದಾ ನಿನ್ನೊಡನೆಯೇ ಇರುತ್ತೇನೆ" ಎಂದು ಭರವಸೆ ಕೊಟ್ಟ ಆಗ ಆತ ಹಾಗಲ್ಲ, ನಾನು ಕೆಲವೇ ದಿನಗಳಲ್ಲಿ ಸಾಯುವವನಿದ್ದೇನೆ. ನನಗೆ ಗೋರಿಯಲ್ಲಿ ಒಬ್ಬನೇ ಇರಲು ಭಯ ಎಂದ.

"ಸ್ನೇಹಿತ ಬಿಳಿಚಿಕೊಂಡು ನಾನು ನಿನ್ನ ಸ್ನೇಹಿತನೇನೋ ಸರಿ" ಆದರೆ ಸಾವು ನಮ್ಮನ್ನು ಬೇರ್ಪಡಿಸುತ್ತದಲ್ಲ? ನಾನು ಬೇಕಾದರೆ ಸ್ಮಶಾನದಲ್ಲಿ ಸಮಾಧಿಗೆ ನಿನಗೊಂದು ಪುಟ್ಟ ಜಾಗ ಕೊಂಡುಕೊಡಬಲ್ಲೆ, ನಿನ್ನ ಸಮಾಧಿಯ ಮೇಲೆ ಸುಂದರವಾದ ಚಟ್ಟೆಯನ್ನು ಹೊದಿಸಬಲ್ಲೆ ಆದರೆ ನಿನ್ನೊಡನೆ ಗೋರಿಯಾ ಒಳಗೆ ಬರಲಾರೆ ಎಂದ.

ಈತ ದುಃಖದಿಂದ ಮತ್ತೊಬ್ಬ ಸ್ನೇಹಿತನ ಮನೆಗೆ ಹೋಗಿ ಇದೇ ಸಮಸ್ಯೆಯನ್ನು ಅವನ ಮುಂದಿಟ್ಟು ಸತ್ತನಂತರ ತನ್ನೊಂದಿಗೆ ಇರಲು ಕೇಳಿಕೊಂಡ ಆತ ಹೇಳಿದ,

'ಗೆಳೆಯಾ, ನಾನು ಯಾವಾಗಲೂ ನಿನ್ನೊಂದಿಗೆ ಇದ್ದೇನೆ, ನಿನ್ನ ಕೊನೆ ಕ್ಷಣದವರೆಗೂ ನಿನ್ನೊಡನೆ ಇರುತ್ತೇನೆ. ಆದರೆ ನಾವು ನಿನ್ನನ್ನು ಬೇರ್ಪಡಿಸಿದಾಗ ಬಹಳ ಹೆಚ್ಚೆಂದರೆ ನಾನು ನಿನ್ನನ್ನು ಹೆಗಲು ಮೇಲೆ ಹೊತ್ತುಕೊಂಡು ಸ್ಮಶಾನದವರೆಗೆ ಬಂದು ನಿನ್ನ ದೇಹವನ್ನು ಗೋರಿಯಲ್ಲಿರಿಸಿ ಬರಬಹುದು. ಅನಂತರ ನಾನೂ ಏನೂ ಮಾಡಲಾರೆ, ಕ್ಷಮಿಸು ಎಂದ....

ಇವನ ದುಃಖ ಮತ್ತಷ್ಟು ಹೆಚ್ಚಾಯಿತು, ನಿರಾಶನಾಗಿ ಮೂರನೇ ಗೆಳೆಯನಲ್ಲಿಗೆ ಹೋಗಿ ಇದನ್ನೇ ವಿಸ್ತರಿಸಿ ತನ್ನ ಇನ್ನಿಬ್ಬರು ಹೇಳಿದ ಮಾತಗಳನ್ನು ಒಪ್ಪಿಸಿದ. ಅವನಿಗೆ ಇವನಿಂದಲೂ ಅವರು ನುಡಿದಂಥ' ಮಾತುಗಳೇ ಬರುತ್ತವೆಂಬುದು ಖಚಿತವಾಗಿತ್ತು. ಆದರೆ ಆ 3ನೇ ಗೆಳೆಯ ಹೇಳಿದ 'ಚಿಂತೆ ಬಿಡು ಮಿತ್ರ, ನಾನು ನಿನ್ನೊಡನೆ ಸ್ಮಶಾನಕ್ಕೆ ಮಾತ್ರವಲ್ಲ, ಗೋರಿಗೂ ಬರುತ್ತೇನೆ',

'ದೇವತೆಗಳು ಬಂದು ನಿನ್ನ ಪ್ರಶ್ನಿಸುವಾಗಲೂ ನಾನು ನಿನಗೆ ಸಹಾಯ ಮಾಡುತ್ತೇನೆ. ಸೇತುವೆಯನ್ನು ದಾಟಿ ಸ್ವರ್ಗಕ್ಕೆ ಹೋಗುವಾಗಲೂ ನಾನು ಮುಂದೆ ನಿಂತು ನಡೆಸುತ್ತೇನೆ ಎಂದನು' ಈ ಮಾತುಗಳನ್ನು ಕೇಳಿ ಆ ವ್ಯಕ್ತಿಗೆ ತುಂಬಾ ಸಮಾಧಾನವಾಯಿತು. ಈ ಕಥೆಯನ್ನು ಹೇಳಿ ಗುರುಗಳು ಕೇಳಿದರು.

ಆ ಮೂವರು ಸ್ನೇಹಿತರು ಯಾರು ಗೊತ್ತೇ.... ಎಂದರು, ಶಿಷ್ಯರಿಂದ ಉತ್ತರ ಬರದಿದ್ದಾಗ ತಾವೇ ನುಡಿದರು, ಮೊದಲನೇ ಸ್ನೇಹಿತ 'ಹಣ'

'ಅದು ನಿಮಗಾಗಿ ಸ್ಮಶಾನದಲ್ಲಿ ಸ್ಥಳಕೊಳ್ಳುವುದಕ್ಕೆ, ಬಟ್ಟೆಕೊಳ್ಳಲಿಕ್ಕೆ ಮಾತ್ರ'.. ಪ್ರಯೋಜನಕಾರಿ.

ಎರಡನೇ ಸ್ನೇಹಿತ 'ಹೆಂಡತಿ, ಮಕ್ಕಳು ಮತ್ತು ಪರಿವಾರ' 'ಅವರು ನಿಮ್ಮನ್ನು ಹೊತ್ತುಕೊಂಡು ಸ್ಮಶಾನದವರೆಗೆ ಮಾತ್ರ ಬರಬಲ್ಲರು'

3ನೇ ಸ್ನೇಹಿತ, ನೀವು ಮಾಡಿದ 'ಧರ್ಮಕಾರ್ಯಗಳು' 'ಅವು ನಿಮ್ಮನ್ನು ಸ್ವರ್ಗದವರೆಗೂ ಹಿಂಬಾಲಿಸಿ ಬರುತ್ತವೆ'.

## ರಾಷ್ಟ್ರಗೀತೆ ಯಾವಾಗ ಆರಂಭವಾಯಿತು



◆ ಚೈತ್ರ ಎಂ.
ಅಂತಿಮ ಬಿ.ಕಾಂ.

ವಿಶ್ವದ ಎಲ್ಲ ದೇಶಗಳಲ್ಲಿ ರಾಷ್ಟ್ರಗೀತೆಯನ್ನು ವಿಶೇಷ ಸಂದರ್ಭಗಳಲ್ಲಿ ಹಾಡಲಾಗುತ್ತದೆ. ಅಥವಾ ನುಡಿಸಲಾಗುತ್ತದೆ. ರಾಷ್ಟ್ರಗೀತೆ ದೇಶದ ಗೌರವದ ಸಂಕೇತ. ಅದು ದೇಶಭಕ್ತಿಯನ್ನು ಮೂಡಿಸುತ್ತದೆ. ಜನರಲ್ಲಿ ಏಕತಾ ಭಾವನೆಯನ್ನು ಹುಟ್ಟಿಸುವಲ್ಲಿ ರಾಷ್ಟ್ರಗೀತೆಗೆ ತುಂಬ ವಿಶೇಷ ಪಾತ್ರವಿದೆ.

ರಾಷ್ಟ್ರಗೀತೆ ಹೇಗೆ ಮತ್ತು ಯಾವಾಗ ಆರಂಭವಾಯಿತು ಎನ್ನುವುದಕ್ಕೆ ಸರಿಯಾದ ದಾಖಲೆಗಳಿಲ್ಲ ಒಂಭತ್ತನೇ ಶತಮಾನದಲ್ಲಿ ಜಪಾನ್‌ನಲ್ಲಿ ಹಾಡಲಾದ 'ಕಿಂಗಾವ್' ವಿಶ್ವದ ಮೊಟ್ಟ ಮೊದಲ ರಾಷ್ಟ್ರಗೀತೆಯೆಂದು ನಂಬಲಾಗಿದೆ. ಈ ಗಾಡ್ ಸೇವದ ಕ್ವೀನ್ ಎಂಬ ಮೊಟ್ಟ ಮೊದಲ ರಾಷ್ಟ್ರಗೀತೆಯನ್ನು ಬ್ರಿಟಿಷರು 1619ರಲ್ಲಿ ಮೊದಲ ಭಾರಿಗೆ ಹಾಡಿದರು. ಅದನ್ನು ಬರೆದವರು ಜಾನ್‌ಬುಲ್ ಎಂಬ ಇಂಗ್ಲಿಷ್ ರಚನಾಕಾರ 1745ರ ಸೆಪ್ಟೆಂಬರ್ 28ರಂದು ಈ ರಾಷ್ಟ್ರಗೀತೆಯನ್ನು ಮೊಟ್ಟಮೊದಲು ಸಾರ್ವಜನಿಕರ ಸಮ್ಮುಖದಲ್ಲಿ ಹಾಡಲಾಯಿತು.

ಅಮೇರಿಕ ರಾಷ್ಟ್ರಗೀತೆಯನ್ನು 1821ರ ಯುದ್ಧದ ಕಾಲದಲ್ಲಿ ಬರೆಯಲಾಯಿತು. ಫ್ರಾನ್ಸಿಸ್ ಸ್ಕಾಟ್ ಕೀ ಎಂಬ ಅಮೇರಿಕಾದ ವಕೀಲ 'ಫೋರ್ಟ್ ಮೆಕ್ ಹೆನ್ಸಿ' ಮೇಲೆ ದಾಳಿ ಮಾಡಿದ ಬ್ರಿಟೀಷ್ ಹಡಗುಗಳ ಪೈಕಿ ಒಂದರಲ್ಲಿದ್ದ ಮುಂಜಾನೆ ನೋಡಿದಾಗ ಕೋಟೆಯ ಮೇಲೆ ಅಮೇರಿಕಾದ ಧ್ವಜ ಇನ್ನು ಹಾರಡುತ್ತಲೇ ಇದ್ದ ದೃಶ್ಯ ಅವನ ಕಣ್ಣಿಗೆ ಬಿತ್ತು, ಅವನಲ್ಲಿ ಆಗ ದೇಶಭಕ್ತಿಯ ಭಾವನೆ ಉಕ್ಕಿ ಹರಿಯಿತು. ಅವನು ಕೂಡಲೇ ಒಂದು ಲಕೋಟೆಯನ್ನು ತೆಗೆದು ಅವರ ಮೇಲೆ ಒಂದು ಸಾಲು ಬರೆದ. ಅದು ಅನಂತರ ಅಮೇರಿಕಾದ ರಾಷ್ಟ್ರಗೀತೆಯ ಒಂದು ಭಾಗವಾಯಿತು. ಜಪಾನ್ ಮತ್ತು ಜೋರ್ಡಾನ್ ವಿಶ್ವದ ಅತಿ ಚಿಕ್ಕ ರಾಷ್ಟ್ರಗೀತೆಗಳನ್ನು ಹೊಂದಿದೆ. ಈ ರಾಷ್ಟ್ರಗೀತೆಗಳಲ್ಲಿ ಒಂದೊಂದರಲ್ಲೂ ಕೇವಲ ನಾಲ್ಕು ಸಾಲುಗಳಿವೆ.

ನಮ್ಮ ರಾಷ್ಟ್ರಗೀತೆ ಬರೆದವರು ರವೀಂದ್ರನಾಥ ಟಾಗೂರರು, ಈ ಗೀತೆಯನ್ನು 1911ರ ಡಿಸೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ದಲ್ಲಿ ಮೊದಲ ಬಾರಿಗೆ ಹಾಡಲಾಯಿತು. 1950ರ ಜನವರಿ 24ರಂದು ಜನಗಣಮನ ಅಧಿನಾಯಕ.... ಈ ಗೀತೆಯನ್ನು ಭಾರತದ ರಾಷ್ಟ್ರಗೀತೆಯಾಗಿ ಅಂಗೀಕರಿಸಲಾಯಿತು. ಬಂಕಿಮ ಚಂದ್ರ ಚಟರ್ಜಿ ಬರೆದ 'ವಂದೇ ಮಾತರಂ' ಎಂಬ ದೇಶಭಕ್ತಿ ಗೀತೆಯೊಂದಕ್ಕೂ ರಾಷ್ಟ್ರಗೀತೆ ಸ್ಥಾನಮಾನವನ್ನು ಕೊಡಲಾಗಿದೆ. ಇದೇ ರೀತಿ ವಿಶ್ವದ ಎಲ್ಲ ದೇಶಗಳು ತಮ್ಮದೇ ಆದ ರಾಷ್ಟ್ರಗೀತೆಗಳನ್ನು ಹೊಂದಿದೆ.

# ಡಾ. ಎಸ್. ರಾಧಾಕೃಷ್ಣನ್ (1888-1975)



◆ ಭೂಮಿಕ ಎಂ.
ಪ್ರಥಮ ಬಿ.ಕಾಂ.

ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ಗಡಿಪಟ್ಟಣವಾದ ತಿರುಟ್ಟಣಿ ಎಂಬಲ್ಲಿ ಸರ್ವಪಳ್ಳಿ ವೀರಸ್ವಾಮಿ ಹಾಗೂ ಸೀತಮ್ಮನವರ ಎರಡನೇ ಮಗನಾಗಿ 1888ರ ಸೆಪ್ಟೆಂಬರ್ 5 ರಂದು ರಾಧಾಕೃಷ್ಣನ್‌ರವರ ಜನಿಸಿದರು. ಆಂಧ್ರಪ್ರದೇಶದ ಸರ್ವಪಳ್ಳಿಯಿಂದ ರಾಧಾಕೃಷ್ಣನ್‌ರವರ ಪೂರ್ವಿಕರು ತಿರುಟ್ಟಣಿಗೆ ವಲಸೆ ಬಂದವರು. ತಿರುಪತಿ, ವೆಲ್ಲೂರು ಮತ್ತು ಮದ್ರಾಸಿನಲ್ಲಿ ರಾಧಾಕೃಷ್ಣನ್ ತಮ್ಮ ಶಾಲಾ, ಕಾಲೇಜು ಶಿಕ್ಷಣ ಪೂರೈಸಿದರು. ರಾಧಾಕೃಷ್ಣನ್‌ರವರ ಜ್ಞಾನದಾಹ ಅಪರಿಮಿತವಾದುದು. ಅರಿಸ್ಟಾಟಲ್, ಪ್ಲೇಟೊ, ಹೆಗಲ್, ಬ್ರಾಡ್ಲೆ ಮುಂತಾದ ಪಾಶ್ಚಾತ್ಯರ ಕೃತಿಗಳನ್ನು, ವೇದ ಉಪನಿಷತ್ತು ಹಾಗೂ ಭಾರತೀಯ ವಿವಿಧ ಧರ್ಮಗಳನ್ನು ಆಳವಾಗಿ ಅಭ್ಯಾಸ ಮಾಡಿದರು.

1911ರಲ್ಲಿ ಮದ್ರಾಸ್ ಪ್ರಾಂತೀಯ ಶಿಕ್ಷಣ ಸೇವೆಗೆ ಅಧ್ಯಾಪಕರಾಗಿ ಸೇರಿದ ರಾಧಾಕೃಷ್ಣನ್ ಮುಂದೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. ಮೈಸೂರಿನಲ್ಲಿದ್ದಾಗ ರಾಧಾಕೃಷ್ಣನ್‌ರವರಿಗೆ ಉತ್ತಮವಾದ ಶೈಕ್ಷಣಿಕ ವಾತಾವರಣ ಹಾಗೂ ವಿದ್ವಾಂಸರ ಸಹವಾಸ ಸಿಗಲಾಗಿ, 'ಭಾರತೀಯ ತತ್ವಶಾಸ್ತ್ರ' ಎಂಬ ಮಹತ್ವದ ಕೃತಿಯನ್ನು ರಚಿಸಿದರು. ಈ ಕೃತಿಯು 1927ರ ವೇಳೆಗೆ ಎರಡು ಸಂಪುಟಗಳಲ್ಲಿ ಪ್ರಕಟವಾಯಿತು. ಅದೇ ವರ್ಷ ನಡೆದ ಮೂರನೇ ಭಾರತೀಯ ತತ್ವಶಾಸ್ತ್ರದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.

ರಾಧಾಕೃಷ್ಣನ್‌ರವರು ದೇಶ ವಿದೇಶದಲ್ಲಿ ಹಲವಾರು ವಿಚಾರ ಸಂಕಿರಣಗಳಲ್ಲಿ ಸಮ್ಮೇಳನಗಳಲ್ಲಿ ತಮ್ಮ ವಿದ್ವತ್ ಪೂರ್ಣವಾದ ಪ್ರಬಂಧಗಳನ್ನು ಮಂಡಿಸಿ ದೇಶಕ್ಕೆ ಕೀರ್ತಿತಂದರು. ಅನೇಕ ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದವು. 1931ರಲ್ಲಿ ಅವರು ತಮ್ಮ ನಲವತ್ತ ಮೂರನೇ ವಯಸ್ಸಿನಲ್ಲಿ ಆಂಧ್ರ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಅಧಿಕಾರವಹಿಸಿಕೊಂಡರು. ಅವರ ಅವಧಿಯಲ್ಲಿ ರಾಷ್ಟ್ರಮಟ್ಟದಲ್ಲಿ ಖ್ಯಾತರಾಗಿದ್ದ ವಿದ್ವಾಂಸರು ಆ ವಿಶ್ವವಿದ್ಯಾನಿಲಯದಲ್ಲಿ ಬೋಧಕ, ಸಂಶೋಧನೆಗಳನ್ನು ಮಾಡಿದರು. ಅಂಥವರಲ್ಲಿ ವಿ.ಕೆ.ಆರ್.ವಿ. ರಾವ್, ಹಿರೇನ್ ಮುಖರ್ಜಿ, ಬೈಲೇಶ್ವರ ಸೇನ್, ಉಮಾಯುನ್ ಕಬೀರ್, ಟಿ.ಆರ್. ಶೇಷಾದ್ರಿ, ಲುಡ್‌ವಿಗ್‌ವುಲ್ಫ್, ಸರ್ ಜಿ.ಸಿ. ಕಾಯ್‌ಜೀ ಮುಂತಾದವರು ಸೇರಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಖಾದಿಧಾರಿಗಳು ಹೆಚ್ಚು ಇದ್ದರು. ಅವರು ಸ್ವಾತಂತ್ರ್ಯ ಹೋರಾಟದ ಕಾಂಗ್ರೆಸ್ ಪರವಿದ್ದು ಸ್ವಾತಂತ್ರ್ಯ ಹೋರಾಟಕ್ಕೆ ತುಂಬಾ ನೆರವಾದರು. ತಮ್ಮ ಅಧಿಕಾರಾವಧಿಯಲ್ಲಿ ವಿಶ್ವವಿದ್ಯಾಲಯಕ್ಕೆ ಸರ್ ಸಿ.ವಿ. ರಾಮನ್, ರವೀಂದ್ರನಾಥ್ ಠಾಗೂರ್, ಡಾ. ರಾಜೇಂದ್ರ ಪ್ರಸಾದ್ ಮುಂತಾದ ಮಹನೀಯರುಗಳನ್ನು ಆಹ್ವಾನಿಸಿ ಉಪನ್ಯಾಸಗಳನ್ನು ಏರ್ಪಡಿಸಿದರು. ಅದೇ ಅವಧಿಯಲ್ಲಿ ಅವರು 'East and west in Religion' 'Fredom and Culture' 'The Heart of Hinduism' ಕೃತಿಗಳನ್ನು ರಚಿಸಿ ಪ್ರಕಟಿಸಿದರು. ರಾಧಾಕೃಷ್ಣನ್‌ರವರು 1975 ಏಪ್ರಿಲ್ 17 ರಂದು ಹೃದಯದ ತೊಂದರೆಯಿಂದ ನಿಧನರಾದರು. ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ ರಾಧಾಕೃಷ್ಣನ್‌ರವರು ದೇಶದ ಉನ್ನತಸ್ಥಾನವನ್ನು ಅಲಂಕರಿಸಿದ ರೀತಿ ಆದರ್ಶನೀಯವಾದರು. ರಾಧಾಕೃಷ್ಣನ್‌ರವರ ಹುಟ್ಟು ಹಬ್ಬದ ದಿನವಾದ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನಾಚರಣೆ ಎಂದು ಆಚರಿಸುತ್ತೇವೆ.

## ಭರವಸೆಯ ಬೆಳಕು



◆ ಸವಿತ ಎಂ.
ಅಂತಿಮ ಬಿ. ಕಾಂ.

ಮನುಷ್ಯ ತನ್ನ ಜೀವನದಲ್ಲಿ ಸಂತಸ ಹಾಗೂ ನೆಮ್ಮದಿಯಿಂದಿರಲು ಬಯಸುತ್ತಾನೆ. ನೈಜವಾದ ಸಂತೋಷದ ಮೂಲವನ್ನು ಸರಿಯಾಗಿ ಗುರುತಿಸಲಾಗದೇ ಚಡಪಡಿಸುತ್ತಾನೆ. ಬಾಹ್ಯ ವಸ್ತು, ವಿಷಯಗಳು ಮಾತ್ರವೇ ಸಂತಸದ ಮಾರ್ಗಗಳೆಂದು ತಿಳಿದು ಅಲ್ಪಕಾಲ ಅಂಥ ಸಂತೋಷವನ್ನು ಪಡೆದು ಜೀವಿಸುತ್ತಿರುವಾಗಲೇ ಮತ್ತೆ ಏನೋ ಕೊರತೆ ಅವನಿಗೆ ಅನುಭವಕ್ಕೆ ಬರುತ್ತದೆ ನೆಮ್ಮದಿಯ ಸಂತೋಷದ ಮೂಲವನ್ನು ಸರಿಯಾಗಿ ಅರಿಯದಿರುವುದೇ ಇದಕ್ಕೆ ಕಾರಣವಾಗಿದೆ. ಅದು ಅಂತರಂಗದಿಂದ ಬರುವ 'ಅದ್ಭುತವಾದ ಸಿರಿ' ಎಂದು ತಡವಾಗಿ ಮನುಷ್ಯನಿಗೆ ಅರ್ಥವಾಗುತ್ತದೆ. ಜ್ಞಾನಿಗಳು ಇದನ್ನು ಬೇಗನೇ ಮನದಟ್ಟು ಮಾಡಿಕೊಳ್ಳುತ್ತಾರೆ.

"The way is to happy is make others happy" ಎನ್ನುವ ವಾಣಿ ನಮಗೆ ಮಾರ್ಗದರ್ಶನ ಮಾಡುತ್ತದೆ. ಇತರ ಜೀವಿಗಳೆಡೆ ಅನುಕಂಪ, ದಯೆ, ಸಹಾನುಭೂತಿ ಬೆಳೆಸಿಕೊಂಡು, ನಿಸ್ವಾರ್ಥ ಸೇವೆ ಕಾರ್ಯತತ್ಪರತೆ ವಿಶಾಲ ಮನೋಭಾವನೆಗಳನ್ನು ರೂಢಿಸಿಕೊಂಡು, ದೈಹಿಕ ಮತ್ತು ಮಾನಸಿಕ ದೃಢತೆ ಗಳಿಸಿಕೊಂಡು ಜೀವನವನ್ನು ಉದಾತ್ತಗೊಳಿಸಿಕೊಳ್ಳಬೇಕಾಗುತ್ತದೆ. ಬಿಗುವನ್ನು ತೊರೆದು ನಗುವನ್ನು ಸೂಸುತ್ತಾ ಪರೋಪಕಾರಗುಣ, ಸಹಕಾರ ಮನೋಭಾವ ಇವುಗಳನ್ನು ಮೈಗೂಡಿಸಿಕೊಂಡಲ್ಲಿ ಆಂತರಿಕ ಸಾಮರಸ್ಯವು ಕಂಡುಬಂದು ದೇಹದ ಕೀಲುಗಳ ಬಿಗಿ ಕಣ್ಮರೆಯಾಗಿ, ಜೀರ್ಣರಸಗಳ ಉತ್ಪಾದನೆ ಹೆಚ್ಚಿ ಚಲನವಲನಗಳಲ್ಲಿ ಹೊಸತನ ಕಂಡುಬಂದು ಮನುಷ್ಯ ದೈಹಿಕವಾಗಿ ಮತ್ತು ಮಾನಸಿಕವಾಗಿ ಗಟ್ಟಿಯಾಗುತ್ತಾನೆ "A sound mind in a sound body" ಎನ್ನುವಂತೆ ಒಂದು ಸಶಕ್ತ ಮನಸ್ಸು, ಗಟ್ಟಿಯಾದ ಆಲೋಚನೆಗಳಿಂದ ಕಾರ್ಯೋನ್ಮುಖನಾದ ಅಂಥ ವ್ಯಕ್ತಿ ಒಂದು ಶಕ್ತಿಯಾಗಿ ಮಾರ್ಪಟ್ಟು ಕುಟುಂಬಕ್ಕೆ ಸಮಾಜಕ್ಕೆ, ನಾಡಿಗೆ ಅಮೂಲ್ಯ ಆಸ್ತಿಯಾಗುತ್ತಾನೆ. "A good name is more weight than a bag a gold" ಎನ್ನುವಂತೆ ಕೀರ್ತಿಶಾಲಿಯಾಗುತ್ತಾನೆ. ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಅಂಥ ವ್ಯಕ್ತಿ ಧನಾತ್ಮಕ ಚಿಂತನೆಯಿಂದ ಯೋಚಿಸಿ ಸಮಸ್ಯೆಯಿಂದ ಪಾರಾಗಿ ಯಶಸ್ಸು ಸಾಧಿಸುತ್ತಾನೆ.

ಮೇರಿ ಎಡ್ಡಿ ಬೇಕರ್ ಎನ್ನುವ ಅಮೇರಿಕಾ ದೇಶದ ಮಹಿಳೆಯೊಬ್ಬಳು ತನ್ನ ಗಂಡನನ್ನು ಅಪಘಾತದಲ್ಲಿ ಕಳೆದುಕೊಂಡು ಮರು ಮದುವೆಯಾದಾಗ ಆತ ಕೂಡ ಅವಳನ್ನು ತೊರೆದು ಹೋಗುವಾಗ ಆಕೆ ಒಂದು ಮಗುವಿನ ತಾಯಿಯಾಗಿರುತ್ತಾಳೆ. ತೀವ್ರವಾದ ಬಡತನ ತಾಳಲಾರದೇ ತನ್ನ ಮಗು ಚೆನ್ನಾಗಿರಲೆಂದು ಅನಿವಾರ್ಯವಾಗಿ ಬೇರೆಯವರಿಗೆ ನೀಡಿ, ನಂತರ ಆ ನೋವನ್ನು ಮರೆಯಲಾರದೇ ನಿತ್ರಾಣಳಾಗುತ್ತಾಳೆ. ದೈಹಿಕವಾಗಿ ಕ್ಷೀಣಿಸುತ್ತಾ ಜೀವನ ಮಾಡುತ್ತಿರುವಾಗ ದಾರಿಯಲ್ಲೊಮ್ಮೆ ಬಿದ್ದು ಬೆನ್ನು ಮೂಳೆ ಮುರಿದು ಆಸ್ಪತ್ರೆ ಸೇರುತ್ತಾಳೆ ವೈದ್ಯರು ಇವಳನ್ನು ಪರೀಕ್ಷಿಸಿ ಈಕೆ ಬದುಕಲಾರಳೆಂದು ಬದುಕಿದರೂ ಈಗ ನಡೆಯಲಾರಳೆಂದು ಘೋಷಿಸಿಬಿಡುತ್ತಾರೆ. ಸೋಲುಗಳ, ನೋವುಗಳ ಸರಮಾಲೆಗಳಿಂದ ನೊಂದು ಬೆಂದ ಆಕೆ ಬೈಬಲ್‌ನ ಒಂದು ಅದ್ಭುತ ವಾಕ್ಯದಿಂದ ಉತ್ತೇಜನಗೊಳ್ಳುತ್ತಾಳೆ. ಮಾನಸಿಕ ಸ್ಥಿರತೆಯಿದ್ದು, ದೃಢ ಸಂಕಲ್ಪವಿದ್ದರೆ ಪವಾಡ ಸದೃಶವಾದ ಘಟನೆಗಳು ನಡೆದೇ ತೀರುತ್ತವೆ ಎಂಬ ಮಾತನ್ನು ಓದಿ ಅವಳು ಕೂಡ ಗಟ್ಟಿ ಮನಸ್ಸಿನ ಸಂಕಲ್ಪ ಮಾಡಿದಾಗ ಅವಳ ಮೈಮನದಲ್ಲಿ ಮಿಂಚಿನ ಸಂಚಾರವಾಗಿ ದಿನೇ ದಿನೇ ಚೇತರಿಸಿಕೊಂಡು ಆರೋಗ್ಯವಂತಳಾಗಿ ಬಿಡುತ್ತಾಳೆ. ಇದರಿಂದ ಪ್ರೇರಣೆಗೊಂಡ ಆಕೆ ಮುಂದೆ "ಕ್ರಿಶ್ಚಿಯನ್ ಸೈನ್ಸ್" ಎಂಬ ಸಂಸ್ಥೆ ಸ್ಥಾಪಿಸಿ ತನ್ನಂತೆ ನೊಂದ ಮಹಿಳೆಯರಿಗೆ ಧೈರ್ಯ ತುಂಬಿ ವಿಶ್ವ ವಿಖ್ಯಾತಳಾಗಿ, ಆರ್ಥಿಕವಾಗಿಯೂ ಸಮೃದ್ಧಗೊಂಡು ಮನೆಮಾತಾಗಿ ಸಾರ್ಥಕ್ಯ ಜೀವನ ಸುದೀರ್ಘಕಾಲ ನಡೆಸುತ್ತಾಳೆ.

ಮನುಷ್ಯ ತನ್ನ ಆಲೋಚನೆಗಳನ್ನು ಧನಾತ್ಮಕವಾಗಿಟ್ಟು

ಕೊಂಡರೆ ಖಂಡಿತಾ ಗೆದ್ದೇ ಗೆಲ್ಲುತ್ತಾನೆ. Our life is what our thought make it ಎನ್ನುವ ಎಂಟು ಪದಗಳು ಜೀವನದ ಗಂಟು(ಸಂಪತ್ತು) ಆಗುತ್ತದೆ 'ಅನ್ಯರ ಅನುಚಿತ ನಿಂದನೆಯನ್ನು ವರ್ತನೆಯನ್ನು ಸೈರಿಸುವ ವ್ಯಕ್ತಿ ಜಗತ್ತನ್ನು ಗೆಲ್ಲಬಲ್ಲ' ಎನ್ನುವ ಅನುಭವದ ಮಾತಿದೆ. ನಮ್ಮ ಸುತ್ತಮುತ್ತ ನಡೆದ ಘಟನೆಗಳನ್ನು ಅರ್ಥೈಸಿಕೊಂಡು ಮುನ್ನಡೆಯಬೇಕಾಗುತ್ತದೆ.

"ಒಳಗೊಳಗೇ ಬೇರು ಹುಯ್ದು
ನನ್ನನ್ನು ಸಾಕಿ ಸಲುಹುವ ನಿಮ್ಮ
ಕಪಟ, ಗೊತ್ತಿದ್ದರೂ ಗೊತ್ತಿಲ್ಲದಂತೆ
ನಿಮ್ಮೊಂದಿಗೆ ಕಾಫಿ ಕುಡಿದು, ಪೇಪರೋದಿ
ಹರಟುವುದಿದೆ ನೋಡಿ ಅದು ಬಲು ಕಷ್ಟದ ಕೆಲಸ"

ಎಂಬ ನಿಸಾರ್ ಅಹಮದ್‌ರವರ ಮಾತುಗಳು ನಮಗೆ ಎಚ್ಚರ ನೀಡುತ್ತದೆ.

ಅಂಥ ಸ್ವಭಾವದಿಂದ ದೂರವಿದ್ದು ನಾವು ಇತರರೆಡೆಗೆ ಪ್ರಾಮಾಣಿಕ ಕಾಳಜಿ ತೋರಿದರೆ ನಮ್ಮ ಜೀವನ ಸಂತಸದ ಬುಗ್ಗೆಯಾಗುತ್ತದೆ.

ಪ್ಲಾಸ್ಟಿಕ್ ಹೂವುಗಳನ್ನು ಎಷ್ಟು ಶೇಖರಿಸಿಟ್ಟುಕೊಂಡರೂ ನಮ್ಮ ಮನೆಗೆ ಒಂದು ದುಂಬಿಯೂ ಬರುವುದಿಲ್ಲ. ಆದರೆ ನಮ್ಮ ಮನೆಯ ಹಿತ್ತಲಿನಲ್ಲಿ ಹತ್ತಾರು ಗಿಡಗಳಿಂದ ಹೂವುಗಳು ಅರಳಿದರೆ ನೂರಾರು ದುಂಬಿಗಳು ಬರುತ್ತವೆ. ನಾವೇನು ಅವುಗಳಿಗೆ ಆಹ್ವಾನ ನೀಡಿರುತ್ತೇವೆಯೇ? ಖಂಡಿತಾ ಇಲ್ಲ, ತನ್ನ ಸಹಜ ಪರಿಮಳದಿಂದ ಹೂವು ದುಂಬಿಯನ್ನು ಆಕರ್ಷಿಸುವಂತೆ ದಿವ್ಯ ಗುಣಗಳಿಂದ ವ್ಯಕ್ತಿತ್ವ ಅರಳಿದಾಗ ಸಜ್ಜನರು ನಮ್ಮತ್ತ ಬಂದು ನಮ್ಮ ಜೀವನವನ್ನು ಜೇನಾಗಿಸುತ್ತಾರೆ.

"The smell of a flower goes only with the wind but the fame of goodmen goes even against the wind". ಎನ್ನುವ ಅದ್ಭುತವಾದ ಮಾತು ರೋಮಾಂಚನಗೊಳಿಸುತ್ತದೆ.

ಪ್ರತಿ ದಿನದ ಪ್ರಾಮಾಣಿಕ ಕೆಲಸ, ಸಮರ್ಪಕ ಚಟುವಟಿಕೆ, ಸವಿನಯ ನಡೆ-ನುಡಿಗಳು ಹಾಗೂ ಉದಾರ ಸತ್ಕರ್ಮಗಳನ್ನು ಹಸನ್ಮುಖರಾಗಿ ಮಾಡಿದರೆ ಸರ್ವತೋಮುಖ ಏಳಿಗೆ ಆಗುತ್ತದೆ. ಲೋಕದ ಡೊಂಕ ತಿದ್ದುವುದು ಬಿಟ್ಟು ಏಕನಿಷ್ಠೆ ಹಾಗೂ ಏಕಾಗ್ರತೆಯಿಂದ ಮುನ್ನುಗ್ಗಿ ಬಿಡದ ಛಲವನ್ನು ಹೊಂದಿ ಮನೋಚಾಂಚಲ್ಯವನ್ನು ಬದಿಗಟ್ಟುವ ಪ್ರಯತ್ನ ಶೀಲ ವ್ಯಕ್ತಿ ಮಾತ್ರವೇ ತನ್ನ ಆಸುಪಾಸಿನ ಜನಸಾಮಾನ್ಯರು ತರಗೆಲೆಗಳಂತೆ ಚದುರಿ ನಿರ್ನಾಮವಾಗು ವಂಥ ಪರಿಸ್ಥಿತಿಯಲ್ಲೂ ತಾನೂ ಮುಗಿಲೆತ್ತರಕ್ಕೇರಿ ಗೋಪುರದಂತೆ ದೃಢವಾಗಿ ಕಂಗೊಳಿಸುತ್ತಾನೆ. ನಾವು ಯಾವಾಗ ಯಾರ ಮೇಲೆ ದೂರು ಹೇಳದೆ ಸತ್ಯನಿಷ್ಠೆಯಿಂದ ನಡೆಯುತ್ತೇವೆಯೋ ಜವಾಬ್ದಾರಿಯನ್ನು ಹೊರಲು ಸಿದ್ಧರಾಗುತ್ತೇವೆಯೋ ನಿರ್ಮಲ ಮನಸ್ಸಿನಿಂದ ನಿಶ್ಚಿಂತರಾಗಿರುತ್ತೇವೆಯೋ ಆಗ ನಮ್ಮ ವ್ಯಕ್ತಿತ್ವ ವರ್ಣನೆಗೂ ಸಿಗದಷ್ಟು ರೋಚಕವಾಗಿರುತ್ತೇವೆ.

"ಪ್ರಪಂಚವನ್ನು ಗೆಲ್ಲುವಷ್ಟು ಸುಲಭವಲ್ಲ ಮನಸ್ಸನ್ನು ಗೆಲ್ಲುವುದು" ಯಯಾತಿ ಕಾದಂಬರಿಯಲಿ ಯತಿ ಹೇಳುವ ಈ ಮಾತು ಸತ್ಯವಾದುದೇ ಆದರೂ ಇದಕ್ಕೂ ಸವಾಲೊಡ್ಡಿ ನಿಂತು ಮನೋನಿಯಂತ್ರಣ ಸಾಧಿಸಿದರೆ ಆಗ ನಾವು ನಿಜವಾದ ಸಿರಿವಂತರಾಗುತ್ತೇವೆ ನಾವು ಎಷ್ಟು ಹೊಂದಿರುತ್ತೇವೆ ಎಂಬುದು ಸಿರಿತನದ ಮಾನದಂಡವಲ್ಲ. ನೈಜ ಸಿರಿತನವೆಂದರೆ ನಾವು ಬೇರೆಯವರಿಗೆ ಎಷ್ಟು ಪ್ರಮಾಣದಲ್ಲಿ ನೀಡುತ್ತೇವೆ. ಅಷ್ಟು ಪ್ರಮಾಣದಲ್ಲಿ ನಮ್ಮ ಸಿರಿತನ ಇರುತ್ತದೆ ಎನ್ನುವುದು ಅರ್ಥಪೂರ್ಣವಾದ ಮಾತಾಗುತ್ತದೆ. ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಎನ್ನುವುದು ಇದನ್ನು ಪುಷ್ಟೀಕರಿಸುತ್ತದೆ. ರಟ್ಟೆ ಮುರಿದು ಗಳಿಸಿ ತಂದ ರೊಟ್ಟಿ ತಿನ್ನಲು ರುಚಿಯಾಗಿರುವಂತೆ ಕಾಯಕದ ಮಾರ್ಗ ದೃಢ ಮನಸ್ಸಿನಿಂದ ಪ್ರಾಮಾಣಿಕವಾಗಿ ಸಾಗಿ ಯಶಸ್ಸು ತರುತ್ತದೆ. "ಪಡೆದವರು ಚೆನ್ನಾಗಿ ತಿನ್ನಬಹುದು, ಕೊಟ್ಟವರು ಚೆನ್ನಾಗಿ ನಿದ್ರಿಸುವರು" ಎಂಬ ಕೊಡುವ ಸುಖದ ಈ ಮಾತು ಪರಸ್ಪರ ಸಾಮಾರಸ್ಯಕ್ಕೆ ದಾರಿಯಾಗುತ್ತದೆ.

ಇಂಥ ಗುಣಗಳಿಂದ ಮನಸ್ಸು ಹದಗೊಂಡಾಗ ಅಮೆರಿಕಾದ ಶೋವಾಬ್‌ರಂತೆ ಸಂವಹನ ಕಲೆಯಿಂದ ಯಾರೂ ಪಡೆಯಲಾಗದಷ್ಟು ವೇತನ ಪಡೆಯಬಹುದು. ಜಿಮ್ ಕಾರ್ವೆಯಂತೆ ೫೦ ಸಾವಿರ ಜನರ ಹೆಸರನ್ನು ಜ್ಞಾಪಕದಲ್ಲಿಟ್ಟುಕೊಳ್ಳುವಷ್ಟು ಮನಸ್ಸಿನ ಶಕ್ತಿಗಳಿಸಿ ವಿಜಯಶಾಲಿಯಾಗಬಹುದು. ಮೆದುವಾಗಿ ಹರಿಯುವ ನೀರು ಸತತವಾಗಿ, ನಿರಂತರವಾಗಿ ಹರಿದು ಬೆಟ್ಟ-ಗುಡ್ಡಗಳನ್ನೇ

ಕೊರೆದು ಮುಂದೆ ಸಾಗುವುದಿಲ್ಲವೇ?

ಚಿಕ್ಕ ವಯಸ್ಸಿನಲ್ಲಿ ನಾವು ನೀವೆಲ್ಲಾ ಭೂತ ಕನ್ನಡಿ (ರೂಢಿಗತವಾಗಿ)ಯನ್ನು ಹಿಡಿದು, ಸತತವಾಗಿ ಪ್ರಯತ್ನಿಸಿ ಕಾಗದದ ಚೂರುಗಳನ್ನು ಸುಡುತ್ತಿದ್ದುದು ನೆನಪಿಲ್ಲವೇ?

ಹಾಗೆಯೇ ಸತತವಾದ ಪ್ರಯತ್ನಗಳಿಂದ ಮನಸ್ಸನ್ನು ಹದಗೊಳಿಸಿ ಆ ಮೂಲಕ ಎಲ್ಲಾ ರೀತಿಯ ಸುಖ-ಸಂತೋಷ-ನೆಮ್ಮದಿಯಿಂದ ಕೂಡಿಸಿ ಅರ್ಥಪೂರ್ಣ ಜೀವನ ನಡೆಸಬಹುದು.

"ಮೋಡ ತೇಲಿ ಬಂದಾಗ ಆ ಸೂರ್ಯನೇ ಕ್ಷಣಕಾಲ ಮರೆಯಾಗುತ್ತಾನೆ. ಸೂರ್ಯಗ್ರಹಣ, ಚಂದ್ರಗ್ರಹಣವೂ ಆಗುತ್ತದೆ. ಹಾಗೆಯೇ ಜೀವನದಲ್ಲಿ ಬರುವ ಸಮಸ್ಯೆಗಳು ತಾತ್ಕಾಲಿಕವಾಗಿ ಬಂದು ಹೋಗುತ್ತವೆ. "Fortune favours the bold". ಎನ್ನುವಂತೆ ಧೈರ್ಯದಿಂದ ಮುನ್ನಡೆದರೆ ದೇವರು ಕೂಡ ತನ್ನ ಆಶೀರ್ವಾದ ನೀಡುತ್ತಾನೆ. ಶಿವಲಿಂಗದ ಮೇಲಿನ ಧಾರಾಪಾತ್ರೆಯನ್ನು ನೀವು ನೋಡಿದ್ದೀರಾ ಅದರಿಂದ ಹನಿಹನಿಯಾಗಿ ಬೀಳುವ ಜಲದಂತೆ ದಿನ ನಿತ್ಯವೂ ಹಂತಹಂತವಾಗಿ ಮೇಲಿನ ವಿಷಯಗಳನ್ನೆಲ್ಲಾ ನಿಮ್ಮದಾಗಿ ಮಾಡಿಕೊಂಡರೆ ಮನಸ್ಸು ಪ್ರಸನ್ನವಾಗುತ್ತದೆ. ಯಾವುದೇ ಔಷಧಿ, ಟಾನಿಕ್ಕುಗಳಿಗಿಂತ ಇದು ಹೆಚ್ಚಿನ ಆರೋಗ್ಯ ನೀಡಿ ಜೀವನ ಮಧುರವಾಗುತ್ತದೆ. ನಗುವೆಂಬ ಬೆಲೆ ಕಟ್ಟಲಾಗದ ಆಭರಣವನ್ನು ಧರಿಸಿ ನಿನ್ನೆ ನಿನ್ನೆಗೆ ನಾಳೆ ನಾಳೆಗೆ ಇಂದು ನಮ್ಮದೆ ಚಿಂತೆ ಏತಕೆ" ಎಂಬ ಹಾಡನ್ನು ಗುನುಗುನಿಸಿ, ಆಗ ಇಂದಿನ ದಿನವೂ ಸುದಿನವಾಗಿ ಮಂಗಳಕರವಾಗುತ್ತದೆ.



◆ ಶಿವರಂಜಿನಿ ಎಂ.
ಅಂತಿಮ ಬಿ.ಕಾಂ.

## ಅಮೃತತೆಯತ್ತ ತಾಯಿ ದೇವರು

"ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ" ಈ ಗಾದೆ ಚಿರಪರಿಚಿತ. 'ತಾಯಿ' ಎರಡಕ್ಷರದಲ್ಲಿ ಎಂತಹ ಉತ್ಸಾಹ, ಚೈತನ್ಯವಿದೆ ಎಂದರೆ ಅದನ್ನು ವರ್ಣಿಸಲು ಪದಗಳೆ ಇಲ್ಲ ಎಂದೆನಿಸುತ್ತದೆ. ತಾಯಿ ಒಂದು ಅಪೂರ್ವ ಕೊಡುಗೆ. ಕ್ಷಮಯಾಧರಿತ್ರಿ, ಶಕ್ತಿಯ ಶಿಖರ.

ಈ ಜಗತ್ತಿನಲ್ಲಿ ಯಾವುದೇ ವಸ್ತುವನ್ನು ಕಳೆದುಕೊಂಡರೂ ಪುನಃ ಪಡೆಯಬಹುದು ತಾಯಿಯನ್ನು ಮಾತ್ರ ಪಡೆದುಕೊಳ್ಳುವುದು ಅಸಾಧ್ಯ. ಬೆಲೆ ಕಟ್ಟಲಾರದಂತಹ ಅದ್ಭುತ ಶಕ್ತಿ ತಾಯಿ. ತನ್ನ ಮಕ್ಕಳ ಪಾಲನೆ - ಪೋಷಣೆಯಲ್ಲಿ ಅವಳ ಪಾತ್ರ ಅನನ್ಯ. ಸಮಾಜದಲ್ಲಿ ತನ್ನ ಮಕ್ಕಳು ಗಣ್ಯರೆನಿಸಿಕೊಳ್ಳಬೇಕೆಂದು ತುಂಬಾ ಶ್ರಮ ಪಡುತ್ತಾಳೆ.

ಜಾನಪದ ಸಾಹಿತ್ಯದಲ್ಲಿ ಒಬ್ಬ ತಾಯಿ ತನ್ನ ಮಕ್ಕಳ ಬಗ್ಗೆ,

ಆಚಾರಕರಸಾಗು ನೀತಿಗೆ ಪ್ರಭುವಾಗು
ಮಾತಿನಲ್ಲಿ ಚೂಡಾಮಣಿಯಾಗು ನನ ಕಂದ
ಜ್ಯೋತಿಯೇ ಆಗು ಜಗಕೆಲ್ಲ

ಎಂಬ ಅದ್ಭುತ ನಿರೀಕ್ಷೆಯನ್ನು ಕಂಡಿದ್ದಾಳೆ.

ತನ್ನ ಮಕ್ಕಳ ಸುಖ-ದುಃಖದಲ್ಲಿ ತನ್ನ ಸುಃಖ - ದುಃಖ ಕಾಣುತ್ತಾಳೆ ಎಂಬುದಕ್ಕೆ

"ಬಡತನ ನನಗಿರಲಿ ಬಾಳು ಮಕ್ಕಳಿಗಿರಲಿ
ಮ್ಯಾಗ ಗುರುವಿನ ದಯವಿರಲಿ ಭಗವಂತ
ಬಡತನದ ಚಿಂತೆ ನಿನಗಿರಲಿ"

ತಾಯಿಯ ಅಗಾಧ ಪ್ರೀತಿ, ಆಳವಾದ ವಾತ್ಸಲ್ಯ, ವಿಶಾಲವಾದ ತ್ಯಾಗದ ಮುಂದೆ ಏನನ್ನೂ ಹೋಲಿಸಲಾಗದು. ತಾಯಿ ಇಲ್ಲದ ಮನೆಗೂ, ದೇವರಿಲ್ಲದ ಗುಡಿಗೂ ವ್ಯತ್ಯಾಸವಿಲ್ಲ. ನಿಸ್ವಾರ್ಥತೆಗೆ ಮತ್ತೊಂದು ಹೆಸರೆ ತಾಯಿ. ಇತ್ತೀಚಿನ ದಿನಗಳಲ್ಲಿ ತುತ್ತು ಕೊಟ್ಟು, ತನ್ನ ರಕ್ತವನ್ನು ಬಸಿದು ಜನ್ಮವಿತ್ತ ತಾಯಿಗೆ ಎಳ್ಳಷ್ಟೂ ಗೌರವಿಸುವುದಿಲ್ಲ. ಇದು ನಮ್ಮ ನಾಡಿನ ಸಂಸ್ಕೃತಿಗೆ ಧಕ್ಕೆ ತರುವ ವಿಷಯವಾಗಿದೆ. ಬೆಳೆದು ದೊಡ್ಡವರಾಗುವವರೆಗೆ, ನಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವವರೆಗೆ ಮಾತ್ರ ತಾಯಿ ಬೇಕು. ಆದರೆ ತಾಯಿಯನ್ನು ಕೀಳಾಗಿ ಕಾಣುವವರಿಗೆ ನರಕ ಪ್ರಾಪ್ತಿಯಂತೂ ತಪ್ಪಿದ್ದಲ್ಲ. ವೇದದಲ್ಲಿ "ಮಾತೃದೇವೋ ಭವ" ಎಂದು ಹೇಳಿರುವುದು ಸಾರ್ಥಕವಾಗಿದೆ. ದೇವರನ್ನು ಪೂಜಿಸಿ ಜೀವಂತ ಅವಳ ಆಶೀರ್ವಾದಕ್ಕೆ ಪಾತ್ರರಾಗಬೇಕು.

"ತಾಯಿಯೆಂದರೆ ನಿಸ್ಸೀಮ ಸೇವೆಯ ಮೂರ್ತಿ" - ವಿನೋಬಾ ಭಾವೆಯವರ ಮಾತಿನಂತೆ ತಾಯಿ ನಿಸ್ವಾರ್ಥತೆಯ ದೇವರು.



# ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟದ ಐತಿಹಾಸಿಕ ಹಿನ್ನಲೆ

◆ ರಂಜಿತ ವಿ.
ಪ್ರಥಮ ಬಿ.ಎ. (ಹೆಚ್.ಇ.ಕೆ.)

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೋಕಿನಿಂದ ಸುಮಾರು 24 ಕಿ.ಮೀ. ದೂರದಲ್ಲಿ ಶ್ರೀ ಬಿಳಿಗಿರಿರಂಗನಾಥ ಸ್ವಾಮಿ ಬೆಟ್ಟವಿದೆ. ಈ ಕ್ಷೇತ್ರವನ್ನು 'ಹರಿಹರ ಕ್ಷೇತ್ರ' ಮತ್ತು 'ಸಹ್ಯಾದ್ರಿಬೆಟ್ಟ'ವೆಂದು ಕೂಡ ಕರೆಯುತ್ತಾರೆ. ಈ ಬೆಟ್ಟವು ಸಮುದ್ರಮಟ್ಟದಿಂದ 5091 ಅಡಿ ಪರ್ವತ ಶ್ರೇಣಿಗಳಿಂದ ಕೂಡಿರುತ್ತದೆ. ಈ ದೇವಾಲಯ ದ್ರಾವಿಡಶೈಲಿಯಲ್ಲಿದ್ದು, ಶ್ರೀ ಬಿಳಿಗಿರಿ ರಂಗನಾಥ ಸ್ವಾಮಿ ವಿಗ್ರಹವನ್ನು 'ವಶಿಷ್ಠ' ಮಹಾಮುನಿಗಳು ಸ್ಥಾಪಿಸಿದ್ದು, ಇದು 5.5 ಅಡಿಯಿದ್ದು, ಪೂರ್ವದಿಕ್ಕಿಗೆ ಮುಖಮಾಡಿ ನಿಂತಿದೆ. ಪಕ್ಕದಲ್ಲೇ ಶ್ರೀ ಅಲುಮೇಲಮ್ಮನವರ ವಿಗ್ರಹದ ಗುಡಿಯಿದ್ದು, ಈ ದೇವಾಲಯಗಳನ್ನು 'ವಿಷ್ಣುವರ್ಧನ' ರಾಜ ಜೀರ್ಣೋದ್ಧಾರ ಮಾಡಿಸಿದನು. ಈ ಸ್ವಾಮಿಯನ್ನು 'ಬಿಳಿಕಲ್ಲು ತಿರುವೆಂಕಟನಾಥ' ಎಂದು ಕೂಡ ಕರೆಯಲಾಗುತ್ತದೆ.

ಈ ದೇವಾಲಯಗಳ ಪಕ್ಕದಲ್ಲೇ 'ಕೊಮರಿ'ಯಿದ್ದು ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯ ಸವಿಸಲು ಪ್ರಸಿದ್ಧವಾದ ಸ್ಥಳವಾಗಿದೆ. ಈ ಕ್ಷೇತ್ರಕ್ಕೆ 'ಹರಿಹರ ಕ್ಷೇತ್ರ'ವೆಂದು ಕರೆಯಲು ಕಾರಣವೇನೆಂದರೆ ಇಲ್ಲಿ ಒಂದು 'ಸೋಮರಸನ' ಕೆರೆಯಿದ್ದು. ಅದರ ದಡದಲ್ಲಿ ಶ್ರೀ ಉದ್ಭವಮೂರ್ತಿ ಗಂಗಾಧರೇಶ್ವರ ಸ್ವಾಮಿ ದೇವಾಲಯ ಇದ್ದು, ಹರಿ ಎಂದರೆ ವಿಷ್ಣು, ಹರ ಎಂದರೆ ಶಿವ. ಆದ್ದರಿಂದ ಈ ಕ್ಷೇತ್ರವು ಹರಿಹರಕ್ಷೇತ್ರವೆಂದು ಕೂಡ ಪ್ರಸಿದ್ಧವಾಗಿದೆ. ಬಿಳಿಗಿರಿರಂಗನಾಥ ಕ್ಷೇತ್ರವು ಪ್ರಸಿದ್ಧ ವನ್ಯಧಾಮ ತಾಣವಾಗಿದ್ದು ಪೂರ್ವ ಮತ್ತು ಪಶ್ಚಿಮಗಳ ಕೊಂಡಿ ಎಂದರೆ ತಪ್ಪಾಗುವುದಿಲ್ಲ. ಏಷ್ಯಾದ ಆನೆಗಳು. ಬಿಳಿಪಟ್ಟೆಗಳ ಹುಲಿಗಳ ವಾಸಕ್ಕೆ ಯೋಗ್ಯವಾಗಿದ್ದು, 'ರಾಷ್ಟ್ರೀಯ ಹುಲಿ ಸಂರಕ್ಷಣ ಯೋಜನೆಗೆ' ಒಳಪಟ್ಟಿದೆ. ಈ ತಾಣದಲ್ಲಿ ಸುಮಾರು 700ಕ್ಕೂ ಹೆಚ್ಚು ವೈವಿಧ್ಯಮಯ ಸಸ್ಯಪ್ರಭೇದಗಳಿವೆ. ಈ ಪ್ರದೇಶದಲ್ಲಿ ಬಹಳ ಹಿಂದಿನಿಂದಲೂ ಸೋಲಿಗರು ವಾಸಮಾಡುತ್ತಾ ಬಂದಿದ್ದು, ಇಲ್ಲಿ ಸಿಗುವ ಅರಣ್ಯ ಉತ್ಪನ್ನವೇ ಅವರ ಬದುಕಿಗೆ ಆಸರೆಯಾಗಿದೆ.

ಈ ಬೆಟ್ಟದ ಸಮೀಪದಲ್ಲೇ 'ಭಾರ್ಗವ' ನದಿಯು ಹರಿಯುತ್ತಿದ್ದು, ಈ ಸ್ಥಳಕ್ಕೆ 'ಪರಶುರಾಮರು' ತಪಸ್ಸಿಗೆ ಬಂದು ಹೋಗಿದ್ದರು ಎಂದು ಹೇಳಲಾಗಿದೆ. ಈ ದಡದಲ್ಲೇ ಬೃಹದಾಕಾರದ ದೊಡ್ಡಸಂಪಿಗೆ ಮರವಿದ್ದು, ಇದನ್ನು ಸೋಲಿಗರು 'ದೊಡ್ಡ ಸಂಪಿಗೆ ಒಡೆಯ' ಎಂದು ಕರೆಯುತ್ತಾರೆ. ಈ ಸ್ಥಳದಲ್ಲಿ ಸೋಲಿಗರು ಅಥವಾ ಗಿರಿಜನರು ವರ್ಷಕ್ಕೆ ಒಂದು ಬಾರಿ ಶಿವರಾತ್ರಿ ಅಥವಾ ಯುಗಾದಿ ಹಬ್ಬಗಳಲ್ಲಿ ರೊಟ್ಟಿಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ.

ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತ ಹಲವು ಪ್ರವಾಸಿ ತಾಣವಿದೆ. ಅದರಲ್ಲಿ ಕೆ. ಗುಡಿ (ಗುಡಿಹಟ್ಟಿ) ಎಂಬ ನಿಸರ್ಗತಾಣವಿದ್ದು, ಇಲ್ಲಿ ಕರ್ನಾಟಕ ಜಂಗಲ್ ಲಾಡ್ಜ್ ಪ್ರವಾಸೋದ್ಯಮ ಕೆಲಸಮಾಡುತ್ತದೆ. ಜೊತೆಗೆ ಅರಣ್ಯ ಇಲಾಖೆಯ ಅತಿಥಿಗೃಹವಿದ್ದು, ಆನೆ ಸಫಾರಿ ಮತ್ತು ವನ್ಯಜೀವಿ ಸಫಾರಿ ಬಹಳ ಪ್ರಸಿದ್ಧ, 200ಕ್ಕೂ ಅಧಿಕ ಪಕ್ಷಿಸಂಕುಲಗಳು ಇಲ್ಲಿದ್ದು, ದೇಶ ಮತ್ತು ವಿದೇಶಗಳಿಂದ ಪ್ರವಾಸಿಗರು ಬರುತ್ತಿದ್ದು, 'ಗುಡಿಹಟ್ಟಿ' ಪ್ರಕೃತಿ ಸಂಶೋಧಕರಿಗೆ ರಮ್ಯತಾಣವಾಗಿದೆ. ಇಲ್ಲಿನ ಜೋಡಿಗೆರೆಯು ಪ್ರಕೃತಿಯ ಅಪ್ರತಿಮ ಕೊಡುಗೆ, ನಿಂತು ನೋಡಿದರೆ ನೋಡಿದಷ್ಟು ಆನಂದ. ವಿಶಾಲ ಹುಲ್ಲುಗಾವಲು, ಕೋಲಾ ಅರಣ್ಯಪ್ರದೇಶ, ಮನಬಿಚ್ಚಿ ಓಡಾಡುವ ವನ್ಯಜೀವಿಗಳು, ಸುಯ್‌ಗುಟ್ಟುವ ತಂಗಾಳಿ ಇವೆಲ್ಲವೂ ಒಂದು ಮಾಯಾಲೋಕವನ್ನು ಸೃಷ್ಟಿಸುತ್ತದೆ. ಜಗತ್ತಿನ ಅಪರೂಪ ಪ್ರದೇಶವೆಂಬಂತೆ ವನ್ಯಜೀವಿಗಳು ಹುಲ್ಲುಗಾವಲಿನಲ್ಲಿ ಗುಂಪುಗುಂಪಾಗಿ ನೋಡಿದರೆ ಇದೊಂದು 'ಮಿನಿ ಜುರಾಸಿಕ್' ಪಾರ್ಕಿನಂತೆ ಕಾಣುತ್ತದೆ. ಹಾಗೂ ಬೇಡಿಗುಳಿ, ಹೊನ್ನಮೇಟಿ, ಅತ್ತಿಖಾನಿ ಮುಂತಾದ ಅರಣ್ಯಪ್ರದೇಶಗಳು ನಿಸರ್ಗಪ್ರೇಮಿಗಳಿಗೆ ಹೇಳಿ ಮಾಡಿಸಿದಂತಿದೆ.

## ಅಮ್ಮ



◆ ತ್ರಿವೇಣಿ ಎಂ.
ಅಂತಿಮ ಬಿ.ಎ. (ಹೆಚ್.ಇ.ಕೆ.)

ಅಮ್ಮ ಎನ್ನುವ ಪದವೆ ಒಂದು ಸುಂದರ ಕಾವ್ಯ. ಅವಳು ಪ್ರೀತಿ ಮಮತೆ, ವಾತ್ಸಲ್ಯಗಳ ಪ್ರತಿರೂಪ. ತಾಯಿ ಪ್ರೀತಿ ಮಮತೆಗೆ ಅವಳೇ ಸರಿಸಾಟಿ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ದೇವರ ಪ್ರತಿರೂಪ ಅವಳು. ನಿಷ್ಕಲ್ಮಶ ಪ್ರೀತಿ ಎಂದರೆ ತಾಯಿಯದು. ಮಾತ್ರ ಆದುದರಿಂದಲೇ 'ಮಾತೃದೇವೋಭವ' ಎಂದಿರುವುದು. ಯಾವ ಪ್ರತಿಫಲವನ್ನ ಬಯಸದೆ ಮಕ್ಕಳನ್ನು ಪ್ರೀತಿಸಿ, ಮುದ್ದಿಸಿ, ಸಾಕಿ, ಸಲಹಿ, ವಿದ್ಯಾವಂತರನ್ನಾಗಿ ಮಾಡಿ ಹರಸುವ ತಾಯಿಯನ್ನಲ್ಲ ಇನ್ನು ದೂರನ್ನು ತಾನೆ ದೇವರು ಎನ್ನುವುದು. 'ತಾಯಿ' ಎಂದರೆ ನಿಸ್ವಾರ್ಥ, ಸತ್ಯ, ಮಮತೆ, ಆತ್ಮವಿಶ್ವಾಸ, ಹೃದಯ ಶ್ರೀಮಂತಿಕೆ, ನಂಬಿಕೆ, ವಿಶ್ವಾಸ ಕರುಣೆ, ಸಹನಾಮೂರ್ತಿ. ಅವಳ ಮನಸ್ಸಿನ ವ್ಯಕ್ತಿತ್ವದ ಸೌಂದರ್ಯ ಬಹುದೊಡ್ಡದು. ಅವಳು ತನ್ನ ಮಕ್ಕಳ ಮೇಲೆ ತೋರುವ ಪ್ರೀತಿ, ಮಮತೆ ವಾತ್ಸಲ್ಯಕ್ಕೆ ಯಾವುದೇ ನಿರೀಕ್ಷೆಯನ್ನು ಬಯಸುವುದಿಲ್ಲ ಬದಲಿಗೆ ಮಕ್ಕಳ ನಗುವಿನಲ್ಲೇ ಅವಳ ನೋವನ್ನು ಮರೆಯುತ್ತಾಳೆ.

ಅಮ್ಮ ಎನ್ನುವ ರಾಗ ಒಂದು ಮೋಹಕ ರಾಗ 'ಕಂದ' ಕರೆವ ಮೊದಲ ಮಾತು 'ಅಮ್ಮ' ಅವಳೇನೆ ಪ್ರಥಮ ಗುರು ಕಲಿವ ಎಲ್ಲ ಪಾಠಕ್ಕೆ ಅಮ್ಮನೇ ದಾರಿದೀಪ ನಡೆಯ ಬಾಳ ಪಯಣಕ್ಕೆ ಅಮ್ಮನೇ ಆರಂಭವು ಎಲ್ಲ ಭವ್ಯ ಚರಿತೆಗೂ ಅವಳನೇ ಜೀವದಾತೆ 'ಅಮ್ಮ' ಮಗುವನ್ನು ಹೆರುವಾಗ ನೋವಿನಲ್ಲೂ ನಗುತ್ತಾಳೆ. ಅದಕ್ಕೂ ಮುಂದೆ ಗಾಯವಾದರೆ ನೋವಿನಿಂದ ಅಳುವಳು. ಆ ಮಗು ಮೊದಲ ಹೆಜ್ಜೆ ಹಾಕುವಾಗ ನೋಡಿ ನೋಡಿ ನಗುವಳು ಆ ಮಗು ಬಿದ್ದಾಗ ಓಡಿ ಬಂದು ಮೇಲೆ ಎತ್ತುವವಳು ಅಮ್ಮ ತಾನೆ. ಇತಿಹಾಸದ ವೀರಾಧಿವೀರರು ಕೀರ್ತಿಯನ್ನು ಪಡೆದದ್ದು ಅಮ್ಮನಿಂದಲೇ ಹುಟ್ಟಿ.

ಜೀವನದ ಹಾದಿಯಲ್ಲಿ ಮರೆಯಲಾಗದ ಮಾಣಿಕ್ಯ ಎಂದರೆ ಅವ್ವ ಮಾತ್ರ.

---

## ಈ ಮೂರನ್ನು ಮರೆಯಬೇಡಿ



◆ ವೀಣಾ ಎನ್.
ಅಂತಿಮ ಬಿ.ಕಾಂ.

| | | |
|---|---|---|
| ಈ ಮೂರನ್ನು ಎಂದಿಗೂ ಮರೆಯದಿರು | - | ಸತ್ಯ, ಶಾಂತಿ, ಅಹಿಂಸೆ |
| ಈ ಮೂವರನ್ನು ಭಕ್ತಿಯಿಂದ ಕಾಣು | - | ತಂದೆ, ತಾಯಿ, ಗುರು |
| ಈ ಮೂರಕ್ಕೆ ಅಂಜುತ್ತಿರು | - | ಸುಳ್ಳು, ನಿಂದನೆ, ಕಳ್ಳತನ |
| ಈ ಮೂವರನ್ನು ಚೇಷ್ಟೆ ಮಾಡದಿರು | - | ಮುದುಕಿ, ಹುಚ್ಚ, ಮೂರ್ಖ |
| ಈ ಮೂರನ್ನು ತ್ಯಜಿಸಬೇಕು | - | ಸ್ವಾರ್ಥ, ನೀಚತನ, ಹೊಟ್ಟೆಕಿಚ್ಚು |
| ಈ ಮೂರು ಮರಳಿ ಬಾರವು | - | ಆಡಿದ ಮಾತು, ಬಿಟ್ಟಬಾಣ, ಹೋದ ಪ್ರಾಣ |
| ಈ ಮೂರನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸು | - | ರಾಷ್ಟ್ರಗೀತೆ, ರಾಷ್ಟ್ರ, ರಾಷ್ಟ್ರಧ್ವಜ |

# ಅಮ್ಮಂದಿರ ಪ್ರಪಂಚ ಚಿಕ್ಕದು, ಪ್ರೀತಿ ಅಳತೆಗೆ ಸಿಗದು



◆ ಕೆ. ಸುಕನ್ಯ
ಅಂತಿಮ ಬಿ.ಕಾಂ.

ಅಮ್ಮಂದಿರ ಪ್ರಪಂಚವೇ ಅಂಥಹದು. ತನ್ನ ಮಕ್ಕಳು ಗಂಡ ಇವೇ ಅವಳಿಗೆ ಗೊತ್ತಿರುವ ಜಗತ್ತು. ಅಲ್ಲಿಂದ ಹೊರ ಬರುವ ಅವಕಾಶ ಇದ್ದರೂ ಆಕೆಗೆ ಅದರಲ್ಲೇ ಸಂತೋಷವಿದೆ. ತೃಪ್ತಿಯಿದೆ. ಪ್ರತಿಯೊಂದು ದಿನವೂ ಅಮ್ಮಂದಿರ ದಿನವೇ ಅಮ್ಮನ ವಾತ್ಸಲ್ಯ, ಪ್ರೀತಿಯ ಬಗ್ಗೆ ಹೊಸದಾಗಿ ಹೇಳುವುದು ಏನೂ ಇಲ್ಲ.

"ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತಾ ರುಚಿ ಇಲ್ಲ" ಹೌದು.... ಗಾದೆಗಳೆಲ್ಲಾ ಅನುಭವದ ಮಾತುಗಳೇ. ಈ ಗಾದೆ ಎಷ್ಟು ಅರ್ಥಬದ್ಧವಾಗಿ ತಾಯಿಯ ಪ್ರಾಮುಖ್ಯತೆಯನ್ನು ಹೇಳುತ್ತಿದೆ. ತಾಯಿಯೇ ಮಕ್ಕಳ ಪಾಲಿಗೆ ಅಪರಂಜಿ ಮನಸಿನ ಸಂಬಂಧಿ. ತಾಯಿಯೇ ಜೀವಂತ ದೇವತೆ ಮಕ್ಕಳನ್ನು ಹೆತ್ತು ಹೊತ್ತು ಒಂದು ಒಳ್ಳೆಯ ಭವಿಷ್ಯ ರೂಪಿಸುವಲ್ಲಿ ತಾಯಿಯ ಪಾತ್ರ ಪ್ರಧಾನವಾದದ್ದು, ತಾಯಿಯೇ ಮಕ್ಕಳ ಒಳ್ಳೆಯ ಭವಿಷ್ಯ ನಿರ್ಮಿಸುವ ಶಿಲ್ಪಿಯಾಗಿರುತ್ತಾಳೆ ಎಂಬುದೆಲ್ಲ ಸಾರ್ವಕಾಲಿಕ ಸತ್ಯ. ಇದು ಯಾವ ಕಾಲಕ್ಕೂ ಬದಲಾಗಲೂ ಸಾಧ್ಯವೇ ಇಲ್ಲ.

ನಾನು ಬೆಳಗ್ಗೆ ಏಳುವದು ದಿನಾಲೂ ತಡವಾಗುತ್ತದೆ. ಕಾಲೇಜಿಗೆ ಹೋಗಬೇಕು, ಬೇಗ ಏಳೋಕೆ ಆಗಲ್ಲಾ ಎನ್ನುವ ಅಮ್ಮನ ಮಂತ್ರಾಕ್ಷತೆ ದಿನವೂ ತಪ್ಪದೇ ಸಿಗುತ್ತದೆ. ಒಂದು ದಿನ ಕಾಲೇಜಿಗೆ ಹೊರಡುವದು ಸ್ವಲ್ಪ ತಡವಾಗಿತ್ತು ಅಮ್ಮನು ನನ್ನ ಹಿಂದೆ ಗೇಟ್ ತನಕ ಬಂದಳು. ಅಮ್ಮ ನೀನೇಕೆ ಬಂದೆ? ನನ್ನ ಹಿಂದೆ ಎಂದು ಕೇಳದೆ, ನಿನಗೆ ಲೇಟ್ ಆಗುತ್ತದೆಯಲ್ಲಾ ಅದಕ್ಕೆ ನೀನು ಗಾಡಿ ತೆಗೆದುಕೊಂಡು ಬರುವಷ್ಟರಲ್ಲಿ ನಾನು ಗೇಟ್ ತೆಗೆಯಲು ಬಂದೆ ಎಂದು ಹೇಳಿದಳು.

ಅಮ್ಮ ನೀನು ನನ್ನ ಸೇವಕಿಯಲ್ಲ ಇನ್ನೂ ಮುಂದೆ ಈತರ ಮಾಡಬೇಡ ಎಂದು ಹೇಳಿದೆ. ನನಗೆ ಅಮ್ಮನ ನೋಡಿ ಪಾಪ ಎನಿಸಿತ್ತು. ತಾಯಿ ಮಕ್ಕಳ ವಿಷಯದಲ್ಲಿ ಎಷ್ಟು ಮುಗ್ಧಳಾಗುತ್ತಾಳೆ. ನನಗೆ ಲೇಟ್ ಆಗುತ್ತಿದೆ ಎಂದು ಎನಿಸಿ ಅವಳ ಕೆಲಸವನ್ನು ಬಿಟ್ಟು ನನಗೆ ಗೇಟ್ ತೆಗೆಯಲು ಬಂದಳು. ಏನು ಅರಿಯದ ಕಂದಮ್ಮನ ಭಾವ ಅವಳಲ್ಲಿ ಕಾಣುತ್ತಿತ್ತು. ಹೆಣ್ಣು ತಾಯಿಯಾದಾಗ ಅವಳಲ್ಲಿನ ಆಸೆಗಳು ಒತ್ತು ಹೋಗುತ್ತವೆ ಎಂದು ಅನಿಸುತ್ತ ಮಗು ಜನಿಸಿದಾಗ ಒಂದು ಹೆಣ್ಣು ತಾಯಿಯಾಗಿ ತನಗೆ ತಾನೆ ಜನ್ಮ ನೀಡಿಕೊಳ್ಳುತ್ತಾಳೆ. ತಾಯಿಯ ನಿಸ್ವಾರ್ಥದ ಸಂವೇದನೆ ಅವಳ ಅಂತಃಕರಣವನ್ನು ಆವರಿಸುತ್ತವೆ. ಅಮ್ಮನ ಹತ್ತಿರ ನಿನಗೆ ನಿನದೇ ಆದ ಆಸೆಗಳಿಲ್ಲವಾ? ಎಂದು ಕೇಳಿದರೆ ನಿಮ್ಮೆಲ್ಲರ ಆಸೆನೇ ನನ್ನಾಸೆ. ನೀವೆಲ್ಲಾ ಚೆನ್ನಾಗಿದ್ದಾರೆ ಸಾಕು ಎನ್ನುತ್ತಾಳೆ. ಬಹುಷಃ ಈ ತಾಯಿಯಂದಿರೆ ಹೀಗೆ.

ಅವಳ ಹೃದಯ ಹಾಗೂ ಮನಸಿಗೆ ಮಕ್ಕಳನ್ನು ಪ್ರೀತಿಸುವದು ಮಾತ್ರ ಗೊತ್ತಿರುತ್ತದೆ. ಅವಳ ಯೋಚನೆ ಹಾಗೂ ಯೋಜನೆಗಳು ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವದರಲ್ಲೇ ಕೂಡಿಕೊಂಡಿರುತ್ತದೆ. ಒಟ್ಟಿನಲ್ಲಿ ಅವಳಲ್ಲಿ ಅವಳ ಜಗತ್ತು ಮಾಯವಾಗಿ ಕೇವಲ ಮಕ್ಕಳೇ ಅವಳ ಪ್ರಪಂಚವಾಗಿರುತ್ತದೆ.

---

## ಗೊತ್ತಾಯ್ತಾ?

SMS ಅಂದ್ರೇನು ಅಂತ ನಿಂಗೊತ್ತಾ?

S - ಸಿಂಹ ಕಳಿಸುವ

M - ಮಂಗ ಓದುವ

S - ಸಣ್ಣ ಮೆಸೇಜ್

ಗೊತ್ತಾ? ಇನ್ಮೇಲಾದ್ರೂ ಸ್ವಲ್ಪ ಭಯ ಇರ್‍ಲಿ ಯಾರಿಗಾದ್ರೂ ಕಳಿಸು ನಿನ್ನ ಬಗ್ಗೆ ಭಯ ಇರುತ್ತೆ?

◆ ನಂದಿನಿ ಆರ್.
ಪ್ರಥಮ ಬಿ.ಎ. (ಹೆಚ್.ಇ.ಕೆ.)

ನಾವು ಅಜ್ಞಾನಿಗಳೆಂಬ ಅರಿವು ಬೆಳೆಸಿಕೊಳ್ಳುವುದೇ ಜ್ಞಾನ ಸಾಧನೆಗೆ ಪ್ರಥಮ ಸೋಪಾನ. - ಪೆಸಿಲ್

## ಅಪ್ಪ ಎಂಬ ಸಾಲಗಾರ (ಇದು ಅಪ್ಪನ ಕಥೆ)



◆ ಆಶಾ ವೈ.

ಜಗತ್ತಿನ ಎಲ್ಲ ಅಪ್ಪಂದಿರು ಬಹುತೇಕ 'ಸಾಲಗಾರರೇ' ಆತ ಸಾಲ ಮಾಡುತ್ತಾನೆ. ಮಗನ ಓದಿಗಾಗಿ, ಅಮ್ಮನ ಓಲೆಗಾಗಿ, ತನ್ನ ರೋಗಕ್ಕಾಗಿ, ಗೆಳೆಯನ ಕಷ್ಟಕ್ಕಾಗಿ ಮಗ ಅಥವಾ ಮಗಳ ಬರ್ತಡೇ ಗಿಫ್ಟ್‌ಗಾಗಿ, ಪೋಸ್ಟ್ ಆಫೀಸಿನ ಆರ್.ಡಿ. ಅಕೌಂಟಿಗಾಗಿ, ಲೈಫ್ ಇನ್ಸೂರೆನ್ಸಿನ ಪ್ರಿಮಿಯಮ್ ಹಣಕ್ಕಾಗಿ, ನಿಮ್ಮ ಕೋರ್ಸಿಗೆ ಬೇಕೇ ಬೇಕು ಎಂದು ನೀವು ಹಠ ಹಿಡಿದು ಕೊಡಿಸಿಕೊಳ್ಳುವ ಕಂಪ್ಯೂಟರ್‌ಗಾಗಿ, ಗೆಳೆಯರೆಲ್ಲರ ಬಳಿ ಇರುವ ದುಬಾರಿ ಬೈಕು ನಿಮಗೂ ಬೇಕೆಂದಾಗ ಸೆಕೆಂಡ್ ಇನಸ್ಟಾಲ್‌ಮೆಂಟ್‌ನ ಫೀಜು ಬಾಕಿ ಇದೆ ಎಂದು ಮಗನ ಕಾಲೇಜಿನಿಂದ ಲೇಟರ್ ಬಂದಾಗ, ಹಾಸ್ಟೆಲ್‌ನಿಂದ ಫೋನ್ ಮಾಡಿದ ಮಗಳು ಪ್ರಾಜೆಕ್ಟ್ ಮಾಡಲು ಇಂಟರ್ನೆಟ್ ಬೇಕೆಂದಾಗ, ಸಂಬಂಧಿಕರ ಮದುವೆಗೆ ಹೋಗಲು ಮೈಸೂರು ಸಿಲ್ಕ್ ಸೀರೆಯೇ ಬೇಕೆಂದು ಅಮ್ಮ ಕೋಪದಿಂದ ಕೋಣೆ ಸೇರಿಕೊಂಡಾಗ, ಅಜ್ಜ, ಅಜ್ಜಿಯ ಅನಾರೋಗ್ಯ ಕಂಗೆಡಿಸಿದಾಗ, ದೂರದೂರಿನಿಂದ ಮಗ ಕಾಲ್ ಮಾಡಿ ನಾನು ಗೆಳೆಯರೊಡನೆ ಉತ್ತರ ಭಾರತ ಪ್ರವಾಸ ಹೋಗ ಬೇಕೆಂದಾಗ...... ಹೀಗೆ ಅದೆಷ್ಟೋ ಬಾರಿ ಸಾಲಗಾರನಾಗುವ ಈ ಅಪ್ಪ ಅದರಲ್ಲಿ ಎಷ್ಟೋ ಸಾಲದ ಬಗ್ಗೆ ಮನೆಯವರಿಗೆ ಗಮನಕ್ಕೆ ಬಾರದಂತೆ ನೋಡಿಕೊಳ್ಳುತ್ತಾನೆ. ಕೆಲವೊಮ್ಮೆ ಸಾಯುವತನಕ ಸಾಲದಲ್ಲೆ ಮುಳುಗಿ ಮಕ್ಕಳಿಂದ ಛೀಮಾರಿ ಹಾಕಿಸಿಕೊಳ್ಳುವುದೂ ಉಂಟು. ಯಾವೊಬ್ಬ ಸಾಲಗಾರನೂ ಮನೆಯವರೆಗೆ ಬರದಂತೆ ನೋಡಿಕೊಳ್ಳಲು ಆತ ಮಾಡುವ ಹರಸಾಹಸಗಳು ಅಷ್ಟಿಷ್ಟಲ್ಲ. ಇಷ್ಟೆಲ್ಲ ಸಾಲಮಾಡಿದ ಅಪ್ಪನ 'ಋಣಭಾರ' ನಮ್ಮ ಮೇಲಿದೆ ಎಂಬುದನ್ನು ನಾವು ಮರೆಯದಿದ್ದರೆ ಸಾಕು.

ಮಹತ್ತರವಾದುದೊಂದು ಓದಿ ಬಿಡುತ್ತೇನೆ, ಏನೋ ಸಾಧಿಸಿಬಿಡುತ್ತೇನೆಂದು ನಾವು ಲಗ್ಗೇಜ್ ರೆಡಿಮಾಡಿಕೊಂಡು ದೂರದ ಪಟ್ಟಣಕ್ಕೆ ಹೊರಟು ನಿಂತಿರುತ್ತೀರಿ. ಆಗ ತನ್ನ ಹತ್ತಿರ ಇರುವ ಹಣ ತೆಗೆದುಕೊಟ್ಟು ಬಸ್‌ಸ್ಟಾಪ್ ತನಕ ಬಂದು, ಒಂದಷ್ಟು ಮಾತ್ರೆ, ಒಂದು ಬಿಸ್ಕತ್ ಪ್ಯಾಕ್‌ಕೊಟ್ಟು ತನ್ನ ಅಂಗಿ ಕಿಸೆಯಲ್ಲಿದ್ದ ಕೊನೆಯ 100ರೂಪಾಯಿಯನ್ನು ಕೊಟ್ಟು ಅದು ಪಟ್ಟಣ ಅಲ್ಲಿ ಖರ್ಚು ಬಾಳ ಇರುತ್ತೆ ಇಟ್ಕೊ' ಅಂತ ಹೇಳಿ ತನ್ನ ಕಣ್ಣಂಚಲ್ಲಿ ಸಣ್ಣಗೆ ತೇವಮಾಡಿಕೊಂಡು ಮರೆಯಾಗುತ್ತಾನಲ್ಲ ಅದಕ್ಕೆ ಅಪ್ಪನೇ ಬೇಕು. ತನ್ನ ಕಷ್ಟಗಳನ್ನು ಅಮ್ಮ ಕೂಗಾಡಿಕೊಳ್ಳಬಹುದು. ಆದರೆ ಅಪ್ಪ ಎಂದೂ ಅವನು ನೋವನ್ನು ಬಿಚ್ಚಿಡಲಾರ. ಮಕ್ಕಳನ್ನು ಪರಿಪೂರ್ಣವಾಗಿರಲು ತಾನು ಪೂರ್ತಿ ಖಾಲಿಯಾಗಲು ನಿದ್ದನಾಗುತ್ತಾನಲ್ಲ ಅದಕ್ಕೆ ಈ ಅಪ್ಪನ ಕುರಿತು ಬರೀಬೇಕು ಅನ್ನಿಸಿದ್ದು, ನಮ್ಮ ಎಲ್ಲ ಬೇಕುಗಳನ್ನು ಅಪ್ಪನೇ ಪೂರೈಸುತ್ತಾನಾದರೂ ಅವು ಅಮ್ಮನ ಶಿಫಾರಸಿನಿಂದಲೇ ಆಗುವುದರಿಂದಾಗಿ ಅಮ್ಮ ನಮ್ಮನ್ನು ಸಂವೇದನೆ ಗೊಳಪಡಿಸಿದಷ್ಟು ಈ ಅಪ್ಪ ಮಾಡಲಾರ.

---

## ಕಸ್ತೂರಿ ಪರಿಮಳ

ನನ್ನೀ ಮೆಸೇಜ್‌ನಲ್ಲಿ ಕಸ್ತೂರಿ
ಪರಿಮಳವಿದೆ ಬೇಕಾದರೆ
ಮೂಸಿ ನೋಡಿ
ಏನು? ಬರ್ತಾ ಇಲ್ವಾ?
ಮತ್ತೆ ಟ್ರೈ ಮಾಡಿ
ಬರ್ತಾ ಇಲ್ವಾ? ಆ ಗಾದೆ ಮಾತು ನಿಜ
ಕತ್ತೆಗೇನು ಗೊತ್ತಿದೆ ಕಸ್ತೂರಿ ಪರಿಮಳ

◆ ನಂದಿನಿ ಆರ್.
ಪ್ರಥಮ ಬಿ.ಎ. (ಹೆಚ್.ಇ.ಕೆ.)

ಅಸಾಧ್ಯ ಎನ್ನುವ ಪದ ಇರುವುದು ಮೂರ್ಖರ ಶಬ್ದಕೋಶದಲ್ಲಿ - ನೆಪೋಲಿಯನ್

## ಹೆಣ್ಣು ಅಬಲೆ ಅಲ್ಲ ಸಬಲೆ



◆ ಪಲ್ಲವಿ ಆರ್.
ಅಂತಿಮ ಬಿ.ಬಿ.ಎಂ.

ಈ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಸ್ಥಾನ ಕಡಿಮೆ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಕ್ರೀಡೆ ಎಲ್ಲಾ ವಿಷಯಗಳಲ್ಲೂ ಮಹಿಳೆಯರನ್ನು ಹಿಂದೆ ಹಾಕುತ್ತಾರೆ. ಆದರೆ ಮಹಿಳೆಯರು ಪುರುಷರಷ್ಟೇ ಶಕ್ತಿಯುಳ್ಳವರು ಪುರುಷರ ಸಮಾನ ನಿಲ್ಲಬಲ್ಲಳು. ಮಹಿಳೆಯರನ್ನು ಬಹಳ ಗೌರವದಿಂದ ನೋಡುತ್ತಾರೆ. ಒಬ್ಬ ಮಹಿಳೆ ಎಲ್ಲಕ್ಕಿಂತ ಮೊದಲು ಮಗುವಾಗಿ ಸಹೋದರಿಯಾಗಿ ಸ್ನೇಹಿತೆಯಾಗಿ ಪ್ರೇಯಸಿಯಾಗಿ, ಹೆಂಡತಿಯಾಗಿ ಅಮ್ಮನಾಗಿ ಅಜ್ಜಿಯಾಗಿ ಕಾರ್ಯ ನಿರ್ವಹಿಸುತ್ತಾಳೆ ಆಕೆ ಎಲ್ಲರಿಗೂ ಬೇಕಾಗಿರುವಳು ಅವಳು ಮಮತೆ ವಾತ್ಸಲ್ಯ, ಪ್ರೀತಿ, ಸ್ನೇಹ ಎಲ್ಲವು ಅವಳೆ ಮಹಿಳೆ ಮನೆಯಲ್ಲಿ ಬರಿ ತನ್ನ ಪರಿವಾರವನ್ನಷ್ಟೇ ಅಲ್ಲ, ಇಡೀ ದೇಶವನ್ನು ಸಂಭಾಳಿಸುವ ಶಕ್ತಿಯುಳ್ಳವಳು. ಅವಳು ಸಹನೆಯ ಪ್ರತೀಕ ಅವಳು ಇಡೀ ದೇಶವನ್ನು ಸಂಬಾಳಿಸಬಲ್ಲಳು ಎಂಬುದಕ್ಕೆ ನಮ್ಮ ದೇಶಕ್ಕೆ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರೇ ದೊಡ್ಡ ಉದಾಹರಣೆ.

"ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ" ಇದಕ್ಕೆ ಒಂದು ಉದಾಹರಣೆಯೆಂದರೆ ಸತ್ಯವಾನ್ ಸಾವಿತ್ರಿ ಅವಳು ಒಬ್ಬ ನಾರಿಯಾಗಿ ತನ್ನ ಗಂಡನನ್ನು ಉಳಿಸಿಕೊಳ್ಳಲು ಆ ಸೂರ್ಯನನ್ನೇ ಹುಟ್ಟದಿರುವಂತೆ ಮಾಡಿ ಯಮನಿಂದ ತನ್ನ ಗಂಡನ ಪ್ರಾಣ ಹಿಂತಿರುಗಿ ತಂದಳು ಆದರೆ ಅದೇ ಇವಳು ಮುನಿದರೆ ಚಿತ್ರದುರ್ಗದ ಓಬವ್ವಳ ಹಾಗೆ ತಪ್ಪು ಮಾಡಿದವರನ್ನು ಬಿಡಲಾರಳು. ಮಹಿಳೆಯರು ಯಾವ ಕಾರಣಕ್ಕೂ ಅಬಲೆಯರಲ್ಲ ಪುರುಷರು ಮಾಡುವ ಎಲ್ಲಾ ಕೆಲಸಗಳನ್ನು ಅವಳು ಮಾಡಬಲ್ಲಳು ಒಂದು ಗಾದೆಯ ಹಾಗೆ 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಒಂದು ಹೆಣ್ಣು ತಾನು ಕಲಿತು ತನ್ನ ವಿದ್ಯೆಯನ್ನು ಬೇರೆಯವರಿಗೆ ಹಂಚುತ್ತಾಳೆ, ವಿಶ್ವಸುಂದರಿ ಐಶ್ವರ್ಯ ರೈ, ಸರೋಜಿನಿ ನಾಯ್ಡು, ಮೊದಲ ಮುಖ್ಯಮಂತ್ರಿ, ಮೊದಲ ಮಹಿಳಾ ಐ.ಪಿ.ಎಸ್. ಆಫೀಸರ್ ಆಗಿ ಕಿರಣ್‌ಬೇಡಿ. ಅಂತರಿಕ್ಷಕ್ಕೆ ಹೋದ ಮೊದಲ ಮಹಿಳೆ ಕಲ್ಪನಾ ಚಾವ್ಲಾ, ಎಲ್ಲರಿಗೂ ಅಮ್ಮನಾಗಿರುವ ಮದರ ತೆರೇಸಾ, ಎವರೆಸ್ಟ್ ಶಿಖರವನ್ನು ಏರಿದ ಮೊದಲ ಮಹಿಳೆ ಬಿಪಿನ್‌ಚಂದ್ರಪಾಲ್ ಇವರೆಲ್ಲ ಹೆಣ್ಣು ಮಕ್ಕಳಿಗೆ ಅಸಾಧ್ಯವಾದದ್ದು ಏನೂ ಇಲ್ಲವೆಂದು ಸಾಬೀತು ಮಾಡಿದ್ದಾರೆ. ಹಾಗೆಯೇ ಎಲ್ಲಾ ಹೆಣ್ಣು ಮಕ್ಕಳು ಕೂಡ ಮನಸ್ಸು ಮಾಡಿದರೆ ಎಲ್ಲವನ್ನು ಗೆಲ್ಲಬಲ್ಲರು ಅವರು ಬಲಶಾಲಿಗಳು ಹೌದು ಎರಡು ಕೈಗಳನ್ನು ಸೇರಿಸಿ ದೇಶದ ಏಳಿಗೆಗಾಗಿ ದುಡಿಯೋಣ.

### ಅಮ್ಮ

ಹುಟ್ಟುವಾಗ ಅಮ್ಮ
ಅಳುವಾಗ ಅಮ್ಮ
ನಗುವಾಗ ಅಮ್ಮ
ಬಿದ್ದಾಗ ಅಮ್ಮ
ಅವರಿಂದಲೇ ಸಿಕ್ಕಿದೆ ನಮಗೆ
ಈ ಜನ್ಮ

ಆಕಾಶದ ಎತ್ತರ ಅಳೆದವರಿಲ್ಲ
ಮೇಘಗಳನ್ನು ಹಿಡಿದವರಿಲ್ಲ
ಸಾಗರದ ಅಲೆಗಳನ್ನು ತಡೆದವರಿಲ್ಲ
"ಅಮ್ಮ" ನಿನ್ನ ಪ್ರೀತಿ ವಾತ್ಸಲ್ಯಕ್ಕೆ
ಸರಿಸಾಟಿಯಾರಿಲ್ಲ.

## ನಮ್ಮ ಊರು (ಯಡಕುರಿಯ)



◆ ಶ್ವೇತ ಆರ್.
ದ್ವಿತೀಯ ಬಿ.ಕಾಂ.

ಚಾಮರಾಜನಗರ ಜಿಲ್ಲೆಯ ಏಕೈಕ ದ್ವೀಪ ಸ್ಥಳ. ಈ ಊರಿಗೆ ಯಡಕುರಿಯ ಎಂದು ಹೆಸರು. ಕಾವೇರಿ ನದಿಯು ತಲಕಾವೇರಿಯಲ್ಲಿ ಉಗಮವಾಗಿ ತಾನು ಹರಿಯುವ ಉದ್ದಕ್ಕೂ ವೈಚಿತ್ರ್ಯಗಳನ್ನು ಸೃಷ್ಟಿಮಾಡುತ್ತದೆ. ಇಂತಹ ವೈಚಿತ್ರ್ಯಗಳಲ್ಲಿ ಯಡಕುರಿಯ ಕೂಡ ಒಂದು. ಇಲ್ಲಿ ಕಾವೇರಿ ನದಿ ಕವಲೊಡೆದು ಎರಡು ಭಾಗಗಳಾಗಿ ಮುಂದೆ ಮತ್ತೆ ಒಂದಾಗಿ ಸೇರುತ್ತದೆ. ಈ ಒಂದಾಗಿ ಸೇರುವ ಸ್ಥಳಕ್ಕೆ ಕೂಡುಮೂಲೆ ಎಂದು ಕರೆಯುತ್ತೇವೆ ನಮ್ಮ ಊರು ಸುತ್ತಲೂ ನೀರಿನಿಂದ ಸುತ್ತುವರಿದ ದ್ವೀಪ ಊರು ಊರಿಗೆ ಬರಲು ಹರಿಗೋಲೆ ಬೇಕು. ಅಂಬಿಗಣ್ಣನ ಅಪ್ಪಣೆ ಇಲ್ಲದೆ ಊರಿಗೆ ಪ್ರವೇಶವಿಲ್ಲ.

ಯಡಕುರಿಯ 100 ಮನೆಗಳನ್ನು ಹೊಂದಿರುವ ಒಂದು ಪುಟ್ಟ ಗ್ರಾಮ. ಇಲ್ಲಿನ ಜನಸಂಖ್ಯೆ 400 ರಿಂದ 500. ಕಾವೇರಿ ನದಿಯು ತುಂಬಿ ಹರಿಯುವಾಗ ನಮ್ಮ ಊರನ್ನು ನೋಡುವುದೇ ತುಂಬಾ ಆನಂದ. ಇಲ್ಲಿನ ಬೆಟ್ಟಗುಡ್ಡಗಳನ್ನು ನೋಡಲು ಬಹಳ ಸುಂದರವಾಗಿರುತ್ತದೆ. ಮುಂಜಾನೆ ಸೂರ್ಯನನ್ನು ಉದಯವಾಗುವಾಗ ಸೂರ್ಯನು ನದಿಯಿಂದ ಎದ್ದು ಬರುತ್ತಿರಬೇಕು ಎಂಬಂತೆ ಭಾಸವಾಗುತ್ತದೆ. ಇಂತಹ ಪ್ರಕೃತಿಯನ್ನು ನೋಡುವ ಪುಣ್ಯ ಎಷ್ಟು ಜನಕ್ಕೆ ಸಿಗುತ್ತದೆ. ಇಂದಿನ ಆಧುನಿಕ ಯುಗದಲ್ಲಿ ವಾಹನಗಳ ಶಬ್ದದಿಂದಲೇ ತುಂಬಿರುವ ಜಗತ್ತನ್ನು ನೋಡುವವರೇ ಹೆಚ್ಚು ಅಂದರೆ ನಮ್ಮ ಊರಿನ ಪ್ರಕೃತಿಯನ್ನು ಸವಿಯಲು ನಾನು ನಿಜಕ್ಕೂ ಪುಣ್ಯವಂತೆ.

ನಾವು ಪ್ರತಿದಿನ ದೋಣಿಯ ಮೂಲಕ ನದಿಯನ್ನು ದಾಟಿ ಶಾಲಾಕಾಲೇಜುಗಳಿಗೆ ಬರಬೇಕು. ಎಷ್ಟೋ ದಿನ ದೋಣಿ ಸಿಗದೇ ತುಂಬಾ ಸಮಯ ಕಾದಿರುವುದು ಉಂಟು. ನದಿಯು ಪ್ರವಾಹದಂತೆ ಬಂದರು ನಾವು ದೋಣಿಯ ಮುಖಾಂತರವೇ ಹೋಗಿ ಬರಬೇಕು. ಒಂದು ಸಂತೋಷದ ವಿಷಯವೆಂದರೆ ನೀರು ಹೆಚ್ಚಾಗಿ ಪ್ರವಾಹದಂತೆ ಹರಿದರೂ ಯಾವುದೇ ಪ್ರಾಣಾಪಾಯ ಆಗಿಲ್ಲ ಇದು ಕಾವೇರಿ ತಾಯಿಯು ನಮಗೆ ನೀಡಿರುವ ವರ ಎಂದೇ ಹೇಳಬಹುದು.

ಈಗ ನಮ್ಮ ಊರಿನ ಕಾವೇರಿ ನದಿಗೆ ಸೇತುವೆಯನ್ನು ಮಾಡಲು ತೀರ್ಮಾನಿಸಿ ಕಾಮಗಾರಿಯನ್ನು ಆರಂಭಿಸಿದ್ದಾರೆ. ಇನ್ನು ಒಂದು ವರ್ಷದ ಒಳಗೆ ಸೇತುವೆ ಪೂರ್ಣಗೊಳ್ಳುತ್ತದೆ. ಆನಂತರ ದೋಣಿಯನ್ನು ಕಾಯುವ ಸಮಸ್ಯೆ ಇರುವುದಿಲ್ಲ. ಈ ಲೇಖನವನ್ನು ಓದಿದ ಮೇಲೆ ನಿಮಗೂ ನಮ್ಮ ಊರಿಗೆ ಬರಬೇಕು ಎಂದೆನಿಸಿದ್ದರೆ ಒಮ್ಮೆ ಇಲ್ಲಿಗೆ ಭೇಟಿ ನೀಡಿ ಸಾವಿರಾರು ರೂಪಾಯಿ ಖರ್ಚು ಮಾಡಿ ಬೇರೆ ಜಿಲ್ಲೆಗೆ ಹೋಗಿ ಪ್ರಕೃತಿಯನ್ನು ನೋಡುತ್ತೀರಾ ಮೊದಲು ನಿಮ್ಮ ಹತ್ತಿರದಲ್ಲಿಯೇ ಇರುವ ಪ್ರಕೃತಿಯನ್ನು ನೋಡಿ ಆನಂದಿಸಿ.

---

## ಕವನ

"ನಮ್ಮ ಜೆಎಸ್‌ಎಸ್ ಮಹಿಳಾ ಕಾಲೇಜು
ಬಲು ಸುಂದರ
ಇದು ಪೂಜ್ಯ ಗುರುಗಳಿರುವ ದೇವ ಮಂದಿರ
ಕಣ್ಣು ಮನಸ್ಸು ತಣಿಸುವ ಸುಂದರ ಪರಿಸರ
ಎಲ್ಲಿ ನೋಡಿದರು ಬಣ್ಣ ಬಣ್ಣದ
ಪುಷ್ಪಗಳಿರುವ ಹಂದರ
ಸಂಪರ್ಕ, ಸಹಯೋಗ, ಸಂಸ್ಕಾರ, ಸೇವೆ
ಸಮರ್ಪಣೆ ನೀಡುವ ದೇವ ಮಂದಿರ"



◆ ತೇಜಶ್ರೀ ಬಿ.ವಿ.
ಅಂತಿಮ ಬಿ.ಕಾಂ.

# ಸ್ನೇಹಕ್ಕೆ ಸ್ವಾರ್ಥವಿಲ್ಲ



◆ ಅಂಜನಾ ಎನ್.
ಪ್ರಥಮ ಬಿ.ಎ. (ಹೆಚ್.ಇ.ಪಿ.)

ಪ್ರತಿಯೊಬ್ಬ ಮನುಷ್ಯನೂ ಸ್ನೇಹವನ್ನು ಬಯಸುತ್ತಾನೆ. ಆ ಸ್ನೇಹದ ಆಶಯವನ್ನು ಹಾಲಿನೊಡನೆ ಹೋಲಿಸಬಹುದು ಬೇರೆಯವರು ಸಕ್ಕರೆಯಾದರೆ ಅದು ನಮ್ಮಲ್ಲಿ ಕರಗಿಹೋಗುತ್ತದೆ. ಉಪ್ಪಾದರೆ ಒಡೆದು ಹೋಗುತ್ತದೆ. ಮೊಸರಾದರೆ ನಮ್ಮ ಅಸ್ತಿತ್ವವನ್ನೇ ಬದಲಾಯಿಸುತ್ತದೆ ನೀರಾದರೆ ತೆಳ್ಳಗೆ ಮಾಡುತ್ತದೆ. ನಮ್ಮ ಸ್ನೇಹಕ್ಕೆ ಯಾವುದನ್ನು ಸೇರಬೇಕೆಂಬುದನ್ನು ನಾವೇ ನಿರ್ಧರಿಸಿಕೊಳ್ಳಬೇಕು.

**ಹುಟ್ಟು ಉಚಿತ, ಸಾವು ಖಚಿತ**
**ಸ್ನೇಹವೊಂದೆ ಶಾಶ್ವತ**

A friend in need is a friend indeed ಎಂಬ ಮಾತು ಚಿರಪರಿಚಿತ. ಪ್ರಪಂಚವೆಲ್ಲ ನಮ್ಮನ್ನು ಬಿಟ್ಟು ಹೋಗುವ ಅತ್ಯಂತ ಕಷ್ಟಕರ ಸನ್ನಿವೇಶದಲ್ಲಿ ನಿಜವಾದ ಸ್ನೇಹಿತ ತನ್ನ ಬೆಂಬಲದೊಂದಿಗೆ ನಮ್ಮೆಡೆಗೆ ನಡೆದು ಬರುತ್ತಾನೆ. "ಒಂದು ಒಳ್ಳೆಯ ಪುಸ್ತಕ ನೂರು ಗೆಳೆಯರಿಗೆ ಸಮಾನವಾದರೆ ಒಬ್ಬ ಒಳ್ಳೆಯ ಗೆಳೆಯ ಒಂದು ಗ್ರಂಥಾಲಯಕ್ಕೆ ಸಮನೆಂದು ತಿಳಿದವರು ಅಭಿಪ್ರಾಯ ಪಟ್ಟಿದ್ದಾರೆ. ಅಂತಹ ಅದ್ಭುತ ಸ್ನೇಹಿತರೊಂದಿಗೆ ನಾವು ನಮ್ಮ ಎಲ್ಲಾ ಕಷ್ಟ-ಸುಖಗಳನ್ನು ಹಂಚಿಕೊಂಡು ಹಗುರಾಗಬಹುದು. ಅವನು ನಮ್ಮ ಪಾಲಿನ ನಿಜವಾದ ಆಸ್ತಿಯಾಗಿರುತ್ತಾನೆ. ಒಳ್ಳೆಯ ಗೆಳೆಯರನ್ನು ಪಡೆಯಬೇಕೆನಿಸುವ ಮೊದಲು ನಾವು ಒಳ್ಳೆಯ ಮನಸ್ಸಿನೊಂದಿಗೆ ಬೇರೆಯವರಿಗೆ ಸ್ನೇಹದ ಹಸ್ತ ಚಾಚಬೇಕು. ಆಗ ನಮಗೂ ಒಳ್ಳೆಯ ಹೃದಯವಂತ ಗೆಳೆಯರು ಸಿಗುತ್ತಾರೆ. ಗೆಳೆತನವೆಂಬುದು ಎರಡು ಶರೀರಗಳಲ್ಲಿರುವ ಒಂದೇ ಆತ್ಮ ಎಂಬುದು ಸ್ನೇಹದ ಮಹತ್ತನ್ನು ತೋರಿಸುತ್ತದೆ. ನಮ್ಮ ಜೀವನಕ್ಕೆ ಅಂತಹ ಸ್ನೇಹದ ಅವಶ್ಯವಿದೆ. ಪ್ರಾಮಾಣಿಕವಾದ ಒಳ್ಳೆಯ ಸ್ನೇಹಿತರಿಂದ ಮನಸ್ಸು ಅರಳಿ ಜೀವನ ಹೂಬನವಾಗುತ್ತದೆ ಒಳ್ಳೆಯ ಗೆಳೆಯರಿಂದ ಉಲ್ಲಾಸಗೊಂಡ ಮನಸ್ಸು ಯಾವುದೇ ಕೆಲಸವನ್ನು ನಗುಮುಖದಿಂದ ಮಾಡಿ ಗೆಲುವು ಗಳಿಸುತ್ತದೆ. ಸ್ನೇಹಕ್ಕೆ ಎಂದಿಗೂ ಸ್ವಾರ್ಥ ಮನೋಭಾವನೆ ಇರುವುದಿಲ್ಲ. ಒಂದು ಬಾರಿ ಸ್ನೇಹ ಮಾಡಿದರೆ ಸಾಯುವವರೆಗೂ ಆ ಸ್ನೇಹಿತೆಯನ್ನು ಕೈ ಬಿಡಬಾರದು ಸ್ನೇಹಿತರು ಬಂದರೆ ಮೇಲು ಕೀಳು ಮಾಡಬಾರದು ಒಂದು ಬಾರಿ ತಪ್ಪು ಮಾಡಿದರು ಅವರನ್ನು ತಿದ್ದಿ ನಡೆಸುವ ಗುಣವನ್ನು ಹೊಂದಿರುವವರೆ ನಿಜವಾದ ಸ್ನೇಹಿತೆಯರು.

ಸ್ನೇಹಿತರಿಗೆ ಎಂದಿಗೂ ಬೆಲೆ ಕಟ್ಟಲು ಸಾಧ್ಯವಿಲ್ಲ.
Sun is morning time
Moon is night time but
friendship is anytime

ಯಾವುದೇ ಪದವಿ ಪಡೆದ ಗಂಟು ಮುಖದವನಿಗಿಂತ ನಗುವೊಗದ ವ್ಯಕ್ತಿ ಎಲ್ಲೆಲ್ಲೂ ಹೆಚ್ಚು ಮಾನ್ಯತೆ ಪಡೆಯುತ್ತಾನೆ. ಒಳ್ಳೆಯ ಗೆಳತಿಯರು, ಒಳ್ಳೆಯ ನಗು ನಮ್ಮ ಜೀವನವನ್ನು ಉನ್ನತಮಟ್ಟಕ್ಕೆ ಒಯ್ಯುವುದರಲ್ಲಿ ಯಾವುದೇ ಅವಮಾನವಿಲ್ಲ ನಗುವುದು ಕಲಿತವನು ಬಾಳುವುದನ್ನು ಕಲಿಯುತ್ತಾನೆ. ಸ್ನೇಹ ಪಡೆಯುತ್ತಾನೆ. ಪ್ರೀತಿಗಳಿಸುತ್ತಾನೆ, ಸಿರಿ ಸಂಪದದ ಸಂತೃಪ್ತಿ ಜೀವನ ನಡೆಸುತ್ತಾನೆ ನಗು ನಗುತ್ತಾ ಬಾಳುವ ಅಭ್ಯಾಸವನ್ನು ಮಾಡಿಕೊಂಡರೆ ಎಲ್ಲರೂ ನಮ್ಮ ಸುತ್ತ ನೆರೆಯುತ್ತಾರೆ ನಾವು ಸಂತೋಷದಿಂದ ಇದ್ದು ಇತರರನ್ನು ಸಂತಸಗೊಳಿಸಬಹುದು. ಬೇರೆಯವರ ಜೀವನದಲ್ಲಿ ಸಂತಸ ತರುವುದಕ್ಕಿಂತ ಪವಿತ್ರ ಕಾರ್ಯ ಮತ್ತ್ಯಾವುದಿದೆ? ಅಂತಹ ಸ್ನೇಹ ನಮ್ಮಲ್ಲಿ ಸಹಜವಾಗಿ ಮೂಡಿ ಬರಬೇಕಾದರೆ ನಾವು ಮಾನಸಿಕವಾಗಿ ಪರಿಶುದ್ಧರಾಗಿರಬೇಕು ಒಳ್ಳೆಯ ಆಲೋಚನೆಗಳು, ಚಿಂತನೆಗಳು ನಮ್ಮಲ್ಲಿರಬೇಕು. ಅಂತಹ ಯೋಚನೆಗಳನ್ನೇ ಮಾಡೋಣ ನಗು ಚಿಮ್ಮಿಸುವ ಸಂತಸ ನೀಡುವ ಚಿಲುಮೆಗಳಾಗೋಣ ಸ್ನೇಹಕ್ಕೆ ಅರ್ಥ ನೀಡೋಣ.

# ಆಗಿನ ನಮ್ಮ ಬಾಲ್ಯ ಈಗಿನವರಿಗೆಲ್ಲಿ !



◆ ಕೆ. ಸುಕನ್ಯ
ಅಂತಿಮ ಬಿ. ಕಾಂ.

ಚಂದಮಾಮನ ಕಥೆಯ ಓದಿ
ಬೇತಾಳನ ಪ್ರಶ್ನೆಗಂಜಿ
ಡಿಂಗನಂತೆ ಮಂಗಾಟವಾಡಿ
ಆಕಾಶಭೂಮಿ ಒಂದು ಮಾಡಿ
ಅಮ್ಮನಿಂದ ಪೆಟ್ಟು ತಿಂದು
ಅಜ್ಜಿಯಿಂದ ಮುದ್ದುಗರೆಸಿಕೊಂಡ
ಆ ಹಳೆಯ ನೆನಪೆ ಸುಮಧುರಾ

ಹೀಗೆ ವಿವರಿಸುತ್ತಾ ಹೋದರೆ ಪುಟಗಳೇ ಬೇಕಾಗಬಹುದೇನೋ? ಅದೆಷ್ಟು ಸುಂದರವಾಗಿತ್ತು ನಮ್ಮ ಬಾಲ್ಯ ಈ ನಗರ ಥಳಕು ಬಳಕಿನ ಹುಳುಕು ತೋಳಕಿಲ್ಲದೆ, ಮುಗ್ಧ ಸರಳ ಸುಂದರ ಪರಿಸರದಲ್ಲಿ ಅದೆಷ್ಟು ಸೊಗಸಾಗಿತ್ತು ನಮ್ಮ ಬಾಲ್ಯ ಜೀವನವನ್ನು ಮರೆಯಲು ಸಾಧ್ಯವೇ ಮಧುರನೆನಪುಗಳು. ಬೇಸಿಗೆ ರಜಾಕ್ಕೆಂದು ಅಜ್ಜಿ ಮನೆಗೆ ಬರುತ್ತಿದ್ದ ಅತ್ತೆ ಮಕ್ಕಳು ಅವರು ಬರುವರೆಂಬ ಸಂಭ್ರಮವೇ ವರ್ಣಿಸಲಸಾಧ್ಯ. ಸುಳ್ಳು ಸುಳ್ಳು ದೆವ್ವದ ಕಥೆ (ಸುಳ್ಳು ಅಂತ ಅವಾಗ ಗೊತ್ತಿರಲಿಲ್ಲ) ಹೇಳಿ ಹೆದರಿಸುತ್ತಿದ್ದ ಗಣೇಶಣ್ಣ ಕಥೆ ಹೇಳುತ್ತಾ ಹೇಳುತ್ತಾ ಮಂಗನನ್ನು ದೆವ್ವವೆಂದು ತೋರಿಸಿದಾಗ, ಎದ್ನೋ ಬಿದ್ನೋ ಅಂತ ಓಡಿ ಅಣ್ಣನ ತರಹ ದಣಪೆ ಹಾರಲು ಹೋಗಿ ದೊಪ್ಪನೆ ಬಿದ್ದು, ಮಂಡಿ, ರುಂಡಿಗಾದ ಗಾಯದ ಕಲೆಯಿನ್ನೂ ಇದೆ, ಅಂದಿನ ನೋವಿನ ಅಳು ಮಾತ್ರ ಇಂದಿನ ನೆನಪಿನ ಮುಗುಳುನಗುವಾಗಿದೆ ಅಕ್ಕಂದಿರ ಜೊತೆ ಕಟ್ಟೆ ಹತ್ತಿ ಕುಳಿತು ಸುದ್ದಿ ಹರಟುತ್ತಿದ್ದಾಗ ಜೀವನಕ್ಕ ಕಂಡ ನಾಗರಹಾವಿಗೆ ಎಲ್ಲರೂ ಓಡೋಡಿ ಹೋದರೆ, ನಾಗರಕಟ್ಟೆಯಿಂದ ಇಳಿಯಲಾಗದೇ ಭಯದಲ್ಲಿ ಕಿರುಚಾಡಿದ ನೆನಪಿಂದು ನಗುವಲ್ಲಿ ಮಿಂದಿದೆ ಹಾವು ಬಂದ ಜಾಗಕ್ಕೆ ತುಳಸಿ ನೀರು ಹಾಕಿ ನೀ ಎಂತಕ್ಕೆ ಇಲ್ಲೆಲ್ಲಾ ಒತ್ಯಾಮಾರಾಯಿ? ಇದ್ ನಿನ್ನ ಜಾಗಲ್ಲ ಸಣ್ ಸಣ್ ಮಕ್ಕಾ ಓಡಾಡು ಜಾಗ ಹೋಗು ಮನೆಗೆ ನಡೆ ಬ್ಯಾಗ್ ಪೂಜೆ ಕೊಡ್ತ ಮಾರಯಾ, ನಡೆ ನಡೇ ಎಂದು ಹಾವನ್ನು ಮನುಷ್ಯರಂತೆ ಮಾತನಾಡಿಸುವ ಅಮ್ಮ ಅಜ್ಜಿಯ ಮುಗ್ಧತೆಯ ನೆನಪಿಂದು ಮಿಡಿದಿದೆ.

ಮಳೆಗಾಲದ ನೀರಲ್ಲಿ ತೇಲಿಬಿಟ್ಟ ಕಾಗದ ದೋಣಿಮಳೆ ನೀರು ಸೋಕಬಾರದೆಂದು ಪೊಕ್ಕ(ನಾಯಿ)ನಿಗೆ ಮಾಡಿಕೊಟ್ಟ ರಟ್ಟಿನ ಪೆಟ್ಟಿಗೆಯ ಮನೆ ಅಮ್ಮ ಕರಿದುಕೊಡುವ ಹಲಸಿನಕಾಯ್ ಹಪ್ಪಳ ಕೊಡೆಯಿದ್ದರೂ ನೆನಪಿಸಿಕೊಂಡು ಬರುವ ನಾನು ತಂಗಿ ಶೀತವಾಗಿ ಬೈಸಿಕೊಂಡು ತಲೆಗೆ ಬಟ್ಟೆಕಟ್ಟಿ ಬೆಚ್ಚಗೆ ಕೂತು ಕುಡಿವ ಕಷಾಯದಲ್ಲಿರುವ ಖುಷಿ ಮತ್ತೆಲ್ಲಿದೆ?

ಆಲದಕಟ್ಟೆಯಲ್ಲಿ ಸಂಜೆಯಾದರೆ ಸೇರುವ ಹಿರಿ-ಕಿರಿ ತಲೆಗಳು ಅವರೊಂದಿಗೆ ಆಟವಾಡಲು ಹೊರಡುವ ನಾವು ಮಕ್ಕಳು ಉಳಿದೆಲ್ಲಾ ಮಕ್ಕಳಿಗೆ ಅವರವರ ಅಜ್ಜಂದಿರು ಕೊಡಿಸುವ ಎಂಟಾಣೆ ಶೇಂಗಾ. ಆ ಶೇಂಗಾದಲ್ಲಿ ನಮಗೆ ಪಾಲು ಸಿಕ್ಕರೂ ನನಗೆ ನನ್ನ ತಂಗಿಗೆ ಅಜ್ಜನಿಲ್ಲದ ಕೊರತೆ ನೋವು ಅಜ್ಜ ಬೇಕೆಂದು ಹಠಮಾಡಿ ಅಪ್ಪ ಅಜ್ಜಿಗೆ ಬೇಸರ ಮಾಡಿಸಿದ್ದಕ್ಕೆ ಅಮ್ಮನಿಂದ ತಿಂದ ಕೋಲೇಟು ತಮ್ಮ ಬೇಸರ ಮರೆತು ಅಜ್ಜನಾಗಿ ನಮ್ಮೊಡನೆ ಶೇಂಗಾ ತೆಗೆಸಿಕೊಡಲು ಬರುತ್ತಿದ್ದ ಅಜ್ಜಿ. ಅವಳ ನೆನಪಾಗಿ ನಕ್ಷತ್ರ ನೋಡಿದರೆ ಅದರಂಚಿಯಾದ ಬೊಚ್ಚಬಾಯಿ ತೆಗೆದು ಅವಳು ನಕ್ಕಂತಾಗಿ ಕಣ್ಣಂಚು ಒದ್ದೆಯಾಗಿದೆ.

ಪೆನ್ನು ಮುಂದಕ್ಕೋಡುತ್ತಿಲ್ಲ ನೆನಪು ಹಿಂದಕ್ಕೆ ಜಾರಿದೆ ನಾವು ಕಳೆದ ಬಾಲ್ಯದ ಪ್ರತೀದಿನವೂ ಸುಂದರ ಸವಿನೆನಪು. ಇಷ್ಟು ಸುಂದರವಾಗಿ ಬಾಲ್ಯ ಕಳೆದ ನಾವೇ ಧನ್ಯ.

ಅತ್ಯುತ್ತಮ ಪುಸ್ತಕಗಳು ಉತ್ತಮ ಸಂಗಾತಿಗಳು. - ಟಿ. ಪಾರ್ಕರ್

# ಮರೆಯಾಗುತ್ತಿರುವ ಭಾರತದ ಸಂಸ್ಕೃತಿ



◆ ಅನುಪಮ ಎಂ.
ಪ್ರಥಮ ಬಿ.ಎ. (ಹೆಚ್.ಇ.ಪಿ.)

ಭಾರತ ಅಂದಕೂಡಲೇ ಪಾಶ್ಚಿಮಾತ್ಯ ರಾಷ್ಟ್ರಗಳ ಕಣ್ಮುಂದೆ ಬರೋದು ಭಾರತದ ಸಂಸ್ಕೃತಿ. ಇಲ್ಲಿನ ಉಡುಗೆ-ತೊಡುಗೆ, ಸಂಪ್ರದಾಯ ಆಚಾರ-ವಿಚಾರ ಎಲ್ಲವೂ ವಿಭಿನ್ನವಾಗಿದ್ದರೂ ಇಲ್ಲಿನ ಜನರಲ್ಲಿ ಭಾವೈಕ್ಯತೆಯನ್ನು ಕಾಣುತ್ತೇವೆ. ಜಗತ್ತಿನಲ್ಲಿ ಭಾರತವೂ ಒಂದು ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಕೇಂದ್ರ. ಬೆಬಿಲೋನಿಯಾ, ಈಜಿಪ್ಟ್ ಮತ್ತು ಗ್ರೀಕ್‌ಗಳಷ್ಟೇ ಪ್ರಾಚೀನ ಸಾಂಸ್ಕೃತಿಕ ಇತಿಹಾಸವನ್ನುಳ್ಳ ರಾಷ್ಟ್ರ ಭಾರತ. ಭಾರತದ ಸಂಸ್ಕೃತಿ ಎಷ್ಟೆಲ್ಲ ಪ್ರಾಮುಖ್ಯತೆಯನ್ನ ಪಡೆದಿದ್ದರೂ ಇತ್ತೀಚಿಗೆ ಎಲ್ಲೋ ಮರೆಯಾಗುತ್ತಿದಿಯೆನೊ ಅನ್ನೋದು ನನ್ನ ಅಭಿಪ್ರಾಯ ಅನ್ನೊದಿಕ್ಕಿಂತ ಅದು ಸತ್ಯ ಕೂಡ ಹೌದು. ಏಕೆಂದರೆ ಭಾರತ ಅಹಿಂಸೆ, ಸತ್ಯಕ್ಕೆ ಹೆಸರುವಾಸಿ. ಆದರೆ ಇಂದಿನ ಭಾರತೀಯ ಪ್ರಜೆಗಳು ಮೋಸ, ವಂಚನೆ, ಹಿಂಸೆ, ಸುಳ್ಳು, ಭ್ರಷ್ಟಾಚಾರ, ಅತ್ಯಾಚಾರ, ಕೊಲೆ ಇದರಲ್ಲಿ ಮುಳುಗಿದ್ದಾರೆ. ಇದು ನಮ್ಮ ಸಂಸ್ಕೃತಿಯನ್ನ ಅವನತಿಯ ಪಥದೆಡೆಗೆ ನೂಕುತ್ತಿದೆ.

ಭಾರತ ಸಂಸ್ಕೃತಿಯು ಮಹಿಳೆಯರಿಗೆ ಮಹತ್ವದ ಸ್ಥಾನವನ್ನ ನೀಡಿದೆ. ಭಾರತೀಯ ಮಹಿಳೆ ಎಂದಾಗ ಸೀರೆ, ಕುಂಕುಮ, ಅರಿಶಿಣ, ಬಳೆ, ಹೂ ಕಣ್ಮುಂದೆ ಬರುತ್ತೆ ಆದರೆ ಇತ್ತೀಚಿಗೆ ಮಹಿಳೆಯರ ಉಡುಗೆ ತೊಡುಗೆ, ನಡವಳಿಕೆ, ಅವರ ವರ್ತನೆ ಹೇಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಕಾಲ ಕಳೆದಂತೆ ಜೀವನ ಶೈಲಿ ಬದಲಾಗಬೇಕು ಅಂತ ಹೇಳ್ತಾರೆ ನಿಜ ಆದರೆ ನಮ್ಮ ಸಂಸ್ಕೃತಿಯನ್ನು ಮರಿಬೇಕಂತಲ್ಲ. ಭಾರತ ಒಂದು ಜಾತ್ಯಾತೀತ ರಾಷ್ಟ್ರ. ಯಾವುದೇ ಧರ್ಮವನ್ನ ರಾಷ್ಟ್ರಧರ್ಮವಾಗಿ ಹೊಂದಿಲ್ಲ. ಸಂಸ್ಕೃತಿ ಯಾವ ಜಾತಿ, ಧರ್ಮಕ್ಕೂ ಸೀಮಿತವಲ್ಲ. ಅದಕ್ಕೆ ಮಿತಿ, ಮೇರೆ, ಎಲ್ಲೆ ಯಾವುದು ಇಲ್ಲ. ಭಾರತದಲ್ಲಿ ಸುಭಾಷ್‌ಚಂದ್ರಬೋಸ್, ಜವಾಹರಲಾಲ್ ನೆಹರು, ಮಹಾತ್ಮಗಾಂಧೀಜಿ, ಭಗತ್‌ಸಿಂಗ್, ಸ್ವಾಮಿ ವಿವೇಕಾನಂದ, ಬಸವೇಶ್ವರರು ಹುಟ್ಟಿದ ಪುಣ್ಯಭೂಮಿ ಇದು. ಅವರ ಜೀವನಶೈಲಿ, ತತ್ವಗಳು, ಭೋದನೆಯನ್ನು ಚಿಕ್ಕ ವಯಸ್ಸಿನಿಂದಲೂ ಕೇಳಿಕೊಂಡು ಬರುತ್ತಿದ್ದೇವೆ. ಆದರೆ ಅವರ ಆದರ್ಶಗಳನ್ನು ಎಷ್ಟು ಜನ ಪಾಲಿಸುತ್ತಿದ್ದೇವೆ? ಅವರ ಆದರ್ಶವನ್ನ ಕನಿಷ್ಠ ಪಕ್ಷ 80%ರಷ್ಟಾದ್ರು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದ ರಿಂದ ಉತ್ತಮ ಸಮಾಜ ನಿರ್ಮಾಣ ಮಾಡಬಹುದು. ಇದನ್ನ ನಾನು ಏಕೆ ಹೇಳ್ತಿದ್ದೀನಿ ಅಂತ ಯೋಚನೆ ಮಾಡ್ತಿದ್ದೀರ ಏಕೆಂದರೆ ಸಂಸ್ಕೃತಿ ಮರೆಯಾಗುತ್ತಿರುವುದು ಇದೆ ಅನಾಗರೀಕ ಸಮಾಜದಿಂದಲ್ಲ. ಒಬ್ಬ ವ್ಯಕ್ತಿಯನ್ನ ನೋಡಿ ಮತ್ತೊಬ್ಬ ಸಮಾಜದಲ್ಲಿ ಉತ್ತಮ ಸ್ಥಾನವನ್ನ ಪಡೆಯಲು ಹೋಗಿ ನಮ್ಮ ಸಂಸ್ಕೃತಿಯನ್ನ ಮರೆತಿದ್ದಾರೆ.

ಸಂಸ್ಕೃತಿಯ ಆಧಾರದ ಮೇಲೆ "ಹಿಂದುಸ್ಥಾನ" ಹಿಂದೂ ರಾಷ್ಟ್ರವೆಂದು ಕರೆಯಲಾಗಿದೆ. ಹರಪ್ಪ, ಮಹೆಂಜೊದಾರೋ ಸಂಸ್ಕೃತಿಯ ಕಾಲದಿಂದ ಇಂದಿನವರೆಗೆ ರಕ್ಷಿಸಿಕೊಂಡು ಬಂದಿರುವ ಒಂದು ಸಂಸ್ಕೃತಿಗೆ ಹಿಂದೂ ಸಂಸ್ಕೃತಿಯೆಂದು ಕರೆಯಲಾಗಿದೆ. ಆದರೆ ಹಿಂದೂ ಶಬ್ಧ ಸಂಸ್ಕೃತಿಯ ಸೂಚಕ ಆದರೆ ಇಂದು ಜಾತಿಯ ಸೂಚಕವಾಗಿದೆ. ಇದು ನಮ್ಮ ಸಂಸ್ಕೃತಿಯನ್ನು ಪಾತಾಳಕ್ಕೆ ನೂಕುತ್ತಿದೆ.

ನಮ್ಮ ಹಿಂದಿನ ಸಂಸ್ಕೃತಿಯನ್ನ ನೆನೆದು ಸಂತೋಷಪಡಬೇಕೆ? ಸಂಸ್ಕೃತಿಯು ಬರಹ, ಭಾಷಣಗಳ ಬಂಡವಾಳ ಮಾಡಿಕೊಂಡು ಸಂತೋಷ ಪಡಬೇಕೆ? ಹೀಗಾದರೆ ಇಂದು ಆ ಭವ್ಯ ಸಂಸ್ಕೃತಿಗೆ ಮನ್ನಣೆ ದೊರೆಯುವುದೆ? ಎಂಬುವುದು ಒಂದು ಯಕ್ಷ ಪ್ರಶ್ನೆ? ಆದರೆ ಭಾರತೀಯರು ಇಂದೆ ಎಚ್ಚೆತ್ತುಕೊಂಡರು ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗಬಹುದು. ಒಂದು ವೇಳೆ ನಮ್ಮ ಸಂಸ್ಕೃತಿ ನಾಶವಾದರೇ

# ರಕ್ಷಾಬಂಧನ



◆ ದಿವ್ಯ ಜೆ.
ತೃತೀಯ ಬಿ.ಎ. (ಹೆಚ್.ಇ.ಕೆ.)

ಭಾರತದಲ್ಲಿ ಅನೇಕ ರೀತಿಯ ಸಂಪ್ರದಾಯವುಳ್ಳ ಹಬ್ಬಗಳನ್ನು ಆಚರಿಸುತ್ತಾರೆ. ಪ್ರತಿಯೊಂದು ಹಬ್ಬಕ್ಕೆ ತನ್ನದೇ ಆದ ಮಹತ್ವದ ಇತಿಹಾಸ ಹಾಗೂ ಪುರಾಣದ ಕಥೆಗಳನ್ನು ಒಳಗೊಂಡಿದೆ. ಎಲ್ಲಾ ಧರ್ಮದವರು ಹಬ್ಬಗಳನ್ನು ತಮ್ಮದೇ ಸಂಪ್ರದಾಯ - ಆಚಾರ ವಿಚಾರಗಳನ್ನು ಬಿನ್ನವಿಭಿನ್ನ ರೀತಿಯಲ್ಲಿ ಆಚರಿಸುತ್ತಾರೆ. ಹಬ್ಬ ಎಂದ ಕೂಡಲೇ ವಿಶೇಷವಾದ ದಿನವೆಂದು ಭಾವಿಸುತ್ತೇವೆ ಸಂತೋಷ, ಉತ್ಸಾಹದಿಂದ ಕೂಡಿರುತ್ತೇವೆ. ನಾವು ಹಲವಾರು ಹಬ್ಬಗಳನ್ನು ನೋಡಬಹುದು ಅವುಗಳೆಂದರೆ, ದೀಪಾವಳಿ, ಗೌರಿಗಣೇಶ, ಯುಗಾದಿ, ಸಂಕ್ರಾಂತಿ ಮುಂತಾದವು. ದೀಪಾವಳಿಯು ದೀಪಗಳಿಂದ ಕೂಡಿದರೆ, ಯುಗಾದಿ ಹಿಂದೂಗಳಿಗೆ ಹೊಸ ವರುಷದ ಆರಂಭವಾಗಿದೆ, ಸಂಕ್ರಾಂತಿಯು ರೈತರು ಬೆಳೆದ ದವಸ-ದಾನ್ಯಗಳನ್ನು ಪ್ರತಿಬಿಂಬಿಸಿ ಅಂದರೆ ರಾಶಿ ಮಾಡಿ ಪೂಜಿಸಿ ಆನಂದಪಡುತ್ತಾರೆ. ಹೀಗೆ ಹಲವಾರು ರೀತಿಯ ಹಬ್ಬಗಳು ಭಾರತೀಯ ಸಾಂಸ್ಕೃತಿಯನ್ನು ತಿಳಿಸುತ್ತದೆ.

"ರಕ್ಷಾಬಂಧನ" ಎಂದರೆ ಸಹೋದರತ್ವದ ರಕ್ಷೆಯಾಗಿದೆ. ಸಹೋದರ -ಸಹೋದರಿಯರ ನಡುವಿನ ಸಂಬಂಧದ ಮಹತ್ವವನ್ನು ತಿಳಿಸುತ್ತದೆ. ಈ ಹಬ್ಬವು ಶ್ರಾವಣ ಮಾಸದ ನೂಲು ಹುಣ್ಣಿಮೆಯ ದಿನ ಎಂದು ಕರೆಯಲಾಗುತ್ತದೆ. ಈ 'ರಕ್ಷಾಬಂಧನ', 'ರಕ್ಷಾಪೂರ್ಣಿಮಾ', 'ನೂಲು ಹುಣ್ಣಿಮೆ' 'ಶ್ರಾವಣಿ' ಎಂದೆಲ್ಲಾ ಕರೆಯುವರು. ಇದು ಪ್ರತಿ ವರ್ಷ ಆಗಸ್ಟ್ ತಿಂಗಳಿನ ಆಸುಪಾಸಿನಲ್ಲಿ ಬರುವುದರಿಂದ ಪಂಚಮಿಯೂ ಸಹ ಬಂದು ಹೋಗಿರುತ್ತದೆ. ಪಂಚಮಿಯಲ್ಲಿ ತಂಗಿಯರು ಅಣ್ಣನಿಗೆ ನೂರು ವರ್ಷ ಆಯುಷ್ಯ, ಆರೋಗ್ಯವನ್ನು ಕೊಟ್ಟು ಕಾಪಾಡು ಎಂದು ದೇವರಲ್ಲಿ ಪ್ರಾರ್ಥಿಸುತ್ತಾರೆ.

ರಾಷ್ಟ್ರದ ಹಲವಾರು ಕಡೆ ರಾಖಿಗಳು ತಯಾರಾಗುತ್ತಿದ್ದು, "ಮುಂಬೈಯಿಯ ಕಾರ್ಟೂನ್ ರಾಖಿ", "ಪಂಜಾಬಿನ ರೇಷ್ಮೆ ರಾಖಿ", "ಮೈಸೂರಿನ ಸ್ಯಾಂಡಲ್‌ವುಡ್ ರಾಖಿ", "ಕೊಲ್ಕತ್ತಾದ ಸಸ್ತಕವೆ ರಾಖಿ", "ಗುಜರಾತಿನ ಸಿಲ್ವರ್ ರಾಖಿಗಳು" ಮಾರುಕಟ್ಟೆಯಲ್ಲಿ ಮಿನುಗುತ್ತಿವೆ.

**ರಕ್ಷಾಬಂಧನದ ಮಹತ್ವ:-**

ರಾಖಿ ಎಂಬುದು ಕೇವಲ ಎರಡು ಎಳೆಯ ದಾರವಾಗಿರದೆ ಅದು ಅಣ್ಣನ ಮಾನ, ಪ್ರಾಣ ಕಾಪಾಡುವ ಸರಪಳಿ ಎಂದು ಸಹೋದರಿಯರು ಭಾವಿಸುತ್ತಾರೆ. ಒಟ್ಟಾರೆಯಾಗಿ ಇದನ್ನು ಅಣ್ಣ ತಂಗಿಯರು ನೂರು ವರ್ಷ ಸುಖವಾಗಿ ಪ್ರೀತಿಯಿಂದ ಬಾಳಲೆಂದು ಆಚರಿಸಲಾಗುತ್ತದೆ. ಸ್ನೇಹ, ಶಾಂತಿ ರಕ್ಷಣೆಗೆ ಯಾರಿಗೂ ತಲೆಬಾಗದೆ, ಎಂತಹ ಪರಾಕ್ರಮಿಯ ಎದುರು ದಿಗ್ವಿಜಯ ಸಾಧಿಸಲಿ ಎಂಬುದಾಗಿದೆ. ಅದಕ್ಕೆ ತಕ್ಕಂತೆ ಈ ದಿನ ತಂಗಿಯರು ಅಣ್ಣಂದಿರ ಕೈಗೆ ರಾಖಿಗಳನ್ನು ಕಟ್ಟಿ ಬಾಯಿಯಲ್ಲಿ ಸಿಹಿ ಹಾಕಿ ಆರತಿ ಬೆಳಗುತ್ತಾರೆ. ಇದಕ್ಕೆ ಪ್ರತಿಯಾಗಿ ಸಹೋದರರು ಒಂದಿಷ್ಟು ಪ್ರೀತಿಯ ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಸಹೋದರತ್ವ ಬಾಂಧವ್ಯವನ್ನು ಸಾರುವ ಈ ರಕ್ಷಾಬಂಧನ ಸೋದರ ಪ್ರೇಮವನ್ನು ಸಾರುವ ಈ ರಕ್ಷಾಬಂಧನ ಸೋದರ ಪ್ರೇಮವನ್ನು ಸ್ಥಿರಗೊಳಿಸುವುದಲ್ಲದೇ ಆತ್ಮ ಸಂರಕ್ಷಣೆಗೆ ಸಾಂಸ್ಕೃತಿಕ ಸಾಧನವಾಗಿದೆ.

**ರಕ್ಷಾಬಂಧನದ ಇತಿಹಾಸ:-**

1. ರಕ್ಷಾಬಂಧನದ ಆಚರಣೆ ಕ್ರಿ.ಪೂ. 300ರಲ್ಲೇ ಕಂಡು ಬಂದಿದೆ ಎಂದು ಇತಿಹಾಸ ಹೇಳುತ್ತದೆ. ದ್ವಾಪರ ಯುಗದಲ್ಲಿ ಅರ್ಜುನನನ್ನು ವರವಾಗಿ ಪಡೆಯಲು ಸುಭದ್ರೆ ಶ್ರೀ ಕೃಷ್ಣನಿಗೆ ರಕ್ಷಾಬಂಧನ ಮಾಡಿದ್ದಳಂತೆ.

2. ಭಗವಾನ್ ವಿಷ್ಣು ವಾಮನನ ಅವತಾರದಲ್ಲಿ ರಾಜ ಬಲಿಚಕ್ರವರ್ತಿಗೆ ರಕ್ಷಾಬಂಧನ ಮಾಡಿದ ನಂತರವೇ ಪಾತಾಳಕ್ಕೆ ಹೋಗಲು ಆದೇಶ ಸಿಕ್ಕಿತಂತೆ.
3. ಶಚಿಯು ಇಂದ್ರನಿಗೆ ರಕ್ಷಾ ಕಟ್ಟಿದ್ದರಿಂದಲೇ ಇಂದ್ರದೇವನಿಗೆ ಅಮರಾವತಿ ಲಭಿಸಿತೆಂದು ಹಾಗೂ ಹಿಂದೆ ರಾಜ ಮಹಾರಾಜರ ಕಾಲದಲ್ಲಿ ಯುದ್ಧದ ಸಂದರ್ಭದಲ್ಲಿ ಶತ್ರುಗಳಿಂದ ರಕ್ಷಣೆ ಪಡೆಯಲು ಈ ರಕ್ಷಾಬಂಧನವನ್ನು ಕಟ್ಟುವ ವಾಡಿಕೆಯಿತ್ತಂತೆ ಎಂಬ ಕಥೆಗಳನ್ನು ಇವೆ ಎಂದು ಹೇಳಬಹುದಾಗಿದೆ.

ಸಹೋದರರು ಸಹೋದರಿಯರ ರಕ್ಷಣೆಯನ್ನು ಕಾಪಾಡುತ್ತಾರೆ ಹಾಗೂ ಅವರಿಗೆ ಯಾವುದೇ ರೀತಿಯ ಕಷ್ಟಗಳು ಸಂಭವಿಸಿದಂತೆ ನೋಡಿಕೊಳ್ಳುತ್ತಾರೆ. ಇವರಿಬ್ಬರ ಸಂಬಂಧ ಎಂದಿಗೂ ದೂರವಾಗದು. ನಮ್ಮಲ್ಲಿನ ಒಂದು ಸೂಕ್ಷ್ಮವಾದ ವಿಚಾರಗಳನ್ನು ತಿಳಿದು ಅದಕ್ಕೆ ನಮಗೆ ಗೊತ್ತಿಲ್ಲದಂತೆ ವಿಷಯ ಬಗೆಹರಿಸುತ್ತಾರೆ. ತಂದೆ ತಾಯಿಯರ ಪ್ರೀತಿ ಬಿಟ್ಟರೆ ಸಹೋದರ - ಸಹೋದರಿಯ ಸಂಬಂಧವಾಗಿದೆ.

## ಸ್ನೇಹ

ಮನಸ್ಸೆಂಬ ಮಂದಿರದಲ್ಲಿ  
ಕನಸೆಂಬ ಸಾಗರದ ನೆನಪೆಂಬ ಅಲೆಗಳಲ್ಲಿ  
ಚಿರಕಾಲ ಮಿನುಗುತ್ತಿರಲಿ ನಮ್ಮ ಈ ಅಮರಸ್ನೇಹ

ಪ್ರೀತಿಯಲ್ಲಿ ದುಃಖ ಇದೆ  
ಸ್ನೇಹದಲ್ಲಿ ಸುಖ ಇದೆ  
ಪ್ರೀತಿಯಲ್ಲಿ ಮೋಸ ಇದೆ  
ಸ್ನೇಹದಲ್ಲಿ ಸಾಧನೆ ಇದೆ  
ಪ್ರೀತಿ ಸ್ನೇಹ ಈ ಎರಡರ ನಡುವೆ  
ನಮ್ಮ ಜೀವನ ಇದೆ.

ಹುಟ್ಟು ನಮ್ಮದಲ್ಲ, ನಾವು ನಮ್ಮದಲ್ಲ  
ಭೂಮಿ ನಮ್ಮದಲ್ಲ, ಈ ಪ್ರಕೃತಿ ನಮ್ಮದಲ್ಲ  
ಆದರೆ,  
ನಮ್ಮದು ಅಂತ ನಮ್ಮ ಜೊತೆ  
ಇರೋದು, ಉಳಿಯೋದು  
ಕೇವಲ ನಂಬಿಕೆ ಸ್ನೇಹ ಮಾತ್ರ  
ಗೆದ್ದಾಗ ಚಪ್ಪಾಳೆ ಹೊಡೆಯೋ  
ಸ್ನೇಹಿತರನ್ನು ಮರೆತರು ಪರ್ವಾಗಿಲ್ಲ,  
ಬಿದ್ದಾಗ ಕೈ ಹಿಡಿದು ಮೇಲೆತ್ತೋ  
ಸ್ನೇಹಿತರನ್ನು ಮರೆಬಾರದು.

## ಬದುಕಿನ ಅಷ್ಟ ಸೂತ್ರಗಳು

1. ಉತ್ಸಾಹಿಗಳಾಗಿರಿ - ಸೋಮಾರಿಗಳಾಗಬೇಡಿ
2. ತಾಳ್ಮೆ ಇರಲೀ - ದುಡುಕಬೇಡಿ
3. ಮಿತವ್ಯಯಿಗಳಾಗಿರಿ - ಜಿಪುಣರಾಗಬೇಡಿ
4. ಮೃದುವಾಗಿರಿ - ಗುಲಾಮರಾಗಬೇಡಿ
5. ಕರುಣೆ ಇರಲಿ - ಮೋಸ ಹೋಗಬೇಡಿ
6. ದಾನಿಗಳಾಗಿರಿ - ದರಿದ್ರರಾಗಬೇಡಿ
7. ಹೊರರಾಗಿರಿ - ಕೆಟುಕರಾಗಬೇಡಿ
8. ತ್ಯಾಗಿಗಳಾಗಿರಿ - ಅಡವಿಗೆ ಹೋಗಬೇಡಿ

## ಹೊಂಗಿರಣ

ನಮ್ಮ ಅತಿದೊಡ್ಡ  
ದೌರ್ಬಲ್ಯವೆಂದರೆ ಕೊನೆಯ  
ಪ್ರಯತ್ನ ಮಾಡದೆ ಕೈಚೆಲ್ಲುವುದು  
ಜೀವನದಲ್ಲಿ ಬಹುತೇಕ ಯಶಸ್ಸು  
ಮಗದೊಂದು ಪ್ರಯತ್ನ  
ಮಾಡುವವರಿಗಷ್ಟೇ ಲಭಿಸುತ್ತದೆ.  
ಥಾಮಸ್ ಎಡಿಸನ್ (ಖ್ಯಾತ ವಿಜ್ಞಾನಿ)



◆ ಶಬರಿನ್  
ದ್ವಿತೀಯ ಬಿ.ಎ. (ಹೆಚ್.ಇ.ಜಿ.)

ಭಾರತವು ಇತರ ರಾಷ್ಟ್ರಗಳ ನಡುವೆ ಗುರುತಿಸಿಕೊಳ್ಳುವುದು ಕಷ್ಟಕರ, ಚಿಂತಾಜನಕ

ಸಂಸ್ಕೃತಿ ಎನ್ನೋದು ಕೇವಲ ಮೂರಕ್ಷರದ ಪದವಲ್ಲ ಅದರ ಹಿಂದೆ ಬೃಹತ್ ಪ್ರಮಾಣದ ಅರ್ಥವಿದೆ. ನಾವು ಊಟ ಮಾಡುವ ರೀತಿಯಲ್ಲು ಕೂಡ ನಮ್ಮ ಜೀವನದಲ್ಲಿ ಸಂಸ್ಕೃತಿಯನ್ನು ಎಷ್ಟು ಪ್ರಮಾಣದಲ್ಲಿ ಅಳವಡಿಸಿಕೊಂಡಿದ್ದೇವೆ ಅನ್ನೋದು ತಿಳಿದುಬರುತ್ತೆ. ಹಳ್ಳಿಗರ ಮನಸ್ಸಿನಲ್ಲಿ ಸಂಸ್ಕೃತಿ ಅನ್ನೋದು ಕೇವಲ ಹಬ್ಬ-ಹರಿದಿನಗಳಲ್ಲಿ ನಾವು ಆಚರಿಸುವ ಪದ್ಧತಿಯೇ ಸಂಸ್ಕೃತಿ ಅಂದುಕೊಂಡಿದ್ದಾರೆ, ಪಟ್ಟಣದ ಜನರಲ್ಲಿ ಸಂಸ್ಕೃತಿ ಅನ್ನೋದು ನಮ್ಮ ವ್ಯಾಪ್ತಿಗೆ ಬರೋಲ್ಲ ಎಂಬ ಅಭಿಪ್ರಾಯವಿದೆ. ಇದು ಎಂದು ನಮ್ಮ ಜನರ ಮನಸ್ಸಿನಿಂದ ದೂರ ಹೋಗುತ್ತೋ ಅಂದು ನಮ್ಮ ಸಂಸ್ಕೃತಿಯ ಮೇಲಿರುವ ಕಪ್ಪು ಚುಕ್ಕೆ ಮಾಯವಾಗುತ್ತೆ. ಸಂಸ್ಕೃತಿ ಅಂದರೇ "ನಮ್ಮ ಜೀವನದ ಅವಿಭಾಜ್ಯ ಅಂಗ. ಅದು ನಮ್ಮ ಜೀವನದ ಪೂರ್ತಿ ನಮ್ಮ ಜೊತೆಯಲ್ಲೇ ರುತ್ತೆ; ಸಂಸ್ಕೃತಿ ಅನ್ನೋದು ನಮ್ಮ ವೈಯಕ್ತಿಕ ಜೀವನದ ಏಯನ್ನು ಉತ್ತಮ ರೀತಿಯಲ್ಲಿ ನಡೆಸುತ್ತೆ" ಎಂಬ ಭಿಪ್ರಾಯ ಎಲ್ಲರಲ್ಲೂ ಹುಟ್ಟಬೇಕು. ಆಗ ಸಂಸ್ಕೃತಿಗೂ ಜನ ಸ್ವಲ್ಪ ಕಾಲವನ್ನ ಕೊಡುತ್ತಾರೆನೋ, ಬೆಂಬಲಿಸುತ್ತಾರೇನೋ.

ಮಾನವ ಅನಾಗರಿಕತೆಯಿಂದ ನಾಗರಿಕತೆದೆಡೆಗೆ ಬಂದ ಹೊಸ ಯಂತ್ರಗಳು, ತಂತ್ರಜ್ಞಾನ, ಆವಿಷ್ಕಾರ, ಸಂಶೋಧನೆಯನ್ನು ನಡೆಸಿದ ಜೀವನವನ್ನು ಸುಲಭ ರೀತಿಯಲ್ಲಿ ನಡೆಸಲು ಬೇಕಾದ ಎಲ್ಲ ತಯಾರಿಯನ್ನ ನಡೆಸಿದ. ಆದರೆ ಮಾನವನ ಜೀವನಕ್ಕೆ ಮುಖ್ಯವಾಗಿ ಬೇಕಾದ ಜೀವನದ ಮೌಲ್ಯಗಳು ಅಥವಾ ನೈತಿಕತೆಯೇ ಮರೆಯಾಯ್ತು. "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಎಂದು ಹೇಳುತ್ತಾರೆ. ಆದರೆ ಇಂದಿನ ಮಕ್ಕಳು ಮೊಬೈಲ್, ಕಂಪ್ಯೂಟರ್, ಇಂಗ್ಲಿಷ್ ಲೋಕದಲ್ಲೇ ಮುಳುಗಿದ್ದಾರೆ. ಇಂದಿನ ಮಕ್ಕಳಿಗೆ ಸಂಸ್ಕೃತಿ ಅತ್ಯವಶ್ಯಕ. ಆದರೇ ಕರ್ಮ ಏನೆಂದರೇ ಸಂಸ್ಕೃತಿಯ ಒಂದು ಅಂಗವಾಗಿರುವ ಪುರಾಣಗಳು, ರಾಮಾಯಣ, ಮಹಾಭಾರತ, ಭಗವದ್ಗೀತೆಯ ಅರಿವೆ ಇಲ್ಲ ನಮ್ಮ ಸಂಸ್ಕೃತಿ ಮುಂದಿನ ಪೀಳಿಗೆಗೆ ಮುಂದುವರೆಯುತ್ತೆ ಎಂಬ ನಂಬಿಕೆ ನಿಮಗಿದಿಯಾ? ನನಗಂತೂ ಅಂತಹ ಯಾವ ಆಸೆಯು ಇಲ್ಲ. ಒಟ್ಟಾರೆ ಸಂಸ್ಕೃತಿ ಅನ್ನೋದು ಇತ್ತು ಅನ್ನೋದನ್ನೂ ಮುಂದಿನ ಪೀಳಿಗೆ ಊಹಿಸಲು ಹೋಗಲ್ವೇನೋ ಏಕೆಂದರೆ ಇಂದಿನ ಜನರೇ ಭಾಗಶಃ ಅದನ್ನ ಮರೆತಿದ್ದಾರೆ. ಆದರೇ ಸಂಸ್ಕೃತಿ ನಶಿಸಿಹೋಗಬಾರದು ಏಕೆಂದರೇ ನಮ್ಮ ಹಿಂದೂಸ್ಥಾನಕ್ಕೆ ಇದು ಬೆಳಕು ಚೆಲ್ಲುತ್ತದೆ.

ಇಂದಿನ ಸಮಾಜಕ್ಕೆ ಹೊಂದುಕೊಳ್ಳುವುದಕ್ಕೋಸ್ಕರ ನಮ್ಮ ಮನಸ್ಸಿನ ವಿರುದ್ಧವಾಗಿ, ಸಂಸ್ಕೃತಿಯನ್ನ ಮರೆಯಲಾಗದೆ ಇದ್ದರು ಕೂಡ ಮರೆಯುವ ನಾಟಕ, ಪ್ರಯತ್ನ ಮಾಡುತ್ತಿದ್ದೇವೆ, ಸಮಾಜ, ಲೋಕ ನಮ್ಮನ್ನ ಎಲ್ಲಿ ಕೀಳಾಗಿ ಕಾಣುತ್ತೇನೋ, ಇದು ತಪ್ಪೋ, ಸರಿನೋ ಎಂಬ ಗೊಂದಲದಲ್ಲೆ ದಿನ ದಿನವು ಕಳೆಯುತ್ತೇವೆ ಆದರೇ ಸಂಸ್ಕೃತಿ ನಮ್ಮ ಗೌರವಕ್ಕೆ ಗರಿ ತಂದು ಇಟ್ಟು ನಮ್ಮ ಹಿರಿಮೆಯನ್ನ ಇನ್ನಷ್ಟು ಹೆಚ್ಚಿಸುತ್ತೇ ಹೊರತು ನಮ್ಮನ್ನ ತಲೆ ತಗ್ಗಿಸುವಂತೆ ಮಾಡಲ್ಲ.

ಭಾರತದ ಸಂಸ್ಕೃತಿಯನ್ನು ವಿದೇಶಿಯರು ಗೌರವಿಸೋ ಅಷ್ಟು ಭಾರತೀಯರು ಗೌರವಿಸೊಲ್ಲ. ಆದರೆ ಅದನ್ನ ಕಳೆದುಕೊಂಡಾಗ ಗೊತ್ತಾಗುತ್ತೇ ಅದರ ಬೆಲೆ ಏನು ಅಂತ. ಅದನ್ನ ನಿರ್ಲಕ್ಷಿಸುತ್ತಿರುವ ನಾವು ಅದರ ಪುನರ್ ವಿಕಾಸಕ್ಕೆ ತತ್ತರಿಸುವಂತಾಗುತ್ತೆ. ಸಂಸ್ಕೃತಿಯು ಕೇವಲ ಆಚರಿಸುವಂತದ್ದಲ್ಲ. ಅದರ ಮೇಲೆ ವಿಶ್ವಾಸ, ನಂಬಿಕೆಯು ಇರಬೇಕು. ಆಗ ಮಾತ್ರ ಯಶಸ್ಸಾಗಲು ಸಾಧ್ಯ. ಒಟ್ಟಾರೆ ಭಾರತದ ಸಂಸ್ಕೃತಿಯ ಸ್ಥಿತಿಯು ಚಿಂತಾಜನಕವಾಗಿದೆ.

ಭಾರತ ರಾಜಕೀಯ, ಸಾಮಾಜಿಕ, ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರ. ಆದರೆ ಸಂಸ್ಕೃತಿಯ ದೃಷ್ಟಿಯಲ್ಲಿ ಹಿಂದುಳಿಯುತ್ತಿರುವ ರಾಷ್ಟ್ರ. ಇಲ್ಲಿ ಭಾರತವು ಬದಲಾಗಬೇಕಿಲ್ಲ ಅಲ್ಲಿನ ಜನರು ಬಂದಲಾಗಬೇಕಾದ ಅವಶ್ಯಕತೆ ಇದೆ. ನಾವೇ ನಮ್ಮ ಸಂಸ್ಕೃತಿಯನ್ನ ಉಳಿಸಿಕೊಳ್ಳಲಿಲ್ಲ ಅಂದ್ರೆ ವಿದೇಶಿಯರು ಬಂದು ನಮ್ಮ ಸಂಸ್ಕೃತಿಯನ್ನು ಬೆಳೆಸುತ್ತಾರ ಹೇಳಿ. ಸಂಸ್ಕೃತಿಯೂ ಭಾರತದ ಗುರುತಿನ ಶಕ್ತಿ. ಸಂಸ್ಕೃತಿಯನ್ನ ಅವನತಿಯ ಕಡೆಗೆ ತಳ್ಳದೆ ಅದನ್ನ ಪ್ರಗತಿ ಪಡಿಸುವ ಕರ್ತವ್ಯ ಭಾರತೀಯ ಪ್ರಜೆಯಾದ ನಮ್ಮ ಹಕ್ಕು. ಅದನ್ನ ಖಂಡಿತ ನೀವು ಪಾಲಿಸುತ್ತೀರ ಎಂದು ನಂಬಿರುತ್ತೇನೆ.

"ಸಂಸ್ಕೃತಿಯನ್ನ ಉಳಿಸಿ, ಬೆಳೆಸಿ

## ವಿದೇಶಿ ವ್ಯಾಮೋಹ ಮತ್ತು ಪ್ರತಿಭಾ ಪಲಾಯನ



◆ ಸುನಿತ ಆರ್.
ಪ್ರಥಮ ಬಿ.ಎ. (ಹೆಚ್.ಇ.ಪಿ.)

ಭಾರತ ನಮ್ಮ ದೇಶ, ನಾವೆಲ್ಲ ಹುಟ್ಟಿ ಬೆಳೆದು ಜೀವಿಸುತ್ತಿರುವ ದೇಶ, ನಾವು ಇಲ್ಲಿಯ ಗಾಳಿಯನ್ನು ಉಸಿರಾಡುತ್ತಿದ್ದೇವೆ, ಇಲ್ಲಿಯ ನೆಲದಲ್ಲಿ ನಡೆದಾಡುತ್ತಿದ್ದೇವೆ ಇಲ್ಲಿಯ ಅನ್ನವನ್ನು ಉಣ್ಣುತ್ತಿದ್ದೇವೆ. ಆದರೂ ನ[illegible]ಲ್ಲಿ ಕೆಲವರಿಗೆ ಈ ದೇಶವನ್ನು ಕಂಡರೆ ಪ್ರೀತಿ ಅಭಿಮಾನಗಳಿಲ್ಲ. ಬದಲಿಗೆ ದೂರದ ಅಮೇರಿಕಾಕ್ಕೊ ಅಥವಾ ದುಬೈ, ಇಂಗ್ಲೆಂಡ್ ಮುಂತಾದ ಇನ್ನಾವುದಾದರೂ ದೇಶಕ್ಕೋ ಹೋಗಿ ಜೀವಿಸಿದರೆ ಇಲ್ಲಿಗಿಂತ ಚೆನ್ನಾಗಿ ಬದುಕಬಹುದು. ಹೆಚ್ಚು ಹಣವನ್ನು ಸಂಪಾದಿಸಬಹುದು ಎಂಬ ಆಸೆ. ಇದನ್ನೇ 'ವಿದೇಶಿ ವ್ಯಾಮೋಹ' ಎಂದು ಕರೆಯಲಾಗುತ್ತದೆ. ದುರಂತದ ಸಂಗತಿಯೆಂದರೆ ಈ ರೀತಿ ಚಿಂತಿಸುವವರಲ್ಲಿ ಬಹುಮಟ್ಟಿನ ಜನರು ತುಂಬಾ ಬುದ್ಧಿವಂತರು ಪ್ರಭಾವಶಾಲಿಗಳು, ಪ್ರಭಾವಶಾಲಿಗಳ ಇಂತಹ ವಲಸೆಯನ್ನೇ 'ಪ್ರತಿಭಾ ಪಲಾಯನ' ಎಂದು ಹೆಸರಿಸಬಹುದು.

ಪ್ರತಿಭಾ ಪಲಾಯನವನ್ನು ಬೆಂಬಲಿಸುವ ಜನರ ಪ್ರಕಾರ ಇದಕ್ಕೆ ಕಾರಣ ವಿದೇಶಗಳಲ್ಲಿ ದೊರಕುವ ಅತ್ಯುಚ್ಛಮಟ್ಟದ ವಿದ್ಯಾಭ್ಯಾಸ ಹಾಗೂ ಅಗಾಧವಾದ ಉದ್ಯೋಗದ ಅವಕಾಶಗಳು. ಈ ವಾದದಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶ ಇಲ್ಲದಿಲ್ಲ. ಭಾರತದಲ್ಲಿ ಇಂದು ನಿಜವಾದ ಪ್ರತಿಭಾವಂತರಿಗೆ ಸೂಕ್ತವಾದ ಅವಕಾಶಗಳು ದೊರೆಯುತ್ತಿಲ್ಲ. ಹಣ, ಜಾತಿ, ಅಧಿಕಾರ ಮುಂತಾದ ಪ್ರಬಲ ಶಕ್ತಿಗಳು ಒಟ್ಟು ವ್ಯವಸ್ಥೆಯನ್ನು ನಿಯಂತ್ರಿಸುತ್ತಿದ್ದು ಇದರಿಂದಾಗಿ ನಿಜವಾದ ಪ್ರತಿಭಾವಂತರು ಅವಕಾಶದಿಂದ ವಂಚಿತರಾಗಿದ್ದಾರೆ. ಉನ್ನತ ಮಟ್ಟದ ಶಿಕ್ಷಣವನ್ನು ಕಲಿಸಬೇಕಾದ ಶಿಕ್ಷಣ ಸಂಸ್ಥೆಗಳು ಕೀಳು ಮಟ್ಟದ ರಾಜಕಾರಣದ ಕೆಸರಾಟದಲ್ಲಿ ಮುಳುಗಿ ಹೋಗಿವೆ. ಇಂತಹ ವಾತಾವರಣದಲ್ಲಿ ಉತ್ತಮ ಶಿಕ್ಷಣವನ್ನು ನಿರೀಕ್ಷಿಸುವುದು ಕನಸಿನ ಮಾತು. ಆದರೆ ವಿದೇಶಗಳಲ್ಲಿ ಈ ಸಮಸ್ಯೆ ಇಲ್ಲ.

ಈ ವಿದೇಶಿ ವ್ಯಾಮೋಹ ಮತ್ತು ಪ್ರತಿಭಾ ಪಲಾಯನಗಳಿಂದ ಎಲ್ಲರಿಗೂ ಎಲ್ಲ ಸಂದರ್ಭಗಳಲ್ಲಿಯೂ ಒಳಿತೇ ಆಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ. 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬಂತೆ ಈ ದಾರಿಯಲ್ಲಿಯೂ ಅನೇಕ ಲೋಪದೋಷಗಳಿವೆ. ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿವೆ. ಸರ್ಕಾರ ಮತ್ತು ಸಮಾಜದಿಂದ ದೊರಕುವ ಎಲ್ಲ ಸವಲತ್ತುಗಳನ್ನು ಪಡೆದು ಕೊಂಡ ಪ್ರತಿಭಾವಂತರು ವಿದೇಶಗಳಲ್ಲಿ ಹೋಗಿ ನೆಲೆಸಿದರೆ ಅದರಿಂದ ಆ ದೇಶಕ್ಕೆ ಎಷ್ಟೊಂದು ಹಾನಿ. ಇರುವ ಪ್ರತಿಭಾವಂತರೆಲ ದೇಶ ತೊರೆದು ಹೋದರೆ ಆ ದೇಶದ ಗತಿ ಏನು?

ಮತ್ತೊಂದು ಮುಖ್ಯ ಅಂಶವೆಂದರೆ ವಿದೇಶಕ್ಕೆ ಹೊ ಎಲ್ಲರಿಗೂ ಸೂಕ್ತವಾದ ವಿದ್ಯೆ ಮತ್ತು ಉದ್ಯೋಗಗ. ದೊರೆಯುತ್ತದೆಂದೇನೂ ಇಲ್ಲ. ತನ್ನ ಮನೆಯಲ್ಲಿ ಒಂದು ಹುಲ್ಲುಕಡ್ಡಿಯನ್ನೂ ತೆಗೆದು ಪಕ್ಕಕ್ಕೆ ಇಡದ ವಿದ್ಯಾರ್ಥಿಗಳು ವಿದೇಶಗಳಲ್ಲಿ ಹೋಟೇಲ್ ಮಾಣಿಗಳಾಗಿ, ಟ್ಯಾಕ್ಸಿ ಡ್ರೈವರುಗಳಾಗಿ, ಪೆಟ್ರೋಲ್ ಬಂಕಿನ ಸಹಾಯಕರುಗಳಾಗಿ ದುಡಿದು ಅನ್ನ ಸಂಪಾದಿಸಿಕೊಳ್ಳಬೇಕಾದ ಗತಿ ಇಂದು ಒದಗಿದೆ. ಬಹುತೇಕ ಎಲ್ಲಾ ದೇಶಗಳ ಸರ್ಕಾರಗಳು ಇತ್ತೀಚೆಗೆ 'ತಮ್ಮ ನಾಗರೀಕರಿಗೆ ಉದ್ಯೋಗದಲ್ಲಿ ಆದ್ಯತೆ' ಎಂಬ ನೀತಿಯನ್ನು ಅನುಸರಿಸುತ್ತಿರುವುದರಿಂದ ಇಲ್ಲಿಂದ ಹೋದ ಜನ ಅಲ್ಲಿ ಬಾಳಲಾರದೆ, ಹಿಂದಿರುಗಿ ಬರಲಾರದೆ ಒದ್ದಾಡುತ್ತಿದ್ದಾರೆ.

ಈ ಸಮಸ್ಯೆ ಬಗೆಹರಿಯಬೇಕೆಂದರೆ ನಮ್ಮ ಪ್ರತಿಭಾವಂತ ತರುಣರು ವಿದೇಶಕ್ಕೆ ವಿದ್ಯಾಭ್ಯಾಸಕ್ಕೆಂದು ಹೋದರೂ ಮರಳಿ ತಮ್ಮ ಮಾತೃ ಭೂಮಿಗೆ ಬಂದು ಇಲ್ಲಿ ಸೇವೆ ಸಲ್ಲಿಸಬೇಕು ಮತ್ತು ಇಲ್ಲಿಯ ಸರ್ಕಾರ ಮತ್ತು ಸಮಾಜಗಳು ಅವರ ಅರ್ಹತೆಗೆ ತಕ್ಕುದಾದ ಮಾನ-ಮಾನ್ಯತೆಗಳನ್ನು ನೀಡುವ ಬಗ್ಗೆ ತೀವ್ರವಾಗಿ ಚಿಂತಿಸಬೇಕು.

# English Section


William Shakespeare


William Wordsworth


Charles Dickens


Chinua Achebe


V.S.Naipaul


R.K. Narayan


Arundhati Roy


Gayatri Spivak

## CONTENTS


| | | |
|---|---|---|
| Dr. A.P.J. Abdul Kalam's Vision | ◆ Chaithra M., III B.Com. | 57 |
| I'm a woman What's your Super Power? | ◆ Anjali M., I B.A. (HEP) | 58 |
| Tension | ◆ Chaithra N., III B.Com. | 59 |
| Pretty Cat | ◆ Kavya N.. III B.Com. | 59 |
| Work is Worship | ◆ Rashmi N., III B.Com. | 60 |
| Formula For Success | ◆ Shiva Ranjini M., III B.Com. | 61 |
| Mathematical Letter | ◆ Shubha L., III B.Com. | 62 |
| Believe | ◆ Thejaswini V., III B.Com. | 63 |
| Poems | ◆ Shiva Ranjini M., III B.Com. | 64 |
| My pen has no words | ◆ Hamsaveni S., III B.Com. | 65 |
| "LUCK and Effort" | ◆ K. Sukanya, III B.Com. | 66 |
| Vivekananda | ◆ Savitha M., III B.Com. | 66 |
| The Best | ◆ Sushma R., III B.Com. | 67 |
| Value of time | ◆ Chandana M., III B.Com. | 67 |
| Pre Learning Activities | ◆ Mamatha C., IInd B.A (HEK) | 68 |
| Jokes Questions | ◆ Shubha L., III B.Com. | 68 |
| Life | ◆ Asha Y., IIIrd BBM | 69 |
| Jokes | ◆ Pooja R., IIIrd B.Com. | 69 |
| Jokes | ◆ Veena N., IIIrd B.Com. | 70 |
| SUCCESS | ◆ Chaithra M., IIIrd B.Com. | 70 |

# ಪ್ರಾಣಕ್ಕೆ ಉರುಳಾಗುತ್ತಿರುವ ಸೆಲ್ಫೀ ಗೀಳು



◆ ಸುಷ್ಮಾ ಎಂ.
ಅಂತಿಮ ಬಿ.ಎ. (ಹೆಚ್.ಇ.ಪಿ.)

ಎಲ್ಲಕ್ಕಿಂತ ಅಮೂಲ್ಯವಾದದ್ದು ಪ್ರಾಣ ಎಂಬುದು ಗೊತ್ತಿರುವ ಸಂಗತಿಯೇ. ರೋಗಿಯೊಬ್ಬನ ಸ್ಥಿತಿ ಎಷ್ಟೇ ಗಂಭೀರವಾಗಿದ್ದರೂ ವೈದ್ಯರು ಆತನನ್ನು ಉಳಿಸಲು ಕೊನೇ ಕ್ಷಣದವರೆಗೆ ಯತ್ನಿಸುತ್ತಾರೆ. ಕಾರಣ, ಹೋದ ಜೀವ ಮತ್ತೆ ಬರುವುದಿಲ್ಲ ಮರಣದ ಆಘಾತ ಹತ್ತಿರದವರೆಗೆ ತರುವ ಸಂಕಟ ಎದೆಹಿಂಡುತ್ತದೆ. ಆದರೆ ಮೋಜು ಮಸ್ತಿಗೆ ಹೋಗಿ ಸೆಲ್ಫೀಯ ಗೀಳಿಗೆ ಪ್ರಾಣ ಕಳೆದುಕೊಳ್ಳುವುದು ಎಂಥ ಹುಚ್ಚುತನ? ಯಾವುದೇ ತಾಣಕ್ಕೆ ಭೇಟಿ ನೀಡಿದಾಗ ಅಲ್ಲಿನ ನಿಸರ್ಗ ಸೌಂದರ್ಯ, ನಿರಾಳತೆ ಇದೆಲ್ಲವನ್ನೂ ಅನುಭವಿಸುವ ಬದಲು ಸೆಲ್ಫೀಗೆ ಮುಖ ಮಾಡುವ ಪ್ರವೃತ್ತಿ ಹೆಚ್ಚುತ್ತಲೇ ಇದೆ. ದೈನಂದಿನ ಜಂಜಾಟ ಒತ್ತಡದ ಬದುಕಿನಿಂದ ಆಚೆ ಬರಲು ಒಂದಿಷ್ಟು ಸುತ್ತಾಟ ಪ್ರವಾಸಗಳು ಬೇಕು ಎಂಬುದೇನೋ ಸರಿಯೇ ಆದರೆ, ಅವು ಕೊಡುವ ಸಂತೋಷ ನಲಿವುಗಳು ಉತ್ಸಾಹ ಹೆಚ್ಚಿಸಬೇಕೇ ಹೊರತು ಸೆಲ್ಫೀ ಸಾವಿನಲ್ಲಿ ಕೊನೆಗೊಳ್ಳಬಾರದು.

ಇತ್ತೀಚಿನ ದಿನಗಳಲ್ಲಿ ಸೆಲ್ಫೀ ಸಂಬಂಧಿತ ದುರಂತಗಳು ಮತ್ತು ಸಾವುಗಳು ಹೆಚ್ಚುತ್ತಲೇ ಇರುವುದು ತೀವ್ರ ಕಳವಳದ ವಿಚಾರ, ಇತ್ತೀಚೆಗೆ ಬೆಂಗಳೂರು ಹೊರವಲಯಗಳಲ್ಲಿ ರೈಲು ಹಳಿಯ ಮೇಲೆ ನಿಂತು ಚಲಿಸುವ ರೈಲಿನ ಜೊತೆ ಸೆಲ್ಫೀ ತೆಗೆದುಕೊಳ್ಳುವ ಯತ್ನದಲ್ಲಿ 18-20 ವರ್ಷದ ಮೂವರು ಯುವಕರು ದುರ್ಮರಣಕ್ಕೆ ತುತ್ತಾಗಿರುವ ಘಟನೆ ಸಂಭವಿಸಿದೆ. ಕೆಲದಿನಗಳ ಹಿಂದಷ್ಟೇ ಕನಕಪುರದ ರಾವುಗೊಂಡ್ಲು ಕಲ್ಯಾಣಿಯಲ್ಲಿ ಕೆಲ ಪಿಯು ವಿದ್ಯಾರ್ಥಿಗಳು ಸೆಲ್ಫೀ ತೆಗೆದುಕೊಳ್ಳುವ ಗುಂಗಿನಲ್ಲಿ ಯಾವ ಪರಿ ಮುಳುಗಿದ್ದರು ಎಂದರೆ ಅವರ ಸ್ನೇಹಿತನೊಬ್ಬ ನೀರಿನಲ್ಲಿ ಮುಳುಗುತ್ತಿರುವುದೂ ಅವರ ಗಮನಕ್ಕೆ ಬರಲಿಲ್ಲ. ಪರಿಣಾಮ ಯುವಕ ಪ್ರಾಣವನ್ನೇ ಕಳೆದುಕೊಳ್ಳುವಂತಾಯಿತು.

ಜಲಪಾತಗಳ ಪ್ರಪಾತದಲ್ಲಿ, ಆನೆಗಳ ಜತೆ ಇನ್ನಿತರ ವನ್ಯಜೀವಿಗಳ ಜತೆ ಸೆಲ್ಫೀ ಕ್ಲಿಕ್ಕಿಸಿಕೊಳ್ಳಲು ಹೋಗಿ ಎಷ್ಟೋ ಅವಘಡಗಳು ಸಂಭವಿಸಿದ್ದಿದೆ. ಇಂಥ ಘಟನೆಗಳು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಸೆಲ್ಫೀ ದುರಂತಗಳಲ್ಲಿ ಸಂಭವಿಸುತ್ತಿರುವ ಸಾವುಗಳ ಪೈಕಿ ಭಾರತದಲ್ಲೇ ಹೆಚ್ಚು ಎಂದು ಅಮೇರಿಕಾದ ಕೇಮ್ಜಿ ಮಿಲ್ಲಾನ್ ವಿಶ್ವವಿದ್ಯಾಲಯ ಮತ್ತು ದೆಹಲಿ ಇಂದ್ರಪ್ರಸ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಅಧ್ಯಯನದ ವರದಿ ತಿಳಿಸಿದೆ.

2004 ರಿಂದ 2016ರ ವರೆಗೆ ಜಗತ್ತಿನಲ್ಲಿ ದಾಖಲಾದ 127 ಸೆಲ್ಫೀ ಸಾವುಗಳ ಪೈಕಿ ಭಾರತದಲ್ಲೇ 76 ಮಂದಿ ಬಲಿಯಾಗಿದ್ದಾರೆ. ಪಾಕಿಸ್ಥಾನದಲ್ಲಿ 9, ಅಮೇರಿಕದಲ್ಲಿ 8 ಜನರು ಸಾವನ್ನಪ್ಪಿದ್ದರೆ ರಷ್ಯಾದಲ್ಲಿ ಆರು ಜನರು ಬಲಿಯಾಗಿದ್ದಾರೆ. ಹಾಗಾಗಿ, ಈ ಗೀಳು ಪಿಡುಗಿನ ರೂಪ ಪಡೆದುಕೊಳ್ಳುತ್ತಿದ್ದು, ಹೊಸ ಸಮಸ್ಯೆಯಾಗಿ ತಲೆದೋರಿದೆ.

ಪ್ರವಾಸಿ ತಾಣಗಳು ಸೇರಿದಂತೆ ಎಷ್ಟೋ ಜಾಗದಲ್ಲಿ ಸೆಲ್ಫೀ ನಿಷೇಧಿಸಲಾಗಿದೆ ಎಂಬ ಫಲಕ ಅಳವಡಿಸಲಾಗಿದ್ದರೂ ಅಪಾಯಕ್ಕೆ ಆಹ್ವಾನ ನೀಡಿ ಫೋಟೋ ಕ್ಲಿಕ್ಕಿಸಿಕೊಳ್ಳುವ ಚಾಳಿ ಹೆಚ್ಚುತ್ತಿದೆ. ಸ್ಮಾರ್ಟ್‌ಫೋನ್‌ಗಳು ಸಕಾರಾತ್ಮಕ ಬಳಕೆಗಿಂತ ಇಂಥ ಮೋಜು, ಮಸ್ತಿಗೆ ಹೆಚ್ಚು ಬಳಕೆಯಾಗುತ್ತಿರುವುದು ದುರದೃಷ್ಟಕರವೇ ಸರಿ. ಈ ಸಂಬಂಧಿ ದುರಂತಗಳಲ್ಲಿ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿ ಸಾವನ್ನಪ್ಪಿದ್ದು ಅವರ ತಂದೆ-ತಾಯಿಯ ಗೋಳು ಕೇಳುವವರಾರು? ಮಕ್ಕಳ ಹಠಕ್ಕೆ ಜೋತುಬಿದ್ದು ಅಗತ್ಯ ಇಲ್ಲದಿದ್ದರೂ ದುಬಾರಿ ಬೆಲೆಯ ಸ್ಮಾರ್ಟ್‌ಫೋನ್‌ಗಳನ್ನು ಕೊಡಿಸುವ ತಂದೆ-ತಾಯಿಗಳು ಕೂಡ ಇಂಥ ನಿರ್ಧಾರಕ್ಕೆ ಬರುವ ಮುನ್ನ ಹತ್ತು ಬಾರಿ ಯೋಚನೆ ಮಾಡಬೇಕು. ಪ್ರವಾಸಿತಾಣಗಳಲ್ಲಿ ಸಂಯಮ ವಿವೇಕ ಪ್ರದರ್ಶಿಸಿದರೆ ಇಂಥ ಅಪಾಯಗಳಿಂದ

ದೂರವಿರಬಹುದು. ಈ ನಿಟ್ಟಿನಲ್ಲಿ ಸರ್ಕಾರ ಅರಿವು ಮೂಡಿಸುವ ಕೆಲಸ ಮಾಡುತ್ತಿದೆಯಾದರೂ ಜನರು ಹೆಚ್ಚೆತ್ತುಕೊಳ್ಳುವವರೆಗೆ ಹೆಚ್ಚೇನು ಪ್ರಯೋಜನವಾಗದು. ಸೆಲ್ಫೀಗಾಗಿ ಅಪಾಯಗಳಿಗೆ ಆಹ್ವಾನ ನೀಡುವ ಮುನ್ನ ಜೀವನ ಎಷ್ಟು ಅಮೂಲ್ಯವಾದದ್ದು ಎಂದು ಒಂದು ಕ್ಷಣ ಆಲೋಚಿಸಿಕೊಂಡರೆ ಸೂಕ್ತ.

## ಒಳ್ಳೆಯ ಗುಣದಿಂದಲೇ ಪುರಸ್ಕಾರ

◆ ಸುಷ್ಮಾ ಎಂ.
ಅಂತಿಮ ಬಿ.ಎ. (ಹೆಚ್.ಇ.ಪಿ.)

ಒಂದು ಊರಿನಲ್ಲಿ ಗ್ರಾಮದೇವತೆಯ ಉತ್ಸವ, ದೇವಿಯ ಉತ್ಸವ ಮೂರ್ತಿಯನ್ನು ಅಲಂಕಾರಗೊಳಿಸಿ ಕುದುರೆ ಮೇಲೆ ಕೂರಿಸಿದ್ದಾರೆ. ಮಂಗಳವಾದ್ಯಗಳೊಂದಿಗೆ ಊರಿನ ಬೀದಿಗಳಲ್ಲಿ ದೇವಿಯ ಮೆರವಣಿಗೆ ಸಾಗುತ್ತಿದೆ. ಕುದುರೆ ಮನದಲ್ಲೇ ಸಂತೋಷಪಡುತ್ತ, ಇಷ್ಟೊಂದು ಸಂಭ್ರಮದಲ್ಲಿ ನನ್ನ ಮುಂದೆ ನೂರಾರು ಜನರು ವಿವಿಧ ವಾದ್ಯಗಳನ್ನು ನುಡಿಸುತ್ತ ಸಾಗುತ್ತಿದ್ದು, ಅವರ ಹಿಂದೆ ನಾನು ಗತ್ತಿನಿಂದ ಗಾಂಭೀರ್ಯದಿಂದ ನಡೆಯಬೇಕೆಂದುಕೊಂಡಿತು.

ಕುದುರೆ ನಡೆದು ಮುಂದೆ - ಮುಂದೆ ಹೋಗುತ್ತಿದ್ದ ಹಾಗೆ ಜನರೆಲ್ಲರೂ ತಲೆಬಗ್ಗಿಸಿ ನಿಂತಿದ್ದಾರೆ. ನಮಸ್ಕಾರ ಮಾಡುತ್ತಿದ್ದಾರೆ. ಜನರೆಲ್ಲರು ತನಗೇ ನಮಸ್ಕಾರ ಮಾಡುತ್ತಿದ್ದಾರೆ ಎಂಬ ಅಹಂಕಾರ ಕುದುರೆಗೆ ಬಂದುಬಿಟ್ಟಿತು. ನನ್ನಿಂದಲೇ ಈ ಊರ ಜನರು ಒಳ್ಳೆಯ ಸ್ಥಿತಿಯಲ್ಲಿದ್ದಾರೆ ಎಂದು ಗರ್ವಪಟ್ಟು ಬೀಗುತ್ತ, ಸುಮಾರು ದೂರ ನಡೆಯಿತು. ಸ್ವಲ್ಪ ಹೊತ್ತಿನ ಬಳಿಕ ಮೆರವಣಿಗೆ ಮುಗಿಯಿತು. ನಿಧಾನವಾಗಿ ಆ ದೇವಿಯ ಉತ್ಸವಮೂರ್ತಿಯನ್ನು ಇಳಿಸಿದರು. ಈಗ ಕುದುರೆಗೆ ಯಾರು ನಮಸ್ಕಾರ ಮಾಡುತ್ತಿಲ್ಲ. ಕುದುರೆಯನ್ನು ಅದರ ಪಾಡಿಗೆ ಬಿಟ್ಟುಬಿಟ್ಟರು. ಇದರಿಂದ ಕುದುರೆ ಬೇಜಾರಗೊಂಡು ಮತ್ತೆ ಹೋಗಿ ದೇವಿವಿಗ್ರಹದ ಹತ್ತಿರ ನಿಂತಿತು. ಅಲ್ಲಿದ್ದ ಜನರು ಬಾರುಕೋಲಿನಿಂದ ಕುದುರೆಗೆ ಹೊಡೆದರು. ತಕ್ಷಣ ಕುದುರೆ ಓಡಿತು. ಎಲ್ಲರೂ ನಮಸ್ಕಾರ ಮಾಡುತ್ತಿದ್ದದ್ದು ನನ್ನ ಮೇಲೆ ಕೂರಿಸಿದ್ದ ದೇವಿಯ ವಿಗ್ರಹಕ್ಕೆ ಹೊರತು, ನನಗಲ್ಲ ಎಂಬ ಸತ್ಯ ಕುದುರೆಗೆ ಗೊತ್ತಾಯಿತು.

ಈ ಸತ್ಯವನ್ನು ನಾವೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಸಮಾಜ/ಜನರು ನಮಗೇನಾದರೂ ಗೌರವ ಕೊಡುತ್ತಿದ್ದಾರೆ. ಎಂದರೆ, ಅದು ನಮ್ಮಲ್ಲಿರುವಂತಹ ದೈವತ್ವದ ಗುಣಕ್ಕೆ ಹೊರತು, ನಮ್ಮ ಶರೀರಕ್ಕಾಗಲಿ, ನಮ್ಮ ಅಲಂಕಾರಕ್ಕಾಗಲಿ ಅಲ್ಲ. ನಮ್ಮಲ್ಲಿರುವ ಸಂಪತ್ತು ಐಷಾರಾಮಿತನ ಇವುಗಳನ್ನು ನೋಡಿ ಜನ ಗೌರವ ಕೊಡುವುದಿಲ್ಲ. ಜನ ಗೌರವ ಕೊಡಬೇಕಾದರೆ ನಮ್ಮಲ್ಲಿ ಒಳ್ಳೆಯ ಗುಣಗಳಿರಬೇಕು. ಆ ಒಳ್ಳೆಯ ಗುಣಗಳಿಂದ ಸಮಾಜಕ್ಕೆ ನಾವು ಏನಾದರೂ ಒಳ್ಳೆಯ ಕೊಡುಗೆಗಳನ್ನು ಕೊಡುತ್ತಿರಬೇಕು. ಆ ಸಮಾಜಕ್ಕೆ ಬೇಕಾದಂತಹ ಅವಶ್ಯಕತೆಗಳನ್ನು ಪೂರೈಸುವ ಗುಣ ನಮ್ಮಲ್ಲಿರಬೇಕು. ಈ ಸದ್ಗುಣಗಳೆಂಬ ದೇವರು ನಮ್ಮಲ್ಲಿ ನೆಲೆಸಿದಾಗ ಈ ಸಮಾಜ ನಮಗೆ ಕೈ ಎತ್ತಿ ಮುಗಿಯುತ್ತದೆ. ಗೌರವದಿಂದ ಕಾಣುತ್ತದೆ.

ದೇವಿಯ ವಿಗ್ರಹವನ್ನು ಇಳಿಸಿದ ನಂತರ ಕುದುರೆಯನ್ನು ಜನ ತಿರಸ್ಕಾರ ಭಾವನೆಯಿಂದ ಹೇಗೆ ನೋಡಿದರೋ ಹಾಗೆಯೇ ನಾವು ನಮ್ಮಲ್ಲಿರುವ ಒಳ್ಳೆಯ ಗುಣಗಳನ್ನು ತ್ಯಜಿಸಿದ್ದಲ್ಲಿ ಜನ ನಮ್ಮನ್ನೂ ಕೂಡ ತಿರಸ್ಕಾರ ಮನೋಭಾವನೆಯಿಂದಲೇ ನೋಡುತ್ತಾರೆ. ಆದ್ದರಿಂದ ಒಳ್ಳೆಯ ಗುಣಗಳನ್ನು ನಮ್ಮ ಶರೀರಕ್ಕೆ ಅಲಂಕರಿಸಿಕೊಳ್ಳಬೇಕು. ಒಳ್ಳೆಯ ಮಾತು ಒಳ್ಳೆಯ ಸ್ವಭಾವ ನಮ್ಮದಾಗಿರಬೇಕು.

# ವಿದ್ಯಾವಂತ ನಿರುದ್ಯೋಗಿ



◆ ಚಾರುಲತ ಎಸ್.
ಅಂತಿಮ ಬಿ.ಎ. (ಹೆಚ್.ಇ.ಪಿ.)

ಒಮ್ಮೆ ಒಂದು ಊರಲ್ಲಿ ಯಜ್ಞ ನಡೆದಿತ್ತು. ಊರಿನವರೆಲ್ಲ ಯಜ್ಞ ಕಾರ್ಯಕ್ಕಾಗಿ ಒಂದಿಲ್ಲೊಂದು ರೀತಿಯ ಸಹಾಯ ಮಾಡುತ್ತಿದ್ದರು. ಅವನ್ನು ಕಂಡು ಒಬ್ಬ ದನಕಾಯುವ ಮನುಷ್ಯ ನಾನೇನು ತರಲಿ? ಎಂದು ಅಲ್ಲಿನ ವ್ಯವಸ್ಥಾಪಕರನ್ನು ಕೇಳಿದ. ಅದಕ್ಕವರು ನಿನಗೊಂದು ಮಹತ್ವದ ಕೆಲಸವನ್ನು ಕೊಡುತ್ತೇವೆ. ನಾಳೆ ನೀನು ಒಂದು ತಂಬಿಗೆ ಗೋಮೂತ್ರ ತೆಗೆದುಕೊಂಡು ಬಾ ಎಂದು ಹೇಳಿದರು.

ಈ ಕೆಲಸ ತನಗೆ ಸೇರಿದ್ದು ಎಂದು ಆ ದನಗಾಹಿಯು ಒಪ್ಪಿಕೊಂಡ. ಆದರೆ ಮರುದಿನ ಅವನು 'ಗೌಡರು ನಾನು ಹೋಗುವುದಕ್ಕೆ ಮುಂಚೆಯೇ ಎಲ್ಲ ದನಗಳನ್ನು ದೊಡ್ಡಿಯಿಂದ ಮೇಯಲು ಅಟ್ಟಿಬಿಟ್ಟಿದ್ದಾರೆ. ನಾನು ಎಮ್ಮೆಯ ಗೋಮೂತ್ರ ತರಲೇ?' ಎಂದು ಹೇಳಿದ.

ಈ ಅಶಿಕ್ಷಿತನ ಮಾತಿಗೆ ಎಲ್ಲರೂ ನಕ್ಕರು "ಹುಚ್ಚಪ್ಪ ಎಮ್ಮೆಗೆ ಎಲ್ಲಿಯಾದರೂ ಗೋಮೂತ್ರ ಇರುತ್ತದೆಯೆ? ಅದು ಹಸುವಿನದಾದರೆ ಮಾತ್ರ ಗೋಮೂತ್ರ" ಎಂದು ಅಲ್ಲಿದ್ದವರೊಬ್ಬರು ವಿವರಣೆ ನೀಡಿದರು. ಆದರೆ ಈ ರೀತಿಯ ಪದಪ್ರಯೋಗ ಸುಶಿಕ್ಷಿತರು ಮಾಡುವುದಿಲ್ಲ ಎಂದೇನೂ ಇಲ್ಲ. ಗೇಟು ಬಾಗಿಲು ಕಾಂಪೌಂಡ್‌ಗೋಡೆ ಎಂಬಂಥ ಶಬ್ದಗಳನ್ನು ವಿದ್ಯಾವಂತರೂ ಬಳಸುತ್ತಾರೆ.

ಒಬ್ಬ ಯುವಕ ಕೆಲಸಕ್ಕಾಗಿ ಅರ್ಜಿ ಹಾಕಿದ್ದ. ಅದರಲ್ಲಿ 'ನಾನೊಬ್ಬ ವಿದ್ಯಾವಂತ ನಿರುದ್ಯೋಗಿ' ಎಂದು ಬರೆದಿದ್ದ. ಸಂದರ್ಶಕರು 'ನೀನು ವಿದ್ಯಾವಂತನೋ ನಿರುದ್ಯೋಗಿಯೋ? ಇವರೆಡೂ ಪರಸ್ಪರ ವಿರೋಧಿ ಶಬ್ದಗಳನ್ನು ನಿನ್ನ ಅರ್ಜಿಯಲ್ಲಿ ಬರೆದಿದ್ದೀಯಲ್ಲ?'- ಎಂದು ಕೇಳಿದರು. ಅದಕ್ಕೆ ಆ ಯುವಕ "ನಾನಾದರೋ ವಿದ್ಯಾವಂತ ನಿರುದ್ಯೋಗಿ, ಆದರೆ ನಮ್ಮ ಅಣ್ಣ, ಪ್ರಶಿಕ್ಷಿತ ನಿರುದ್ಯೋಗಿ" ಎಂದ.

ಅವನ ಈ ವಿವರಣೆಯಿಂದ ಅಲ್ಲಿದ್ದ ಸದಸ್ಯರೆಲ್ಲ ನಕ್ಕರು. "ಅಂದರೆ ನಿಮ್ಮ ಅಣ್ಣನಿಗೆ ನಿರುದ್ಯೋಗದ ಪ್ರಶಿಕ್ಷಿತ ವಿಶೇಷ ತರಬೇತಿ ಕೊಡಲಾಗಿದೆಯೇ?"

ಆ ಯುವಕನ ಅರ್ಜಿ ಇಂಗ್ಲಿಷಿನಲ್ಲಿತ್ತು. ಅದರಲ್ಲಿ ಹತ್ತು ಹದಿನೈದು ತಪ್ಪುಗಳನ್ನು ಗುರುತಿಸಿದ ಅಧಿಕಾರಿಗಳು ಅರ್ಜಿಯನ್ನು ಕನ್ನಡದಲ್ಲಿ ಬರೆದು ಕೊಡುವಂತೆ ಹೇಳಿದರು. ಆದರೆ ಆ ಮಹಾಶಯ ಕನ್ನಡದಲ್ಲಿ ಇಪ್ಪತ್ತು ಇಪ್ಪತ್ತೈದು ತಪ್ಪುಗಳನ್ನು ಮಾಡಿದ! ಸಂದರ್ಶಕರು ಅವನಿಗೆ ಹೊರಗಿನ ಬಾಗಿಲನ್ನು ತೋರಿಸಿದರು.

ಇದು ಆ ಯುವಕನ ಸಮಸ್ಯೆ ಅಷ್ಟೇ ಅಲ್ಲ. ಶಿಕ್ಷಣದಿಂದ ಸರ್ವತೋಮುಖ ಯೋಗ್ಯತೆಯನ್ನು ವಿದ್ಯಾರ್ಥಿಯಲ್ಲಿ ಬೆಳೆಸುವ ಪದ್ಧತಿ ಈಗ ಇಲ್ಲ. ಶಿಕ್ಷಣ ಸಂಸ್ಥೆಗಳಲ್ಲಿಯೂ ಇಲ್ಲ. ಅಷ್ಟೇ ಅಲ್ಲ, ಶಾಲೆ ಕಾಲೇಜಿನ ಕಟ್ಟೆ ಹತ್ತಿದ ಮೇಲೆ ಕೆಟ್ಟದಾರಿಗಿಳಿದ ವಿದ್ಯಾರ್ಥಿಗಳ ಉದಾಹರಣೆಗಳೂ ಎಷ್ಟೋ ಇವೆ.

ಸ್ನಾನ ಮಾಡುವುದು ಸ್ವಚ್ಛತೆಗಾಗಿ, ಆದರೆ ಸ್ನಾನವಾದ ಮೇಲೆ ನದಿಯ ಅಥವಾ ಹೊಳೆಯ ಕೊಳೆಯಾದ ನೀರಿನಿಂದ ಅವನ ಶರೀರ ಹೊಲಸಾಗುವುದೂ ಅಲ್ಲದೆ ಆ ಹೊಲಸಿನಿಂದಾಗಿ ಚರ್ಮದಲ್ಲಿ ತುರಿಕೆಯಾದಂತೆ ಇಂದಿನ ಶಿಕ್ಷಣ ವ್ಯವಸ್ಥೆಯ ಪಾಡಾಗಿದೆ. ಶುಭ್ರವಾದ ಬಾತುಕೋಳಿಗಳು ಒಂದು ಕೊಳವೆಯಿಂದ ಹಾದು ಹೋದವು. ಆಗ ಅವುಗಳ ಮೈಯೆಲ್ಲಾ ಕಪ್ಪಾಯಿತು. ಕಾರಣ ಅದು ಹೊಗೆ ಕೊಳವೆಯಾಗಿತ್ತು. ಅನೇಕ ಪಾಲಕರು ತಮ್ಮ ಮಕ್ಕಳು ಚಿಕ್ಕವರಿದ್ದಾಗ ಶೀಲವಂತರೂ ಬುದ್ಧಿವಂತರೂ ಆಗಿದ್ದು ಶಾಲೆ ಕಾಲೇಜಿನಿಂದಾಗಿ ಕೆಟ್ಟಿರುವರೆಂದು ದಾವೆ ಮಾಡುತ್ತಾರೆ. ಹಾಗಾದರೆ ಶಿಕ್ಷಣ ಅವರಿಗೆ ಕೊಟ್ಟಿರುವುದೇನು - ಸಂಸ್ಕೃತಿಯೇ? ವಿದ್ಯೆಯೇ? ಚಾರಿತ್ರ್ಯವೆ? ಮಾರುತಿಯನ್ನು ತಯಾರಿಸಲು ಹೋಗಿ ಮಂಗಗಳು ತಯಾರಾದಂತೆ ಆಗಿದೆ.

ಹಾಗೆಂದೇ ನಮ್ಮ ದೇಶದಲ್ಲಿ ಸುಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆ ದಾನವನಂತೆ "ಆ" ಎಂದು ಬಾಯಿ ತೆರೆದು ನಿಂತಿದೆ.

# ಮೊಬೈಲ್ ಕರೆನ್ಸಿ ಬಳಸುವಾಗ ಜಾಗ್ರತೆ ಇರಲಿ



◆ ಶವನ ತಸ್ಮಿಯಾ
ಅಂತಿಮ ಬಿ.ಕಾಂ.

ಮೊಬೈಲ್ ಕರೆನ್ಸಿ ಇಂದಿನ ಬಿಸಿ ಬಿಸಿ ವಿಷಯ. ಕೂಲಿ ಕಾರ್ಮಿಕನೇ ಆಗಿರಲಿ ಕಛೇರಿ ಕೆಲಸಗಾರನೇ ಆಗಿರಲಿ ಕರೆನ್ಸಿ ಖಾಲಿಯಾಯಿತೆಂದರೆ ಅವನ ಚಡಪಡಿಕೆ ಹೇಳತೀರದು ಊಟವಿಲ್ಲದೆ ಉಪವಾಸವಿದ್ದರೂ ಇರಬಹುದು. ಆದರೆ ಕರೆನ್ಸಿ ಖಾಲಿಯಾಗಬಾರದು. ಇದರ ಜೊತೆಯಲ್ಲಿ ಡೇಟಾ ಪ್ಯಾಕ್‌ನ ಹುಚ್ಚು ಕೂಡಾ ಸೇರಿಕೊಂಡು ದುಡಿಯುವ ವರ್ಗದವರ ದೊಡ್ಡ ಮೊತ್ತದ ಆದಾಯ ಮೊಬೈಲ್‌ಗೆ ಕರೆನ್ಸಿ ಡೇಟಾ ಪ್ಯಾಕ್ ಹಾಕಲು ಖರ್ಚಾಗುತ್ತಿದೆ. ಇದರಿಂದ ಮೊಬೈಲ್ ಕಂಪೆನಿಗಳು ನೆಟ್‌ವರ್ಕ್‌ನ್ನು ಒದಗಿಸುವ ಕಂಪೆನಿಗಳು ಮತ್ತು ಈ ವ್ಯಾಪಾರದಲ್ಲಿ ತೊಡಗಿಸಿಕೊಂಡಿರುವವರು ಸಂತೋಷದಿಂದ ಇದ್ದಾರೆ ಮೊಬೈಲ್ ಹೊಂದಿರುವ ಹೆಚ್ಚಿನ ಜನರಿಗೆ ಆ ಮೊಬೈಲನ್ನು ಹೇಗೆ ಬಳಸಬೇಕೆಂಬ ತಿಳುವಳಿಕೆ ಇಲ್ಲದಿರುವುದು ವಿಷಾದಕರ ನೀವು ಇನ್ನೊಬ್ಬರಿಗೆ ಕರೆ ಮಾಡಿದಾಗ ಮೆಸೇಜ್ ಮಾಡಿದಾಗ ನೀವು ಅವರ ಖಾಸಗಿ ಬದುಕಿನಲ್ಲಿ ಪ್ರವೇಶಿಸುತ್ತಿದ್ದೀರಿ ಎಂಬ ಅರಿವು ನಿಮಗಿರಬೇಕು ಅಲ್ಲದೆ ಅವರ ಖಾಸಗಿ ಸಮಯವನ್ನು ನೀವು ಅತಿಕ್ರಮಿಸುತ್ತೀರಿ ಎಂಬ ಅರಿವು ಇರಬೇಕು ಆದುದರಿಂದ ನೀವು ಯಾರಿಗೂ ಕರೆ ಮಾಡುವ ಮೊದಲು ಅವರಲ್ಲಿ ಏನನ್ನು ಮಾತನಾಡಬೇಕೆ? ಎಷ್ಟು ಹೊತ್ತು ಮಾತನಾಡಬೇಕು? ಎಂಬ ತಯಾರಿಯೆನ್ನು ಮೊದಲೇ ಮಾಡಿಕೊಳ್ಳಬೇಕು. ನನಗೆ ಕರೆ ಮಾಡುವ ಹೆಚ್ಚಿನ ಗ್ರಾಹಕರಿಗೆ ಸಿಬ್ಬಂದಿಗೆ ನನ್ನ ಸಮಯದ ಒತ್ತಡದ ಬಗ್ಗೆ ತಿಳಿದಿರುವುದಿಲ್ಲ ಅವರು ಕಡೆ ಮಾಡಿದ ನಂತರ ತಮ್ಮ ಸಮಸ್ಯೆಗಳನ್ನು ಪದೇ ಪದೇ ಹೇಳಿದ್ದನ್ನೇ ಎರಡು ಮೂರು ನಾಲ್ಕು ಬಾರಿ ಹೇಳುತ್ತಾ ಸಮಯ ವ್ಯರ್ಥ ಮಾಡುತ್ತಾರೆ ಇದರಿಂದ ಅವರ ಕರೆನ್ಸಿಯೂ ಖಾಲಿಯಾಗುತ್ತದೆ ನನ್ನ ಸಮಯವೂ ವ್ಯರ್ಥವಾಗುತ್ತದೆ. ಬದಲಿಗೆ ಏನು ಹೇಳಬೇಕೆಂದು ಪೂರ್ವ ನಿರ್ಧಾರ ಮಾಡಿಕೊಳ್ಳಲು ಕೆಲವೇ ವಾಕ್ಯಗಳಲ್ಲಿ ಚೊಕ್ಕವಾಗಿ ಮಾತನಾಡಿದರೆ ಸಮಯ ಕರೆನ್ಸಿ ಎರಡೂ ಉಳಿಯುತ್ತದೆ. ಕೇಳುವವನಿಗೂ ರೇಜಿಗೆ ಆಗುವುದಿಲ್ಲ.

ಇನ್ನು ಡೇಟಾ ಪ್ಯಾಕ್‌ನ ಸಮಸ್ಯೆ ಸಾಮಾಜಿಕ ಮಾಧ್ಯಮಗಳು ಪ್ರಬಲವಾದ ಮೇಲೆ ಓದಲು ಬರದಿದ್ದರೂ ಚಿತ್ರಗಳನ್ನು ನೋಡುವ ಆಸೆ ಫೇಸ್‌ಬುಕ್ ವಾಟ್ಸ್‌ಆಪ್ ಪ್ರತಿಷ್ಠೆಯ ಸಂಕೇತವಾಗಿದೆ ವಾಟ್ಸ್‌ಆಪ್‌ನಲ್ಲಿ ಗುಡ್ ಮಾರ್ನಿಂಗ್‌ಗೆ ಒಂದು ಫೋಟೋ, ಗುಡ್ ಇವನಿಂಗ್ ಒಂದು ಫೋಟೋ ಹೀಗೆ ಅಗತ್ಯವಿಲ್ಲದಿದ್ದರೂ ಫೋಟೋಗಳು ಅಪ್‌ಲೋಡ್ ಆಗುತ್ತಿರುತ್ತವೆ ವಾಟ್ಸ್‌ಆಪ್ ಗ್ರೂಪ್‌ನಲ್ಲಿ ಮೊದಲ ದಿನವೇ ರಾಜಕೀಯ ಧರ್ಮವು ಪ್ರವೇಶವಾಗಿ ಗ್ರೂಪಿಗೆ ಸೇರಿದ ಸದಸ್ಯರೆಲ್ಲರೂ ತಮಗೆ ತಿಳಿದಂತೆ ಮಾತನಾಡಿ ಆ ಗ್ರೂಪ್ ಪ್ರಾರಂಭಿಸಿದ ಉದ್ದೇಶವೇ ಕಳೆದು ಹೋಗುತ್ತದೆ ಇನ್ನು ಫೇಸ್‌ಬುಕ್‌ನಲ್ಲಿ ತಮ್ಮನ್ನು ಪ್ರದರ್ಶಿಸಿಕೊಳ್ಳುವ ಹಂಬಲದಲ್ಲಿ ಸಮಯ ಡೇಟಾ ಪ್ಯಾಕ್ ಇವನ್ನು ವ್ಯರ್ಥ ಮಾಡುವವರಿಗೇನೂ ಕಮ್ಮಿಯಿಲ್ಲ ಸಾಮಾಜಿಕ ಮಾಧ್ಯಮಗಳು ಇಂಟರ್‌ನೆಟ್‌ಗಳು ನಮ್ಮ ಅನುಕೂಲಕ್ಕೆ ತಕ್ಕಂತೆ ಜನರಿಗೆ ಅಗತ್ಯವಿರುವ ಮಾಹಿತಿಯನ್ನು ಕೊಡುವ ಪಡೆದುಕೊಳ್ಳುವ ಕೆಲಸ ಆಗಬೇಕಾದ ಅಗತ್ಯವಿಲ್ಲದೆ ವಾಟ್ಸ್‌ಅಪ್ ಪೇಸ್‌ಬುಕ್‌ನ್ನು ಉಪಯೋಗಿಸುವುದು ಯುಟ್ಯೂಬ್ ಇದೆಯೆಂದು ನೋಡುತ್ತಾ ಕೂರುವುದು ವಾಟ್ಸ್‌ಆಪ್‌ನಲ್ಲಿ ಬಂದ ಎಲ್ಲಾ ಫೋಟೊ ವಿಡಿಯೋಗಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದರಿಂದ ನಿಮ್ಮ ಡೇಟಾಪ್ಯಾಕ್ ಖಾಲಿಯಾಗಿ ಬಿಡುತ್ತದೆ. ತೀರಾ ಇತ್ತೀಚೆಗೆ ನಮ್ಮ ಭಾರತ ಸರಕಾರ ಪ್ರಸಿದ್ಧ ನೆಟ್‌ವರ್ಕ್ ಕಂಪೆನಿಯೊಂದಕ್ಕೆ ರೂ. 20 ಸಾವಿರ ಕೋಟಿ ಆದಾಯ ತೆರಿಗೆಯನ್ನು ವಿಧಿಸಿದೆ. ಒಮ್ಮೆ ಆಲೋಚನೆ ಮಾಡಿ ಇಷ್ಟು ದೊಡ್ಡ ಮೊತ್ತದ ಆದಾಯ ತೆರಿಗೆಯನ್ನು ಪಾವತಿಸುವ ಕಂಪೆನಿಯ ಆದಾಯ ಎಷ್ಟಿರಬಹುದು? ನಾವು

ಬಡವರು ವರ್ಗದವರು ನಮ್ಮ ಹುಚ್ಚುತನದಿಂದ ಬೇಕಾಬಿಟ್ಟಿಯಾಗಿ ಕರೆನ್ಸಿ ಮತ್ತು ಡೇಟಾ ಪ್ಯಾಕ್‌ನ್ನು ಖರ್ಚು ಮಾಡಿ ಕಂಪೆನಿಗಳ ಹೊಟ್ಟೆ ತುಂಬಿಸುವುದು ಸರಿಯಾದ ಕ್ರಮವೇ? ಮೊಬೈಲ್‌ನಲ್ಲಿ ಮಾತನಾಡುವಾಗ ಹೇಳಬೇಕಾದ್ದನ್ನು ಒಂದೆರಡು ನಿಮಿಷದಲ್ಲಿ ಹೇಳಲು ಸಾಧ್ಯವಿಲ್ಲವೆ? ಸಾಮಾಜಿಕ ಮಾಧ್ಯಮಗಳನ್ನು ಬಳಸುವಾಗ ಬೆಳಿಗ್ಗೆ ಮಧ್ಯಾಹ್ನ ಸಾಯಂಕಾಲ ಹೀಗೆ ಐದೈದು ನಿಮಿಷದಂತೆ ಸಮಯ ವಿಧಿಸಿಕೊಂಡು ಡೇಟಾ ಪ್ಯಾಕ್‌ನ ಖರ್ಚನ್ನು ಕಡಿಮೆಮಾಡಿಕೊಳ್ಳಲು ಸಾಧ್ಯವಿಲ್ಲವೇ? ಇದರಿಂದ ಹಣ ಮತ್ತು ಸಮಯ ಎರಡರ ಉಳಿತಾಯವೂ ಸಾಧ್ಯ ಆತ್ಮೀಯರೇ ಈ ತಿಂಗಳಿನಿಂದ ನಮ್ಮ ಮೊಬೈಲ್ ಕರೆನ್ಸಿ ಮತ್ತು ಡೇಟಾ ಪ್ಯಾಕ್‌ನ ಖರ್ಚನ್ನು ಪ್ರತೀ ತಿಂಗಳು ಶೇ. 20ರಷ್ಟು ಕಡಿಮೆ ಮಾಡುವುದಾಗಿ ಸಂಕಲ್ಪ ಮಾಡಿ ಮಿಗತೆ ಮಾಡಿದ ಹಣವನ್ನು ತೆಗೆದಿರಿಸಿರಿ ನೀವು ಆಶ್ಚರ್ಯಪಡುವಷ್ಟು ಹಣವನ್ನು ಉಳಿಸಲು ಸಾಧ್ಯವಿದೆ.

ಮೊಬೈಲ್ ಕರೆಗಳು ಮಿತವಾಗಿರಲಿ ಹಿತವಾಗಿರಲಿ ಡೇಟಾ ಪ್ಯಾಕ್‌ಗಳನ್ನು ಅಗತ್ಯವಿದ್ದಾಗ ಮಾತ್ರ ಬಳಸಿರಿ. ಹಣ ಉಳಿತಾಯ ಮಾಡಿರಿ.

## ನೀ ನನಗಾದರೆ ನಾ ನಿನಗೆ



◆ ಪೂಜ ಎನ್.
ಅಂತಿಮ ಬಿ.ಕಾಂ.

ನಮ್ಮ ನೆರೆಯವರಿರಲಿ, ಪಯಣದ ಜೊತೆಗಾರನಿರಲಿ, ಸ್ನೇಹಿತನೇ ಇರಲಿ, ಯಾವುದೇ ಹಿತೈಷಿಯೇ ಇರಲಿ, ಅವರ ಕಷ್ಟಕಾಲದಲ್ಲಿ ವ್ಯಕ್ತಿ ಸಹಾಯಹಸ್ತ ಚಾಚುವುದು ಖಂಡಿತ.

ಇದಕ್ಕೊಂದು ಸ್ಪಷ್ಟ ಉದಾಹರಣೆ ಇಲ್ಲಿದೆ.

ಪ್ರಾಚೀನ ಕಾಲದಲ್ಲಿ ಓರ್ವ ವ್ಯಾಪಾರಿ ಊರಿಂದ ಊರಿಗೆ ಸರಕುಗಳನ್ನು ಕುದುರೆಗಳ ಮೇಲೆ ಇರಿಸಿಕೊಂಡು ತೆರಳಿ ವ್ಯಾಪಾರವನ್ನು ಮಾಡುತ್ತಿದ್ದ. ಹಾಗೆ ಒಮ್ಮೆ ಹಳ್ಳಿಯೊಂದಕ್ಕೆ ಎರಡೂ ಕುದುರೆಗಳ ಮೇಲೆ ಮೂಟೆ ಇತ್ಯಾದಿಯನ್ನು ಕಟ್ಟಿಕೊಂಡು ಹೋಗುವಾಗ ಬೆಟ್ಟವೊಂದು ಎದುರಾಯಿತು. ಆ ಬೆಟ್ಟವನ್ನು ಹತ್ತಿ ಇಳಿದರೆ ನಿಗದಿತ ಹಳ್ಳಿ ತಲುಪಬಹುದು ಆದರೆ ಆ ಎರಡು ಕುದುರೆಗಳ ಪೈಕಿ ಒಂದು ಕುದುರೆ ಅತೀವ ಜ್ವರದಿಂದ ಬಳಲಿ ಬೆಂಡಾಯಿತು. ಆದರೇನು ಕರ್ತವ್ಯ ಮಾಡಲೇಬೇಕಲ್ಲ, ಆಗ ಕುದುರೆ ತನ್ನ ಸಹವರ್ತಿ ಕುದುರೆಗೆ ತನ್ನ ಕಷ್ಟ ತಿಳಿಸಿ 'ನನ್ನ ಮೇಲಿರುವ ಹೊರೆಯನ್ನು ಕಡಿಮೆಗೊಳಿಸಿ ಒಂದೆರಡು ಮೂಟೆಯನ್ನು ನಿನ್ನ ಬೆನ್ನ ಮೇಲೇರಿಸಿಕೊಂಡು ಸಹಾಯಮಾಡುವೆಯಾ ಗೆಳೆಯಾ' ಎಂದು ದೈನ್ಯದಿಂದ ಬೇಡಿಕೊಂಡಿತು. ಆದರೆ ಸಹಾಯ ಮಾಡುವ ಮತ್ತೊಂದು ಕುದುರೆ 'ನಿನ್ನ ಮೇಲಿನ ಹೊರೆಯನ್ನು ನಾನೇಕೆ ಹೊರಲಿ, ಕಷ್ಟವೋ, ಸುಖವೋ ನಿನ್ನ ಜವಾಬ್ದಾರಿಯನ್ನು ನೀನೇ ನಿಭಾಯಿಸಿಕೋ ಎಂದು ಉಡಾಫೆಯಿಂದ ಹೇಳಿ ಮುಂದುವರಿಯಿತು. ಆದರೆ, ಪಯಣ ಮುಂದುವರಿದಂತೆ ಜ್ವರದಿಂದ ಬಳಲುತ್ತಿದ್ದ ಕುದುರೆ ಮುಂದೆ ನಡೆಯಲಾರದೇ ಅಲ್ಲಿಯೇ ಕುಸಿದು ಪ್ರಾಣ ಬಿಟ್ಟಿತು. ಆಗ ವ್ಯಾಪಾರಿ ಮೃತಪಟ್ಟ ಕುದುರೆಯ ಮೇಲಿನ ಸರಕನ್ನು ತೆಗೆದು ಇನ್ನೊಂದು ಕುದುರೆಯ ಮೇಲೆ ಇರಿಸಿಕೊಂಡು ಮುಂದುವರಿದ. ತನ್ನ ಶಕ್ತಿಗೆ ಮೀರಿದ ಹೊರೆಯನ್ನು ಹೊತ್ತು ತೆರಳುವಾಗ ಸಹವರ್ತಿ ಕುದುರೆ ಬೇಡಿಕೊಂಡರೂ ತಾನು ತಿರಸ್ಕರಿಸಿದ್ದನ್ನು ಅದು ಸ್ಮರಿಸಿಕೊಂಡಿತು. ತಾನು ಆ ಜ್ವರದಿಂದ ಬಳಲುತ್ತಿರುವ ಕುದುರೆಗೆ ಅಲ್ಪಸ್ವಲ್ಪ ಸಹಾಯ ಮಾಡಿದ್ದರೆ ಈ ಅಗಾಧ ಹೊರೆಯನ್ನು ಹೊತ್ತು ಸಾಗುವ ದಾರುಣ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ತನ್ನನ್ನೇ ತಾನೇ ಹಳಿದುಕೊಂಡಿತು. ಆದರೇನು 'ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ' ಎಂಬಂತೆ ತನ್ನ ಜೀವಮಾನ ಪರ್ಯಂತ ಎರಡು ಕುದುರೆಗಳು ಹೊರಬಹುದಾದ ಸರಕನ್ನು ಆ ಕುದುರೆಯೊಂದೇ ಹೊತ್ತು ಸಾಗಬೇಕಾಯಿತು. 'ನೀ ನನಗಾದರೆ ನಾ ನಿನಗೆ' ಎಂಬ ನುಡಿಮುತ್ತಿಗೆ ನಮ್ಮನ್ನು ಸಮರ್ಪಿಸಿಕೊಂಡರೆ ನಮ್ಮ ಕಷ್ಟಕಾಲದಲ್ಲಿ ಹೃದಯವಂತರು ಸಹಾಯ ಮಾಡಬಹುದಲ್ಲವೆ?

## ಹುತ್ತಗಟ್ಟಿದ ಚಿತ್ತ



◆ ಶರ್ಮಿಳಾ ಎಸ್.
ಅಂತಿಮ ಬಿ.ಎ. (ಹೆಚ್.ಇ.ಕೆ.)

"ಆದಿ ಕಾವ್ಯಮಿದಂ ಪ್ರೋಕ್ತಂ ಪುರಾ ವಾಲ್ಮೀಕಿನಾ ಕೃತಮ್"

ಇದು ರಾಮಾಯಣ ಮತ್ತು ವಾಲ್ಮೀಕಿಯನ್ನು ಸಂಗ್ರಹವಾಗಿ ಪರಿಚಯಿಸುವುದರಿಂದ ರಾಮಾಯಾಣವನ್ನು ಆದಿಕಾವ್ಯವೆಂದೂ, ವಾಲ್ಮೀಕಿಯನ್ನು ಆದಿಕವಿಯೆಂದೂ ಹೇಳುವುದು ಅತ್ಯಂತ ಸೂಕ್ತ ವಿಚಾರವೇ ಮಹರ್ಷಿ ವಾಲ್ಮೀಕಿಯನ್ನು ಕುರಿತು ಸಾಕಷ್ಟು ವಾದ-ಸಂವಾದಗಳು ನಡೆದಿವೆ. ಆತ ರಚಿಸಿದ ರಾಮಾಯಣವೆಂಬ ಅದ್ಭುತ ಕೃತಿ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಿಂದ ಕಟ್ಟಿದ ಕಾವ್ಯ ಶಿಲ್ಪವಾದರೆ, ಈ ಶಿಲ್ಪಕ್ಕೆ ಆತನ ಶೋಕವೇ ಶ್ಲೋಕವಾದ 'ಮಾ ನಿಷಾದ'ವಂತೆ! - ತಳಪಾಯ. ಅದೆಂತಹ ಭಾವದೊತ್ತಡ! ತಡೆಯಲಾರದೆ ಬಂದ ಉದ್ಗಾರ ಇಡೀ ರಾಮಾಯಣದ ಸಾರವಂತೆ, ಕ್ರೌಂಚಮಿಥುನದ ರಸಭಾಗವೇ ನವರಸಗಳ ತೋರಣವಾಗಿ, ವಾಲ್ಮೀಕಿಯ ಶೋಕದಿಂದುದಿಸಿದ ಕರುಣಾಮಯ ಕಾವ್ಯ 'ರಾಮಾಯಾಣ ಮಹಾನದಿ'ಯಾಗಿ ರಾಮ ನಗರವನ್ನು ಸೇರಿತು.

ವಾಲ್ಮೀಕಿ ಎಂಬ ಹೆಸರು ಬಂದುದು. ಭೃಗುವಂಶದ ರತ್ನಾಕರನೆಂಬ ಬ್ರಾಹ್ಮಣ ದರೋಡೆಕೋರನಾಗಿದ್ದು, ಸಪ್ತರ್ಷಿಗಳ ಕರುಣೆಯ ಕಣ್ಣಿಗೆ ಬಿದ್ದು ರಾಮತಾರಕ ಜಪದಲ್ಲೇ ಲೀನನಾಗಿ, ಸುತ್ತಲೂ ಹುತ್ತ ಬೆಳೆದು ಅದನ್ನೊಡೆದು ಬಂದುದರಿಂದ ಎಂಬುದು ಸುಪ್ರಸಿದ್ಧವಾಗಿದೆ. ಈತನಿಗೆ 'ರೂಕ್ಷ' ಎಂಬ ಹೆಸರಿತ್ತು. ಪ್ರಾಚೇತಸನೆಂಬ ಮತ್ತೊಂದು ನಾಮವೂ ಇರುವುದಾಗಿ ಆತ ಕಟ್ಟಿದ ಕಾವ್ಯದಲ್ಲೇ ಇದೆ. ಹೆಸರು ಎಂತೂ ಬರಲಿ 'ವಾಲ್ಮೀಕಿ' ಬೆಳೆದ ಬದುಕಿನ ಪ್ರತೀಕವೆಂದು ನಾವು ಗ್ರಹಿಸಬೇಕು.

ಮಾನವನಾಗಿಯೂ ದೇವತ್ವ ಸಾಧಿಸಿದ ರಘುವರನ ಚರಿತ್ರೆ ಜಗಮಾನ್ಯವಾಗಿದೆ. ಆದರ್ಶ ಪುತ್ರ, ತಂದೆ, ಪತಿ, ಮಿತ್ರ, ರಾಜ, ಆಡಳಿತಗಾರ ಧರ್ಮಪ್ರಭು ಹೀಗೆ ಹಲವು ಮುಖಗಳಿಂದ ರಾಮನನ್ನು ತನ್ನ ಹುತ್ತಗಟ್ಟಿದ ಚಿತ್ತದಿಂದ ಕೆತ್ತಿದ್ದಾನೆ ವಾಲ್ಮೀಕಿ.

ವಾಲ್ಮೀಕಿಯ ಭಾಷೆಯನ್ನು ಸುಲಭ, ಸರಳ ಎಂದೇ ವಿಮರ್ಶಕರು ಅಭಿಪ್ರಾಯ ಪಟ್ಟಿದ್ದಾರೆ. ಅಂದಿನ ಸಂಸ್ಕೃತ ಭಾಷೆಯಲ್ಲಿ ಇಂದಿಗೂ ತಿಳಿಯುವಂತೆ ಬರೆದುದು ಅವರ ಹಿರಿಮೆ. ಚಂಪೂ ರಾಮಾಯಾಣಕಾರನಾದ ಭೋಜನು ಕವಿಯನ್ನು ಕುರಿತು ಹೇಳುತ್ತಾ ಮಧುಮಯಫಣಿತೀನಾಂ ಮಾರ್ಗದರ್ಶಿ ಮಹರ್ಷಿಃ' ಎಂದು ಹೊಗಳಿದ್ದಾರೆ. 'ಪಾಠ್ಯೇ ಗಾಯೇ ಚ ಮಧುರಂ' ಇದು ವಾಲ್ಮೀಕಿಗಿರುವ ಪ್ರಶಸ್ತಿ.

ವಸ್ತುವಿನ ಶ್ರೇಷ್ಠತೆ, ಕರ್ತೃವಿನ ಹಿರಿಮೆ, ಪುರುಷಾರ್ಥ ಪ್ರತಿಪಾದನೆ, ಆಧ್ಯಾತ್ಮ ಚಿಂತನೆ - ಈ ಎಲ್ಲ ದೃಷ್ಟಿಯಿಂದಲೂ ವಾಲ್ಮೀಕಿ ಉತ್ತುಂಗ ಸ್ಥಾನದಲ್ಲಿ ನಿಲ್ಲುತ್ತಾನೆ. ಅದೆಂತಹ ಚಿತ್ರವೆಂದರೆ 'ರಾಮೋ ವಿಗ್ರಹವಾನ್ ಧರ್ಮಃ' ಎಂದೇ ತೃಪ್ತರಾಗುತ್ತಾರೆ.

ಹೀಗೆ ಕಾವ್ಯ ಆಧ್ಯಾತ್ಮ - ಚರಿತ್ರೆ ಮೂರನ್ನೂ ಏಕತ್ರ ಸಂಯೋಜಿಸಿದ ಆದಿ ಕವಿ, ನಿತ್ಯಪಾರಾಯಣ ಗ್ರಂಥವನ್ನು ನಮಗೆ ನೀಡಿದ್ದಾರೆ. ಈ ವಿಚಾರವನ್ನೇ ಸಮರ್ಥಿಸುತ್ತವೆ.

ಈ ಸಾಲುಗಳು:

'ವಾಲ್ಮೀಕಿ ಗಿರಿ ಸಂಭೂತಾ ರಾಮ ಸಾಗರಗಾಮಿನೀ |
ಪುನಾತು ಭುವನಂ ಪುಣ್ಯ ರಾಮಾಯಾಣ ಮಹಾನದೀ||

ಕವಿ ಗೋಪಾಲಕೃಷ್ಣ ಅಡಿಗರ ಈ ಸಾಲನ್ನು ನೆನಪಿಸಿಕೊಳ್ಳುತ್ತೇನೆ...

ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತ್ತೇನು
ಪುರುಷೋತ್ತಮನ ಆ ಅಂಥ ರೂಪ ರೇಖೆ?
(ಶ್ರೀ ರಾಮನವಮಿಯ ದಿವಸ)

# ಅವಳೆಂದಿಗೂ ಅವಳೇ....



◆ ತೇಜಸ್ವಿನಿ ಎಸ್.
ಅಂತಿಮ ಬಿ.ಕಾಂ.

ಮದುವೆಯಾದ ಮೂರು ತಿಂಗಳ ನಂತರ ಮನೆಗೆ ಬಂದ ಮಗಳ ನೋಡಿ ಆ ತಾಯಿಗೆ ಆಶ್ಚರ್ಯ! ಅರೆ ಅದೆಷ್ಟು ಬದಲಾಗಿದ್ದಾಳೆ, ಈಗ ಮೂರು ತಿಂಗಳ ಕೆಳಗಷ್ಟೇ ಚಿಕ್ಕ ಮಗುವಿನ ಹಾಗೆ ನನ್ನ ಮಡಿಲಲ್ಲಿ ತಲೆ ಇಟ್ಟು, ಅಮ್ಮ ನಂಗೆ ನಿನ್ನ ಬಿಟ್ಟು ಹೋಗಕ್ಕಾಗಲ್ಲ, ಅಪ್ರೆಲ್ಲ ಹೇಗೋ ಏನೋ ಭಯ ಆಗುತ್ತೆ, ನಂಗೇನು ಕೆಲ್ಸ ಬರಲ್ಲ ಏನ್ ಮಾಡ್ಲಿ ಅಂತ ಗೋಗರೆಯುತ್ತಿದ್ದವಳು ಈಗ ಹೇಗಾಗಿದ್ದಾಳೆ, ಮೂರೆ ತಿಂಗಳು ಅದೆಷ್ಟು ಬದಲಾವಣೆ ಅವಳಲ್ಲಿ, ಈ ಮನೆಯಲ್ಲಿ ಅವಳೆ ಚಿಕ್ಕವಳು ಎಂಬುದರ ಜೊತೆಗೆ ಹೆಣ್ಣು ಮಗು ಎಂಬ ಇನ್ನೊಂದು ಅಡ್ವಾಂಟೇಜ್ ಸೇರಿ ಮುದ್ದಿನ ಮೂಟೆಯಾಗಿದ್ದಳು, ಸದಾ ಅಣ್ಣನೊಂದಿಗೆ ಜಗಳ ಆಡುತ್ತಾ ಮನೆ ತುಂಬಾ ಓಡಾಡುತ್ತಿದ್ದಳು, ಜೊತೆಗೆ ಕೆಲಸಕ್ಕೆ ಕರೆದರೆ ಮೂಗು ಮುರಿಯುತ್ತಿದ್ದಳು, ಅವಳ ಮಾತುಗಳಂತೂ ಪುಟ್ಟ ಮಗುವೇ ಎನಿಸುವಂತಿತ್ತು. ವಯಸ್ಸು ಹದಿನೆಂಟಾದರೂ ಅಪ್ಪನ ತೊಡೆಯ ಮೇಲೆ ಕುಳಿತು ಮಾತಾಡುತ್ತಿದ್ದವಳನ್ನು ನಾನೇ ಅಲ್ಲವೇ ನೀನೀಗ ದೊಡ್ಡವಳಾಗಿದ್ದೀಯಾ ಹಾಗೆಲ್ಲ ಕೂರಬೇಡ ಎಂದು ಗದರಿದ್ದು, ಹೀಗೆಲ್ಲ ಚೆಲ್ಲಾಟ ಆಡುತ್ತ ಬೆಳೆದ ಈ ಮನೆಯ ನಂದಾದೀಪ ಮತ್ತೊಂದು ಮನೆಗೆ ಹೋಗುವಾಗ ಅದೆಷ್ಟು ಹೆದರಿತ್ತು ಈ ತಾಯಿ ಹೃದಯ. ಆದರೆ ಈಗ ಅವಳಲ್ಲಿ ಅಂದೆಂಥ ಗಾಂಭೀರ್ಯ, ಮಾತಿನಲ್ಲಿ ಅದೆಷ್ಟು ದಿಟ್ಟತನ, ಕೆಲಸದಲ್ಲಿ ಅದೆಷ್ಟು ಅಚ್ಚುಕಟ್ಟು, ನನ್ನ ಮಗಳೇ ಇವಳು ಎಂದು ಆಶ್ಚರ್ಯವಾದರೂ ಹೆಮ್ಮೆಯೆನಿಸುತ್ತೆ, ಏಷ್ಟೇ ಆಗಲಿ ಅವಳು ಹೆಣ್ಣೇ ಅಲ್ಲವೇ. . . . ಹೌದು ಹೆಣ್ಣಿನ ಜೀವನವೇ ಹಾಗೇ ನೀರಿನಂತೆ ಯಾವ ಪಾತ್ರೆಗೆ ಸುರಿದರೆ ಆ ಆಕಾರಕ್ಕೆ ಹೊಂದುವ ಗುಣ, ಬದಲಾವಣೆ ಗಂಡಿಗಿಂತ ಹೆಣ್ಣಿನ ಜೀವನದಲ್ಲೆ ಹೆಚ್ಚು, ಅದು ಅವಳ ಅನಿವಾರ್ಯವೂ ಕೂಡ, ಇಡೀ ಸಂಸಾರವನ್ನು ತನ್ನೊಡನೆ ನಡೆಸಬೇಕಾದರೆ ಅವಳಿಗೆ ಆ ಬದಲಾವಣೆ ಅಗತ್ಯ, ಹುಟ್ಟುವುದೊಂದೆಡೆ, ಸಾಯುವುದೊಂದೆಡೆ ಇದರ ಮಧ್ಯೆ ಬೆಸೆದುಕೊಳ್ಳುವ ಸಂಬಂಧಗಳು ನೂರಾರು. ತಾಯಿ, ತಂಗಿ, ಮಗಳು, ಅಕ್ಕ, ಮಡದಿ, ಅತ್ತೆ, ನಾದಿನಿ, ಚಿಕ್ಕಮ್ಮ ಹೀಗೆ ಏನೇನೋ ಸಂಬಂಧಗಳು ಅವಳನ್ನು ಬಳ್ಳಿಯಂತೆ ಸುತ್ತುತ್ತಲೇ ಇರುತ್ತವೆ, ಅವಳಿಡಬೇಕಾದ ಪ್ರತಿಯೊಂದು ಹೆಜ್ಜೆಯು ಕರ್ತವ್ಯಯುತವಾಗಿ, ಜಾಗರೂಕತೆಯಾಗಿ ಇರಬೇಕು ಒಂದು ಮನೆಯಲ್ಲಿ ಒಂದು ಹೆಣ್ಣಿನ ಹೆಜ್ಜೆ ದಾರಿ ತಪ್ಪಿದರೆ ಅದರಿಂದ ನರಳುವ ಜೀವಗಳು ಹಲವಾರಾಗುತ್ತವೆ. . ಎಂಥ ಹೆಣ್ಣಿಗೂ ಸುಗಮ ಎನ್ನುವಂತಿಲ್ಲ, ಪ್ರತಿ ಒಂದು ಹೆಣ್ಣಿನ ಜೀವನವು ಒಂದೊಂದು ಕಾದಂಬರಿಯಂತೆ ಅದರಲ್ಲಿ ಹೇಳಿಕೊಳ್ಳುವಂತಹ, ಹೇಳಲಾಗದಂತಹ ನೂರಾರು ವ್ಯಥೆಗಳು ಇದ್ದೇ ಇರುತ್ತವೆ, ಈ ವ್ಯಥೆ ಅವಳು ಋತುಮತಿಯಾದಾಗಿನಿಂದಲೇ ಶುರುವಾಗುತ್ತದೆ, ಇನ್ನು ಅವಳ ಪಾತ್ರವೂ ಗಂಡಿನ ಜೀವನದಲ್ಲಿ ಕಾರ್ಯೇಷು ದಾಸಿ; ಕೆಲಸದಲ್ಲಿ ಸೇವಕಿಯಂತೆ,

ಕರಣೇಶು ಮಂತ್ರಿ; ಸಲಹೆಯಲ್ಲಿ ಮಂತ್ರಿಯಂತೆ
ಬೋಜೇಶು ಮಾತಾ; ಬಡಿಸುವಾಗ ತಾಯಿಯಂತೆ
ರೂಪೇಶು ಲಕ್ಷ್ಮಿ; ರೂಪದಲ್ಲಿ ಲಕ್ಷ್ಮಿಯಂತೆ
ಕ್ಷಮಯೇಶು ಧರಿತ್ರಿ; ಕ್ಷಮಿಸುವಲ್ಲಿ ಧರಿತ್ರಿಯಂತೆ

ಈ ಐದು ಗುಣಗಳನ್ನು ಸಮರ್ಪಕವಾಗಿ ನಿಭಾಯಿಸಿದಾಗ ಮಂತ್ರ ಮಹತ್ವವಾಗುತ್ತದೆಯಂತೆ, ಅಂದರೆ ಆಗ ಮಾತ್ರವೇ ಅವಳು ಆತನಿಗೆ ಧರ್ಮಪತ್ನಿ ಎನಿಸಲು ಯೋಗ್ಯಳಂತೆ ಇದು ಹಿಂದಿನಿಂದ ಹಿರಿಯರು ಹೇಳಿರುವ ಮಾತು.

## ಪ್ರೀತಿ



◆ ತೇಜಸ್ವಿನಿ
ದ್ವಿತೀಯ ಬಿ.ಎ. (ಹೆಚ್.ಇ.ಪಿ.)

ಪ್ರೀತಿ ಎಂಬುದು ಏನು ಎಂದು ಇಂತಿಷ್ಟೇ ಶಬ್ಧಗಳಲ್ಲಿ ಬರೆದು ಪೋಣಿಸಲಾಗದ, ಹೇಳಲಾಗದ ಒಂದು ಮಧುರ ಅನುಭೂತಿಗೆ ಸಿಕ್ಕುವರೆಷ್ಟೋ ಜನ, ಸಿಕ್ಕಿ ಒದ್ದಾಡುವ ವರೆಷ್ಟೋ ಜನ, ಪ್ರೀತಿಗಾಗಿ ಸತ್ತವರಿದ್ದರೆ ಸಾಯಿಸುವವರಿದ್ದಾರೆ. ಹೀಗಿದ್ದೂ ಒಮ್ಮೆ ಪ್ರೀತಿಯೆಂಬ ಈ ಅಮಲಿನಲ್ಲಿ ತೇಲಾಡದವರು ಮನುಷ್ಯರೇ ಅಲ್ಲವೆಂಬಂತೆಯೂ ಹೇಳಿದವರಿದ್ದಾರೆ. ಏನೇ ಇರಲಿ ನಿಜವಾದ ಪ್ರೀತಿಗೆ ಎಲ್ಲವನ್ನೂ ಮರೆಸಬಲ್ಲ ಶಕ್ತಿಯಿರುತ್ತದೆ. ನಿಜವಾದ ಪ್ರೀತಿ ಸಿಕ್ಕದವರಿಗೆ ಹಣ, ಅಂತಸ್ತು, ಪ್ರತಿಷ್ಠೆ ಹೆಸರು ಏನೂ ಬೇಡ. ಬೇಕಾಗುವುದೂ ಇಲ್ಲ ಅಷ್ಟರ ಮಟ್ಟಿಗೆ ಈ ಪ್ರೀತಿಯೊಂಥರಾ ನಶೆ.

ಅದೇ ಪ್ರೀತಿ ಅನ್ನೋದು ಖಾಯಿಲೆಯೂ ಹೌದು ಔಷಧವೂ ಹೌದು. ಖಾಯಿಲೆಯನ್ನೇ ಔಷಧವೆಂದು ಸೇವಿಸಿದರೆ ಅದಕ್ಕೆ ನೂರೆಂಟು ಸೈಡ್ ಎಫೆಕ್ಟ್ ಹಾಗಾಗಿ ಪ್ರೀತಿ ಎಷ್ಟು ಪ್ರಮಾಣದಲ್ಲಿದ್ದರೆ ಔಷಧ ಯಾವ ಮಟ್ಟವನ್ನು ಮೀರಿದ ಖಾಯಿಲೆ ಅನ್ನುವುದು ಅವರಿಗೆ ಅರಿವಿರಬೇಕು ಅವಳಿಗಿದ್ದ ಭಯ, ಪ್ರೀತಿ ಕಮ್ಮಿ ಆಗುವ ಭಯ ಬಿಟ್ಟು ಹೋಗುವ ಭಯ ಜಾತಿಯ ಭಯ, ಕೋಮಿನ ಭಯ, ಹೆತ್ತವರ ಭಯ, ಕಳಕೊಳ್ಳುವ ಭಯ, ಅತಿ ಅವಲಂಬನೆಯ ಭಯ, ಕೀಳರಿಮೆಯಲ್ಲಿ ಹುಟ್ಟಿದ ಭಯ, ಮುಪ್ಪಿನ ಅಂತರದ ಭಯ. ದೂರ ಮಾಡಿದ ಅವ್ಯಕ್ತ ಭಯ. ಔಷಧವೇ ಖಾಯಿಲೆಯಾಗಿ ಪರಿಣಮಿಸಿದ ದುರಂತವು ಹೌದು.

## ಮೆಚ್ಯುರಿಟಿ ಎಂದರೇನು?

* ಬೇರೆಯವರನ್ನು ಬದಲಿಸಲು ಯತ್ನಿಸದೇ ತನ್ನನ್ನು ತಾನು ಬದಲಿಸಿಕೊಳ್ಳುವತ್ತ ಗಮನ ಹರಿಸುವುದು.
* ನಿಮಗೆ ಹೊಳೆಯುವ ಐಡಿಯಾಗಳೆಲ್ಲಾ ಶ್ರೇಷ್ಠವಲ್ಲ ಅಂತ ಅರ್ಥ ಮಾಡಿಕೊಳ್ಳುವುದು.
  ಬೇರೆಯವರನ್ನು ಅವರಿರುವಂತೆಯೇ ಸ್ವೀಕರಿಸುವುದು
* ಹೊರತು ನಿಂತವರನ್ನು ತಡೆಯದೇ ಬಿಡುವುದು
* ಸಂಬಂಧದಲ್ಲಿ ವಿನಾಕಾರಣ ನಿರೀಕ್ಷೆಗಳನ್ನು ಕೈಬಿಡುವುದು ಕ್ಷಮಿಸಲು ಕಲಿಯುವುದು.
* ನಾವು ಏನು ಮಾಡಿದರೂ ಅದು ನಿಮ್ಮ ಸಮಾಧಾನಕ್ಕೆ ಅನ್ನೋದು ಗೊತ್ತು ಮಾಡಿಕೊಳ್ಳುವುದು.
* ನಿಮ್ಮ ಬುದ್ಧಿವಂತಿಕೆಯನ್ನು ಜಗತ್ತಿಗೆ ತೋರಿಸುವುದನ್ನು ನಿಲ್ಲಿಸುವುದು.
* ಎಲ್ಲಾ ವಿಷಯದಲ್ಲೂ ಸಲಹೆ ಕೊಡುವ ಅಭ್ಯಾಸ ಬಿಡುವುದು.
* ನಿಮ್ಮ ಕೆಲಸಕ್ಕೆ ಬೇರೆಯವರ ಹೊಗಳಿಕೆ ಅಪೇಕ್ಷೆ ಪಡದೇ ಇರುವುದು
* ಒಬ್ಬರನ್ನೊಬ್ಬರಿಗೆ ಹೋಲಿಸದಿರುವುದು
* ಎಂಥಾ ಸಂದರ್ಭದಲ್ಲೂ ನಿಮ್ಮ ಜೊತೆ ನೀವು ಖುಷಿಯಾಗಿರುವುದು.
* ಯಾವಾಗಲೂ ನೀವು ಬಯಸಿದ್ದು ಸಿಗುವುದಿಲ್ಲ ಎಂಬುದು ತಿಳಿದಿರುವುದು.
* ವಸ್ತುಗಳಲ್ಲಿ ನಿಮ್ಮ ಸಂತೋಷ ಕಂಡುಕೊಳ್ಳುವುದನ್ನು ನಿಲ್ಲಿಸುವುದು.

## ದೋಸೆ ಹೊಟ್ಟೆ ಟೊಳ್



◆ ಮಮತ ಸಿ.
ದ್ವಿತೀಯ ಬಿ.ಎ. (ಹೆಚ್.ಇ.ಕೆ.)

ಒಂದು ಶಾಲೆಯಲ್ಲಿ ಎಲ್ಲರಿಗಿಂತ ಕುಳ್ಳನಾಗಿದ್ದ ಒಬ್ಬ ಹುಡುಗನಿದ್ದ. ಅವನನ್ನು ಎಲ್ಲರು ಚೋಟು ಮೆಣಸಿನಕಾಯಿ ಚೋಟು ಮೆಣಸಿನಕಾಯಿ(ಕುಳ್ಳ) ಎಂದು ತಮಾಷೆ ಮಾಡುತ್ತಿದ್ದರು. ಅದರಿಂದ ಅವನಿಗೆ ಅಪಮಾನ ಆದಂತೆ ಆಗುತ್ತಿತ್ತು. ತನ್ನನ್ನು ಅಪಹಾಸ್ಯ ಮಾಡುವುದು, ಪೀಡಿಸುವುದು ಅತಿಯಾದಂತೆ ಅನಿಸುತ್ತಿತ್ತು.

ಒಂದು ದಿನ ಮನೆಗೆ ಅಳುತ್ತ ಬಂದ, ಮನೆಯಲ್ಲಿ ಅಜ್ಜಿ 'ಏಕೆ ಅಳುತ್ತಿದ್ದೀಯಾ?' ಎಂದು ಕೇಳಿದರು.

'ನಾನು ಇನ್ಮೇಲೆ ಶಾಲೆಗೆ ಹೋಗುವುದಿಲ್ಲ ಎಂದು ಹುಡುಗ ಅಳುತ್ತ ಹೇಳಿದನು. ಯಾಕಪ್ಪ, ಏನಾಯ್ತು?' ಎಂದು ಅಜ್ಜಿ ಕೇಳಿದಳು.

ಶಾಲೆಯಲ್ಲಿ ಎಲ್ಲರು ನನ್ನ ಚೋಟು ಮೆಣಸಿನಕಾಯಿ ಅಂತ ಪೀಡಿಸುತ್ತಾರೆ. ಈಗಾಗಿ ಅದು ಅತಿಯಾಗಿ, ನನಗೆ ಸಾಕಾಗಿದೆ ಅದ್ಕೇ ನಾನು.... ಎಂದು ಮತ್ತೂ ಜೋರಾಗಿ ಅಳತೊಡಗಿದ. ಆಗ ಅಜ್ಜಿ ಸ್ವಲ್ಪ ಹೊತ್ತು ಯೋಚಿಸಿ "ಸರಿ, ನಾನು ನಿನಗೆ ಒಂದು ಮಂತ್ರ ಹೇಳಿಕೊಡುತ್ತೇನೆ ಯಾರಾದರೂ ನಿನ್ನನ್ನು ಕಾಡಿಸಿ, ಅಪಮಾನ ಮಾಡಿದರೆ ಈ ಮಂತ್ರ ಹೇಳಿಬಿಡು; ಅವರು ತಕ್ಷಣ ಸತ್ತು ಬಿಡ್ತಾರೆ" ಎಂದಳು.

ಅಳುವುದನ್ನು ನಿಲ್ಲಿಸಿ "ಹೌದಾ ಅಜ್ಜಿ, ಹಾಗಾದರೆ ಈಗಲೇ ಆ ಮಂತ್ರ ಹೇಳಿಕೊಡು" ಎಂದು ಕೇಳಿದನು.

'ನಿಮ್ಮ ದೋಸೆ ಹೊಟ್ಟೆ ಟೊಳ್' - ಇದೇ ಮಂತ್ರ ಇದನ್ನು ಸರಿಯಾಗಿ ಕಂಠ ಪಾಠ ಮಾಡು, ಈಗ ಊಟಕ್ಕೆ ಬಾ' ಎಂದು ಅಜ್ಜಿ ಹೇಳಿದಳು. ಮರುದಿನ ಎಂದಿನಂತೆ ಕುಳ್ಳನು ಶಾಲೆಗೆ ಹೋದನು. ವರ್ಗದಲ್ಲಿದ್ದ ಮಕ್ಕಳು ಯಥಾಪ್ರಕಾರ 'ಚೋಟು ಮೆಣಸಿನಕಾಯಿ ಬಂದ' ಎಂದು ಹೇಳುತ್ತಾ ಕುಣಿಯತೊಡಗಿದರು. ಕೂಡಲೇ ಕುಳ್ಳನು ಅವರನ್ನೆಲ್ಲ ದಿಟ್ಟಿಸಿ ನೋಡಿ 'ನಿಮ್ಮ ದೋಸೆ ಹೊಟ್ಟೆ ಟೊಳ್' ಎಂದು ಹೇಳಿಬಿಟ್ಟನು. ತಕ್ಷಣವೇ ವರ್ಗದಲ್ಲಿದ್ದ ಮಕ್ಕಳೆಲ್ಲ ಸತ್ತು ಹೋದರು. ಕುಳ್ಳನಿಗೆ ತುಂಬಾ ಖುಷಿಯಾಯಿತು!

ಸ್ವಲ್ಪ ಹೊತ್ತಾದ ಬಳಿಕ ಮೇಷ್ಟ್ರು ಬಂದರು ಸತ್ತ ಮಕ್ಕಳನ್ನು ನೋಡಿ ಗಾಬರಿಯಾಗಿ, 'ಏನಿದು ಚೋಟು ಮೆಣಸಿನಕಾಯಿ' ಎಂದು ಪ್ರಶ್ನಿಸಿದರು. ಕೂಡಲೇ ಕುಳ್ಳನು 'ಮೇಷ್ಟ್ರೇ, ನಿಮ್ಮ ಹೊಟ್ಟೆ ದೋಸೆ ಹೊಟ್ಟೆ ಟೊಳ್' ಎಂದು ಹೇಳಿಯೇ ಬಿಟ್ಟನು ಶಿಕ್ಷಕರೂ ತಕ್ಷಣ ಪ್ರಾಣ ಬಿಟ್ಟರು! ಇದರಿಂದ ಬಹಳ ಹೆಮ್ಮೆ ಪಟ್ಟು ಕುಳ್ಳನು ಮನೆಗೆ ಓಡಿ ಬಂದನು. ಅಜ್ಜಿಯೂ ಎಂದೂ ಇಲ್ಲದೇ ಅಂದು, 'ಏನು ಇವತ್ತು ಬಹಳ ಖುಷಿಯಾಗಿದ್ದೀಯಾ, ಚೋಟು ಮೆಣಸಿನ ಕಾಯಿ' ಎಂದು ಕೇಳಿದಳು. ಆಗ ಕುಳ್ಳನು 'ಅಜ್ಜಿ, ನಿನ್ನ ದೋಸೆ ಹೊಟ್ಟೆ ಟೊಳ್' ಎಂದು ಮಂತ್ರ ಉಸುರಿಯೇ ಬಿಟ್ಟನು. ಪಾಪ! ಮಂತ್ರ ಬೋಧಿಸಿದ್ದ ಅಜ್ಜಿಯೂ ತೀರಿ ಹೋದಳು. ಕುಳ್ಳನಿಗೆ ಅಂದು ತಲೆಕೆಟ್ಟಿತ್ತು ಅಂತ ಕಾಣುತ್ತೆ, ಆ ಎಲ್ಲರ ಸಾವಿನಿಂದ ತಾನು ಸಂತಸಪಡುತ್ತಲೇ ಹೋದನು. ಖುಷಿಯಿಂದ ಕುಣಿಕುಣಿದಾಡುತ್ತಾ ಬಂದು ದೊಡ್ಡ ಕನ್ನಡಿಯ ಎದುರು ಬಂದನು, ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ಕಂಡು, ಏನಾಯಿತೋ ಏನೋ 'ಏಯ್ ಚೋಟು ಮೆಣಸಿನಕಾಯಿ' ಎಂದು ಹೇಳಿದನು. ಪ್ರತಿಬಿಂಬವು ಹಾಗೇ ಹೇಳಿದಂತೆ ಕಂಡಿತು. ತಕ್ಷಣ ತಾನೇ ತನ್ನ ಕಡೆಗೆ ಬೆರಳು ಮಾಡಿಕೊಂಡು 'ಚೋಟು ಮೆಣಸಿನಕಾಯಿ, ನಿನ್ನ ದೋಸೆ ಹೊಟ್ಟೆ ಟೊಳ್' ಎಂದು ಹೇಳಿಬಿಟ್ಟನು ತಕ್ಷಣ ಅವನೂ ಸತ್ತು ಬಿದ್ದನು!

ಈ ಕಥೆಯಿಂದ ತಿಳಿದುಬರುವುದೆನೆಂದರೆ ಒಬ್ಬರನ್ನು ನೋಡಿ ಹಿಯಾಳಿಸಬಾರದು/ನಗಬಾರದು ಅವರಿಗೂ ಮನಸಿದೆ ನೋವಾಗುತ್ತದೆ ಮತ್ತು ಇದರಿಂದ ಮತ್ತೊಂದು ತಿಳಿಯುವುದೆಂದರೆ 'ಅತಿ ಆಸೆ ಗತಿಗೇಡು' ಮತ್ತು 'ಆತುರಗಾರನಿಗೆ ಬುದ್ದಿಮಟ್ಟ'

# ಕರಿಯಣ್ಣ, ಬಿಳಿಯಣ್ಣ, ಕೆಂಚಣ್ಣ



◆ ದನುಶ ಎಸ್.
ಪ್ರಥಮ ಬಿ.ಕಾಂ.

ಒಂದೂರಿನಲ್ಲಿ ಒಂದು ಸಣ್ಣ ಬಡ ಕುಟುಂಬ ಇತ್ತು. ಆ ಕುಟುಂಬದಲ್ಲಿ ಅಮ್ಮ, ಮಗ ಮಾತ್ರ ಇದ್ದರು. ಅಮ್ಮನ ಹೆಸರು ಸಿದ್ದಮ್ಮ, ಮಗನ ಜಾಣ. ಹೆಸರಿಗೆ ಮಾತ್ರ ಇವನು ಜಾಣ, ಬುದ್ದಿಯಲ್ಲಿ ಶತಪೆದ್ದನು. ಸಿದ್ದಮ್ಮ ದಿನಾಲು ಇಡ್ಲಿಯನ್ನು ಮಾರಿ ಜೀವನ ಸಾಗಿಸುತ್ತಿದ್ದಳು. ತನಗೆ ವಯಸ್ಸಾಗಿದೆ ಎಂದು ಜಾಣನ ಕೈಯಲ್ಲಿ ಕೊಟ್ಟು, ಇಡ್ಲಿಗಳನ್ನು ಮಾರಿಕೊಂಡು ಬಾ ಎಂದು ಹೇಳಿದಳು. ಈ ಜಾಣನು ದಾರಿಯಲ್ಲಿ ಇಡ್ಲಿಯ ಬುಟ್ಟಿಯನ್ನು ತಲೆ ಮೇಲೆ ಹೊತ್ತು ಬರುವಾಗ ಮೂರು ನಾಯಿಗಳು ಇವನ ಹಿಂದೆಯೇ ಬರುತ್ತಿದ್ದವು. ಆ ಮೂರು ನಾಯಿಗಳ ಹೆಸರು ಕರಿಯಣ್ಣ, ಬಿಳಿಯಣ್ಣ ಮತ್ತು ಕೆಂಚಣ್ಣ ಎಂದು. ಈ ಮೂರು ನಾಯಿಗಳು ಇಡ್ಲಿಯನ್ನು ನೋಡಿದಕ್ಕೆ ನಮ್ಮ ಜಾಣನು "ಓ, ಈ ನಾಯಿಗಳಿಗೆ ಹೊಟ್ಟೆ ಹಸಿದಿದೆ" ಎಂದು ಎಲ್ಲಾ ಇಡ್ಲಿಗಳನ್ನು ಆ ಕರಿಯಣ್ಣ, ಬಿಳಿಯಣ್ಣ ಮತ್ತು ಕೆಂಚಣ್ಣನಿಗೆ ಹಾಕಿದನು. ಪ್ರತಿದಿನವು ತಾಯಿ ಸಿದ್ದಮ್ಮ ಇಡ್ಲಿ ಮಾಡಿಕೊಟ್ಟರೆ, ಜಾಣನು ಈ ಮೂರು ನಾಯಿಗಳಿಗೆ ಹಾಕಿ ಬರಿಗೈಯಲ್ಲಿ ಮನೆಗೆ ಹಿಂದಿರುಗುತ್ತಿದ್ದನು. ಒಂದು ದಿನ ಸಿದ್ದಮ್ಮ "ದಿನಾಲು ಇಡ್ಲಿಮಾತ್ರ ತಕ್ಕೊಂಡು ಹೋಗ್ತಿಯಲ್ಲ, ದುಡ್ಡು ಮಾತ್ರ ತರೊಲ್ಲ, ಈವತ್ತು ದುಡ್ಡು ತರ್ಲಿಲ್ಲ ಅಂದ್ರೆ ಮನೆಗೆ ಸೇರ್ಸಲ್ಲ ಎಂದು ಬೈದು ಕಳುಹಿಸುತ್ತಾಳೆ. ಆಗ ಅವನು ದಾರಿಯಲ್ಲಿ ಬರುತ್ತಿದ್ದಾಗ, ಈ ಮೂರು ನಾಯಿಯು ಸಹ ಇವನ ಹಿಂದೆಯೇ ಬಾಲವನ್ನು ಅಲ್ಲಾಡಿಸಿಕೊಂಡು ಬರುತ್ತಿದ್ದವು. ಅದನ್ನು ಕಂಡ ಜಾಣನು ಸಿಟ್ಟಿನಿಂದ ಒಂದು ದೊಣ್ಣೆಯನ್ನು ಎತ್ತಿ ಆ ಮೂರು ನಾಯಿಗಳ ಮೇಲೆ ಬೀಸಿ ಅಟ್ಟಾಡಿಸಿಕೊಂಡು ಹೋದನು. ಆ ನಾಯಿಗಳು ಊರಿನ ಆಚೆ ಮಾವಿನ ತೋಪಿನೊಳಗೆ ನುಗ್ಗಿದವು. ಅಲ್ಲಿ ನಾಲ್ಕು ಮಂದಿ ಕಳ್ಳರು, ತಾವು ಕದ್ದ ಆಭರಣಗಳನ್ನು ಭಾಗಮಾಡಿ ಕೊಳ್ಳುತ್ತಿದ್ದರು. ಈ ಮೂರು ನಾಯಿಗಳು ಬೊಗಳುವುದನ್ನು, ವೇಗವಾಗಿ ಓಡಿಬರುವುದನ್ನು ಗಮನಿಸಿ ಪೊಲೀಸರ ನಾಯಿಗಳೆಂದು ಭಾವಿಸಿ ತಂದಿದ್ದನ್ನು ಅಲ್ಲಿಯೇ ಬಿಟ್ಟು ಓಡಿ ಹೋದರು. ಆ ಮೂರು ನಾಯಿಗಳು ಆ ಆಭರಣಗಳ ಮಧ್ಯೆ ನಿಂತವು. ಆಗ ಜಾಣನು "ಓ ಈ ಒಡವೆಗಳನ್ನು ಇಲ್ಲಿ ಇಟ್ಟು ನನ್ನನ್ನು ಬರಿಗೈನಲ್ಲಿ ಮನೆಗೆ ಕಳುಹಿಸುತ್ತಿದ್ದ, ಎಂದು ಹೇಳಿ ಆ ಆಭರಣಗಳನ್ನು ಮೂಟೆಮಾಡಿ ಕಟ್ಟಿ ಹೊತ್ತುಕೊಂಡು ಹೋಗುವಷ್ಟರಲ್ಲಿ ಸಂಜೆಯಾಗಿತ್ತು ಮನೆಗೆ ಹೋಗಿ ತಲುಪಿದನು. ಸಿದ್ದಮ್ಮ, ಏನಿದು ಎಂದು ಕೇಳಿ, ಅದರಲ್ಲಿರುವುದನ್ನು ಕಂಡಳು. ಜಾಣನು ನಡೆದ ಕಥೆಯನ್ನು ತಿಳಿಸಿ ಹೊರಗೆ ಹೋಗಿ ಒಬ್ಬೊಬ್ಬರಾಗಿಯೇ ಸುದ್ದಿ ಹಬ್ಬಿತು. ಅದಕ್ಕೆ ಸಿದ್ದಮ್ಮ ಆ ಒಡವೆಗಳನ್ನು ಮರೆಮಾಚಿ, ಜಾಣನನ್ನು ಮಲಗಿಸಿ ಬೆಳಗಾಗುವಷ್ಟರಲ್ಲಿ ಬೆಂಕಿ ಕೆಂಡಗಳನ್ನು ಮನೆಯ ಹಂಚಿನ ಮೇಲೆ ಹರಡಿ, ಮನೆಯ ಮುಂದೆಯು ಹರಡಿದಳು. ನಂತರ ಈ ಜಾಣನನ್ನು ಕರೆದು "ನೋಡೋ ಬೆಂಕಿಮಳೆ ಸುರಿದಿದೆ" ಎಂದು ಹೇಳಿ ನಂಬಿಸಿದಳು. ಅವನು ನಂಬಿದನು. ಅದರ ನಾಳೆ ರಾತ್ರಿ ಇವನನ್ನು ಮಲಗಿಸಿ ರಾತ್ರೋರಾತ್ರೀ ಕಜ್ಜಾಯಗಳನ್ನು ಮಾಡಿ ಮನೆಯ ಹಂಚಿನ ಮೇಲೆ ಮತ್ತು ಕೆಳಗೆ ಹರಡಿದಳು. ನಂತರ ಜಾಣನನ್ನು ಕರೆದು "ನೋಡೋ ಕಜ್ಜಾಯದ ಮಳೆ ಬಂದಿದೆ" ಆಯ್ದುಕೊಳ್ಳೋ ಎಂದು ಹೇಳಿ ಆ ಶತಪೆದ್ದನಿಗೆ ನಂಬಿಸಿದಳು ಮತ್ತು ಆ ಜಾಣನು ನಂಬಿದನು. ನಂತರ ಈ ಸುದ್ದಿಯು ಪೊಲೀಸರಿಗೂ ತಿಳಿದು ವಿಚಾರಣೆ ಎಂದು ಜಾಣನ ಮನೆಗೆ ಬಂದು ಕೇಳಿದರು. ಆಗ ಸಿದ್ದಮ್ಮ ಎಲ್ಲಿ ಸ್ವಾಮಿ ನಮ್ಮ ಮನೇಲಿ ಆಭರಣಾನೆ ಇಲ್ಲ ಜಾಣನನ್ನೇ ಕೇಳಿ ಎಂದು ಹೇಳಿದಳು. ಆಗ ಪೊಲೀಸರು ಕೇಳಿದಾಗ, ಈ ಜಾಣನು "ಅದೇ ಸ್ವಾಮಿ ಅವತ್ತು ಬೆಂಕಿ

ಮಳೆ ಸುರಿದಿತ್ತಲ್ಲ ಅವತ್ತೇ ಮತ್ತೆ ಅದರ ನಾಳೆಯೇ ಕಜ್ಜಾಯದ ಮಳೆ ಬಿತ್ತಲ್ಲ ಆಗ ಬುದ್ದಿ" ಎಂದು ಹೇಳಿದ. ಸಿದ್ದಮ್ಮ ನೋಡಿ ಬುದ್ದಿ ಎಲ್ಲಾದ್ರು ಬೆಂಕಿ ಕಜ್ಜಾಯದ ಮಳೆ ಬೀಳುತ್ತಾ ಬುದ್ದಿ ಇವನ ಮಾತನ್ನ ನಂಬಿ ಬಂದಿದ್ರಲ್ಲ, ಇವನು ಪೆದ್ದ ಬುದ್ದಿ ಎಂದು ಹೇಳಿ ಕಳುಹಿಸಿದಳು. ನಂತರ ಯತಾಪ್ರಕಾರ ಇಡ್ಲಿಯನ್ನು ಮಾರಿ, ಆಭರಣಗಳನ್ನು ಮರೆಮಾಚಿ, ಜಾಣನು ಮತ್ತು ಸಿದ್ದಮ್ಮಳು ಜೀವನವನ್ನು ಸಾಗಿಸುತ್ತಿದ್ದರು.

## ನಮ್ಮ ದೇಶದ ಪ್ರಗತಿಪಥ ನಾಯಕರು



◆ ಸವಿತ ಎಂ.
ಅಂತಿಮ ಬಿ.ಕಾಂ.

ನಮ್ಮ ದೇಶದ ಪ್ರಗತಿಫಲ ನಾಯಕರು

ನಮ್ಮ ದೇಶವನ್ನು ಪ್ರಗತಿ ಪಥದಲ್ಲಿ ತೆಗೆದುಕೊಂಡು ಹೋಗಲು ಹಲವಾರು ನಾಯಕರು ತಮ್ಮ ಜೀವನವನ್ನೇ ಮುಡಿಪಾಗಿ ಇಟ್ಟಿದ್ದಾರೆ. ನಮ್ಮ ಭಾರತ ದೇಶವು ಹಲವಾರು ವೈವಿಧ್ಯತೆಗಳಿಂದ ಕೂಡಿದ ದೇಶ ಎಲ್ಲಾ ರಂಗಗಳಲ್ಲೂ ಮುಂದುವರಿದ ನಮ್ಮ ದೇಶಕ್ಕೆ ಸಾವಿರಾರು ಜನ ನಾಯಕರು ನಾಯಕಿಯರು ತಮ್ಮ ಪ್ರತಿಭೆ, ಶ್ರಮ, ಸಮಯವನ್ನು ವೆಚ್ಚ ಮಾಡಿದ್ದಾರೆ. ಒಂದು ದೇಶ ಪ್ರಗತಿಯಾಗಬೇಕಾದರೆ ಎಲ್ಲಾ ರಂಗಗಳಲ್ಲೂ ಮುಂದೆ ಇರಬೇಕು. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ನಾಯಕರು ತುಂಬಾ ಕಷ್ಟಪಟ್ಟು ನಮಗೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಆಗಲೂ ಸಹ ಕವಿ, ಸಂಗೀತಗಾರರು, ಶಿಕ್ಷಣಕ್ಷೇತ್ರದಲ್ಲಿ ಉತ್ತಮ ಹಾದಿಯನ್ನು ರೂಪಿಸಲು ಕಷ್ಟಪಟ್ಟು ದುಡಿದಿದ್ದಾರೆ. ಹೀಗೆ ನಮ್ಮ ನಾಯಕರು ನಮಗೆ ತಂದುಕೊಟ್ಟ ಸ್ವಾತಂತ್ರ್ಯದ ಬಗ್ಗೆ ಇತಿಹಾಸದಲ್ಲಿ ನಡೆದ ಸಂಗತಿಗಳನ್ನು ಅರಿಯುವ ವಿಶ್ವಾಸ ನಮಗೆ ಇರಬೇಕು. ಅಂತಹ ವಿವರಗಳನ್ನು ನೀಡುವ ಸಲುವಾಗಿ ಎಲ್ಲಾ ವಿಷಯಗಳನ್ನು ಶೇಖರಿಸಿ ತಿಳಿಸಲಾಗಿದೆ.

ನಮ್ಮ ನಾಯಕರು ಹಾಕಿಕೊಟ್ಟ ಹಾದಿಯಲ್ಲಿ ನಾವು ನಡೆದರೆ ನಮ್ಮ ದೇಶವು ಪ್ರಗತಿಯ ಹಾದಿಯಲ್ಲಿ ಸಾಗುವುದು. ಅಂತಹ ಮಹಾನ್ ಚೇತನಗಳು ಹಾಕಿಕೊಟ್ಟ ಹಾದಿಯಲ್ಲಿ ನಡೆದು ಭಾರತವನ್ನು ಮತ್ತಷ್ಟು ಉತ್ತಮ ಸ್ಥಾನದಲ್ಲಿ ನಿಲ್ಲಿಸೋಣ ಅಂತಹ ನಾಯಕರ ಜೀವನ ಚರಿತ್ರೆಗಳು ನಮಗೆ ದಾರಿದೀಪ ಆಗಬೇಕು. ಆ ಬೆಳಕಿನಲ್ಲಿ ಇಂದಿನ ಯಾವ ಜನತೆ ನಡೆಯಬೇಕು. ನಮ್ಮ ನಾಯಕರುಗಳಿಗೆ ನಮ್ಮ ನಮನಗಳು. ಅವರು ಎಂದಿಗೂ ಚಿರಸ್ಮರಣೀಯರು.

## ಹೃದಯಂತರಾಳದ ನುಡಿಗಳು

"ಮಧುರವಾದ ಭಾವನೆ, ಪರಿಶುದ್ಧ ಮನಸ್ಸು ಅವರಿಂದ ಬರುವ ಮಾತು, ಪರಿಶ್ರಮದ ಕಾಯಕ, ಸರಳಜೀವನ, ಉದಾತ್ತ ಚಿಂತನ ಇವೆಲ್ಲವನ್ನು ಅಳವಡಿಸಿಕೊಳ್ಳುವ, ಮನುಷ್ಯನ ಜೀವನ ಸುಂದರವಾಗಿರುತ್ತದೆ"ಯೆಂಬ ಮಹನೀಯರ ಅನುಭವ ಅಮೃತವಾಣಿಯಂತಾಗುವ ಪ್ರಯತ್ನ ನಮ್ಮೆಲ್ಲರಲ್ಲೂ ಇರುತ್ತದೆ. ಆದರೆ ಕಷ್ಟಸಾಧ್ಯವಾದ ಇಂಥ ಅವಶ್ಯವಾದ ಸಿದ್ಧತೆಯಾದರೆ ನಮ್ಮ ಮತ್ತು ನಮ್ಮ ಸುತ್ತಲಿನ ಜನರ ಜೀವನ ಉತ್ತಮವಾಗುತ್ತದೆ. ಅದಕ್ಕಾಗಿ ನಮಗೆ ಹಿರಿಯರ ಅನುಭಾವಿಗಳ ಮಾರ್ಗದರ್ಶನ ಸದಾ ದಾರಿದೀಪವಾಗುತ್ತದೆ.

"ಮಧುರವಾದ ಭಾವ ತುಂಬಿದಂಥ ಮನಸ್ಸೇ ದೇವಮಂದಿರ"

# ತಂಬಾಕು ತ್ಯಜಿಸಿ; ಆರೋಗ್ಯ ಗಳಿಸಿ



◆ ತೇಜಶ್ರೀ ಬಿ.ವಿ.
ಅಂತಿಮ ಬಿ.ಕಾಂ.

ಮೇ 31 ವಿಶ್ವತಂಬಾಕು ನಿಷೇಧ ದಿನ

ವರದಿಯೊಂದರ ಪ್ರಕಾರ ನಮ್ಮ ದೇಶದಲ್ಲಿ ಪ್ರತಿವರ್ಷ ತಂಬಾಕಿನ ಉತ್ಪನ್ನಗಳಿಂದ ಆರು ದಶ ಲಕ್ಷ ಜನರು ಸಾಯುತ್ತಿದ್ದಾರೆ. ಈ ಪೈಕಿ ಐದು ದಶಲಕ್ಷಕ್ಕೂ ಹೆಚ್ಚು ಸಾವುಗಳು ನೇರ ತಂಬಾಕು ಬಳಕೆಯಿಂದ ಉಂಟಾದರೆ, 1ಲಕ್ಷಕ್ಕೂ ಹೆಚ್ಚು ಸಾವುಗಳು ಧೂಮಪಾನಿಗಳಲ್ಲದ, ಆದರೆ ಧೂಮಪಾನಕ್ಕೆ ತೆರೆದುಕೊಂಡವರಲ್ಲಿ ಪರೋಕ್ಷ ಧೂಮಪಾನದಿಂದ ಸಾವು ಸಂಭವಿಸುತ್ತವೆ.

***Ans.:- Leaf***



◆ **Mamatha C.**
*IInd B.A (HEK)*

## Jokes Questions

1) Which is the un married city?
   ***(Kanyakumari)***
2) Who is the writer who is not a human?
   ***(Typewriter)***
3) Which is the jam which we do not eat?
   ***(Traffic Jam)***
4) Which is the Biggest rope in the world?
   ***(Europe)***

## Three things

Three things in life are most valueable

Three things to respect – old age, religion and law

Three things to admire – intellect. Beauty and music

Three things to cultivate – sympathy. Cheerfulness and contempt

Three things to stick on to – promise, friendship and law

Three things to govern – tongue . temper and action.

Three things to be afraid – idleness falsehood and slang

Three thing do not wait for anyone – time, death and customers

Three things are available once in lifetime – mother, father and youth

Three things once gone cannot be regained – Arrow from the bow.

Life from the body

Passed youth



◆ **Shubha L.**
*III B.Com.*

Eyes are more accurate than ears - ***Heraclitus***

## Life

Beautiful Tomorrow
Never carries
When it comes its
Already Today
So, in the Hunt of
Beautiful Tomorrow never
Choose your
Wonderful Today

"Don't Hide any secreats
With a person who can
Read your eyes, Beeause
They are who Really Reads
Your eyes is surely
Expert in Reading your Heart"

Never play
With the feeling of others
Because you may win this game
But the Risk is you
Will surely choose the person..."

## Life

Just a movement is
Not a life, but
Every movement was
Turning point of the life

## Life

Life is like a mirror
We get the best result when
We smile at it

To win some one's
Heart is easy
To break some one's
Heart is simply than easy
But to Re-win
Some one's Broken Heart
Is more than impossible



◆ **Asha Y.**
*IIIrd BBM*

## Jokes

Shopkeeper : What do you want, my boy?
Aravind : I would like to buy a calendar.
Shopkeeper : What sort of calendar would you like?
Aravind : One with plenty of holidays.

Govind : How much for hair cut?
Barber : Rs. 5
Govind : How much for a shave?
Barber : Rs. 3
Govind : Then shave my head.

Teacher : Rajan, what is the height of Mt. Everest
Rajan : 5CMs
Teacher : How do you know
Rajan : I measured it in 'Map', Sir

Rohit : After 50 or 60 years, we will become gold.
Raj : How?
Rohit : Because they say 'Old is gold'

◆ **Pooja R.**
*IIIrd B.Com.*

The strangest, most generous, and proudest of all virtues is true courage. - ***ontaigne***

## Jokes

Crime Story : 5 friends lived in a room their names are – Mad, Brain, Stupid, Somebody, Nobody.

One day somebody killed nobody. That's time Brain was in bathroom, man called police.

Mad : Is it police station?
Police : Yes, what is the matter?
Mad : Somebody Killed nobody.
Police : Are you mad?
Mad : Yes, I am mad
Police : You don't have brain?
Mad : Brain is in bathroom.
Police : You stupid!
Mad : No, Stupid is reading sir.

## Life

Life is a book – study it
Life is a beauty – workship it
Life is a challenge – meet it
Life is a dream – realize it
Life is a sorrow – overcome it
Life is a tragedy – face it
Life is a song – sing it
Life is a love – enjoy it
Life is a game – play it
Life is a adventure – dare it
Life is a promise – fulfill it
Life is a struggle – accept it
Life is a bliss – receive it
Life is a duty – perform it
Life is a journey – complete it



◆ **Veena N.**
*IIIrd B.Com.*

## SUCCESS

S - Set your goal
U - Understand the obstacles
C - Clear your mind of all doubts
C - Create a positive attitude
E - Enhance your character
S - Stay in the Right track
S - Show that you can do it



◆ **Chaithra M.**
*IIIrd B.Com.*


ವರದಿ ವಿಭಾಗ



# ಕನ್ನಡ ವಿಭಾಗ

◆

ಕತ್ತಲರಾಜ್ಯ, ದ್ರಾವಿಡ ದೇಶ ಈ ಹೆಸರುಗಳಿಂದ ಕರೆಯಿಸಿಕೊಂಡಿರುವ ಜೊತೆಗೆ ಮಹಾನ್ ಸಾಧುಸಂತರು ನೆಲೆಯೂರಿರುವ ಮತ್ತು ಜನಪದ ಸಾಂಸ್ಕೃತಿಕ ಪರಂಪರೆಗೆ ಹೆಸರುವಾಸಿಯಾಗಿರುವ ಶ್ರೀ ಮಲೆಮಹದೇಶ್ವರ ಕ್ಷೇತ್ರದ ಹೆಬ್ಬಾಗಿಲಿನಂತಿರುವ ಕೊಳ್ಳೇಗಾಲದ ವಿದ್ಯಾಸಂಸ್ಥೆಯಾದ ನಮ್ಮ ಜೆಎಸ್‌ಎಸ್ ಮಹಿಳಾ ಕಾಲೇಜು 34 ವಸಂತಗಳನ್ನು ಕಳೆದು ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸುವುದರ ಜೊತೆಗೆ ಹೆಣ್ಣು ಮಕ್ಕಳಿಗೆ ಶಿಕ್ಷಣದ ಉಪಯೋಗ ಅತ್ಯವಶ್ಯಕವೆಂದು ಭಾವಿಸಿದ್ದ ಶ್ರೀಗಳ ದೂರದೃಷ್ಟಿ ಮೆಚ್ಚುವಂತಹ ಸಾಧನೆಯಾಗಿದೆ. ಕಾಲೇಜಿನ ಕನ್ನಡ ವಿಭಾಗವು ತನ್ನ ಕಾರ್ಯಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ವಿಭಾಗವು ಶೈಕ್ಷಣಿಕ ಪ್ರಗತಿಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸಂತಸವಾಗಿದೆ.

ದಿನಾಂಕ 01-07-2018ರಂದು ಪ್ರಥಮ ವರ್ಷದ ಐಚ್ಛಿಕ ವಿದ್ಯಾರ್ಥಿಗಳಿಗೆ ವಿಭಾಗದ ವತಿಯಿಂದ ಸ್ವಾಗತಕೋರಿ, ಮುಖ್ಯಸ್ಥರಾದ ಪ್ರೊ. ಎಂ. ಬಸವರಾಜು, ಕನ್ನಡ ಭಾಷೆ, ಸಾಹಿತ್ಯ, ಛಂದಸ್ಸು ವ್ಯಾಕರಣ, ಅಲಂಕಾರ, ಮೀಮಾಂಸೆಗಳಿಂದ ಆಗುವ ಪ್ರಯೋಜನವನ್ನು ತಿಳಿಸಿದರು. ಸಹಾಯಕ ಪ್ರಾಧ್ಯಾಪಕರುಗಳಾದ ಶ್ರೀಮತಿ ಸಿ. ರೂಪಶ್ರೀ ಮತ್ತು ಶ್ರೀ ಸಂತೋಷ್‌ಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದಿನಾಂಕ 19-07-2017ರಂದು ಗಮಕ ಕಲಾ ಪರಿಷತ್ತು, ಕೊಳ್ಳೇಗಾಲ ಶಾಖೆ ಹಾಗೂ ಕನ್ನಡ ವಿಭಾಗದ ಸಹಯೋಗದೊಂದಿಗೆ ಗಮಕ ಕಲೆಯ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಪಂಪನಿಂದ ಕುವೆಂಪುವರೆಗಿನ ಎಲ್ಲಾ ಕವಿಗಳು ಶ್ರೇಷ್ಠ ಕವಿಗಳು. ಇವರು ಜನಮನದ ಕಥೆಗಳನ್ನು ಆರಿಸಿಕೊಂಡು ಕನ್ನಡದ ಜನರಿಗೆ ಕಾವ್ಯ ರೂಪದಲ್ಲಿ ಉಣಬಡಿಸಿದ್ದಾರೆಂದು ಕಲಾಶ್ರೀ ಮತ್ತು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ. ಎಂ.ಆರ್. ಸತ್ಯನಾರಾಯಣ್ ಅವರು ಕೆಲವು ಕಾವ್ಯ ಭಾಗವನ್ನು ಗಮಕ ವಾಚನದ ಮೂಲಕ ತಿಳಿಸಿಕೊಟ್ಟರು.

ದಿನಾಂಕ 18-09-2017ರಂದು ಕನ್ನಡ ವಿಭಾಗದ "ಸಾಹಿತ್ಯ ಸಂಗಮ" ವತಿಯಿಂದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಹೆಚ್.ಬಿ. ದೇವಣ್ಣ ಅವರು ಕುಮಾರವ್ಯಾಸನ ಕರ್ಣಾಟಭಾರತ ಕಥಾಮಂಜರಿ ಮತ್ತು ರಾಘವಾಂಕನ ಹರಿಶ್ಚಂದ್ರ ಕಾವ್ಯದ ಕೆಲವು ಆಯ್ದ ಭಾಗಗಳನ್ನು ಸುಶ್ರಾವ್ಯವಾಗಿ ಹಾಡಿ ವಾಚಿಸುವುದರ ಜೊತೆ ಅದರ ವಿಶ್ಲೇಷಣೆ ಮಾಡಿದರು.

ದಿನಾಂಕ 05-01-2018ರಂದು ಕನ್ನಡದ ವಿಭಾಗದ "ಸಾಹಿತ್ಯ ಸಂಗಮ" ವತಿಯಿಂದ ಕುವೆಂಪು ಬಿ.ಎಂ.ಶ್ರೀ. ಮತ್ತು ದ.ರಾ. ಬೇಂದ್ರೆ ಅವರ ಜನ್ಮ ದಿನಾಚರಣೆಯ ಅಂಗವಾಗಿ ಸಾಹಿತ್ಯ ದಿಗ್ಗಜರ ಸಾಹಿತ್ಯ ಮತ್ತು ಜೀವನ ಕುರಿತಂತೆ ವಿಭಾಗದ ಸಹಾಯಕ ಪ್ರಾಧ್ಯಾಪಕರುಗಳಾದ ಶ್ರೀ ಎಂ. ಬಸವರಾಜು, ಶ್ರೀಮತಿ ಸಿ. ರೂಪಶ್ರೀ ಮತ್ತು ಶ್ರೀ ಸಂತೋಷ್‌ಕುಮಾರ್ ವಿಶೇಷ ಉಪನ್ಯಾಸ ನೀಡಿದರು.

ದಿನಾಂಕ 18-01-2018ರಂದು ಬೆಟ್ಟದ ಜೀವ ಮತ್ತು ಸತ್ಯಹರಿಶ್ಚಂದ್ರ ಸಿನಿಮಾ ಪ್ರದರ್ಶಿಸಿ ಅದರ ಬಗ್ಗೆ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ದಿನಾಂಕ 21-02-2018ರಂದು ವಿಭಾಗದ ವತಿಯಿಂದ "ಮಾತೃ ಭಾಷಾ ದಿನಾಚರಣೆ" ಯನ್ನು ಆಚರಿಸಲಾಯಿತು.

ಶ್ರೀ ಎಂ. ಬಸವರಾಜು
ಮುಖ್ಯಸ್ಥರು

## Department of English

◆

The Department of English actively plays an important role in the acquisition of the language skills among the under graduate students by creating the congenial learning environment to enable the learners to grasp the language skills. Thus there is an attempt from the department to motivate, create and sustain the interest among the learners by one way or the other. The students are involved in various literary activities and other co curricular activities of the college with the intervention of the teachers to provide the timely help in honing the language skills amongst the students.

**Motivational programmes**

As soon as the admission is over the freshers are given free interactive classes in order to help them to acquaint themselves to the emerging trends in the area of language and literature prescribed for study. A bridge course is conducted in order to ward off the fear of learning English as a foreign language.

The following activities are conducted during the academic year to enable the students to grasp the language and content better:

* An audio MP3 was played for the benefit of the 1 and II Semester BA, B.Com and BBA students containing some prescribed poems.
* A film based on the play "The Tempest" was shown to the students of 4th Semester BA.

**Prof. A.P. Mahadevappa**
HoD

# ಇತಿಹಾಸ ವಿಭಾಗ

ವಿದ್ಯಾರ್ಥಿಗಳಿಗೆ ಐತಿಹಾಸಿಕ ಪರಂಪರೆಯ ಮಹತ್ವ ಹಾಗೂ ಇತಿಹಾಸಕಾರರ ಬಗ್ಗೆ ತಿಳಿಸುವ ಉದ್ದೇಶದೊಂದಿಗೆ ವಿಭಾಗವು "ಇತಿಹಾಸ ವೇದಿಕೆ"ಯನ್ನು ಹೊಂದಿದ್ದು, ವೇದಿಕೆಯ ಅಡಿಯಲ್ಲಿ ಪ್ರತೀ ವರ್ಷದಂತೆ ಪ್ರಸ್ತುತ ವರ್ಷದಲ್ಲಿಯೂ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

ದಿನಾಂಕ 02-08-2017ರಂದು **"ಮೈಸೂರು ಸಂಸ್ಥಾನಕ್ಕೆ ಒಡೆಯರ ಕೊಡುಗೆ"** ಮುಖ್ಯವಾಗಿ ನಾಲ್ವಡಿ ಕೃಷ್ಣರಾಜಒಡೆಯರ್, ಜಯಚಾಮರಾಜೇಂದ್ರ ಒಡೆಯರ ಕೊಡುಗೆ ಬಗ್ಗೆ ಡಾ. ಮಹದೇವ ಶಂಕರಪುರ, ಸಹಾಯಕ ಪ್ರಾಧ್ಯಾಪಕರು, ಶ್ರೀ ಮಹದೇಶ್ವರ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ ಇವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಯಿತು.

ದಿನಾಂಕ 09-08-2017ರಂದು "ಕ್ವಿಟ್ ಇಂಡಿಯಾ ಚಳುವಳಿಯ 75ನೇ ವರ್ಷಾಚರಣೆ" ಅಂಗವಾಗಿ ಚಳುವಳಿ ಕುರಿತು ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್ ಜಿ ನಟರಾಜನ್‌ರವರು ವಿಶೇಷ ಉಪನ್ಯಾಸ ನೀಡಿದರು.

ದಿನಾಂಕ 23-08-2017 ರಂದು "ಸುಭಾಷ್ ಚಂದ್ರಬೋಸ್‌ರವರ ಜಯಂತಿ" ಪ್ರಯುಕ್ತ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಸತೀಶ್‌ರವರು ವಿಶೇಷ ಉಪನ್ಯಾಸ ನೀಡಿದರು.

ದಿನಾಂಕ 24-03-2018ರಂದು ಪತ್ರಾಗಾರ ಕೂಟದ ವತಿಯಿಂದ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಆಯೋಜಿಸಿ ತಲಕಾಡು, ಸೋಮನಾಥಪುರ, ಶ್ರೀರಂಗಪಟ್ಟಣ, ಮೇಲುಕೋಟೆ, ಮೈಸೂರು ಕೃಷ್ಣರಾಜಸಾಗರ ಅಣೆಕಟ್ಟು ಮುಂತಾದ ಸ್ಥಳಗಳಿಗೆ ವಿದ್ಯಾರ್ಥಿನಿಯರು ಹಾಗೂ ವಿಭಾಗದ ಅಧ್ಯಾಪಕರು ಭೇಟಿ ಕೊಟ್ಟಿರುತ್ತಾರೆ.

ದಿನಾಂಕ 31-03-2018ರಂದು "ಪ್ರಾಚೀನ ಸ್ಮಾರಕಗಳ ಮಹತ್ವ" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಪತ್ರಾಗಾರ ಕೂಟದ ವತಿಯಿಂದ ಆಯೋಜಿಸಲಾಯಿತು. ಡಾ. ಮಹದೇವ ಶಂಕರಪುರ, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಳ್ಳೇಗಾಲ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

**ಶ್ರೀ ಹೆಚ್.ಜಿ ನಟರಾಜನ್**
ಮುಖ್ಯಸ್ಥರು

# ರಾಜ್ಯಶಾಸ್ತ್ರ ವಿಭಾಗ

ಭಾರತ ಒಂದು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಪ್ರಜಾಪ್ರಭುತ್ವದ ತತ್ವಗಳನ್ನು ಸಾಕಾರಗೊಳಿಸುವ ದೃಷ್ಟಿಯಿಂದ ಹಾಗೂ ಸರ್ಕಾರದ ಆಧಾರ ಸ್ತಂಭಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಕಾರ್ಯಕಲಾಪಗಳ ನೈಜ ಮತ್ತು ವಾಸ್ತವ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ಉದ್ದೇಶದಿಂದ ಹಲವಾರು ಜಾಥಾ, ಸ್ಪರ್ಧೆಗಳು, ಉಪನ್ಯಾಸ ಹಾಗೂ ಅಣಕು ಕಾರ್ಯಕ್ರಮಗಳನ್ನು ನಡೆಸಲಾಯಿತು.

ದಿನಾಂಕ 19-08-2017ರಂದು ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲ್ಯ, ನ್ಯಾಯಕತ್ವ ಗುಣ, ಸೃಜನ ಶೀಲತೆ, ಸಮಯ ಪರಿಪಾಲನೆಯಂತಹ ಗುಣಗಳನ್ನು ಬೆಳಸುವ ದೃಷ್ಠಿಯಿಂದ "ಅಣಕು ಸಂಸತ್ತು" ಕಾರ್ಯಕ್ರಮವನ್ನು ನಡೆಸಲಾಯಿತು.

ದಿನಾಂಕ 23-01-2018ರಂದು ವಿದ್ಯಾರ್ಥಿಗಳಲ್ಲಿ ಮತದಾನದ ಮಹತ್ವ ತಿಳಿಸಿ ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವ ದೃಷ್ಠಿಯಿಂದ ಮತದಾನದ ಮಹತ್ವ ಸಾರುವ ಶೀರ್ಷಿಕೆಯಡಿಯಲ್ಲಿ ಜಿಲ್ಲಾ ಅಂತರ ಕಾಲೇಜು ಪ್ರಬಂಧ ಮತ್ತು ಭಾಷಣ ಸ್ಪರ್ಧೆಗಳನ್ನು ನಡೆಸಿ, ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು ಹಾಗೂ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾಥಾ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಯಿತು.

ದಿನಾಂಕ 27-01-2018ರಂದು 8ನೇ ಮತದಾರರ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಪ್ರಯುಕ್ತ "ಸಧೃಡ ಭಾರತದ ನಿರ್ಮಾಣ ಯುವ ಶಕ್ತಿಯಿಂದ ಮಾತ್ರ ಸಾಧ್ಯ" ಎಂಬ ವಿಷಯದ ಮೇಲೆ ಡಾ. ಸುಧಾಕರ ಹೊಸಳ್ಳಿ, ಪ್ರಾದೇಶಿಕ ನಿರ್ದೇಶಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ದಾವಣಗೆರೆ ರವರು ಉಪನ್ಯಾಸ ನೀಡಿದರು.

ದಿನಾಂಕ 09-02-2018ರಂದು ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯರಿಗೆ ನ್ಯಾಯಲಯಗಳ ಕಾರ್ಯಕಲಾಪಗಳ ವೀಕ್ಷಣೆ ಮತ್ತು ಕಾನೂನು ಅರಿವು ಕಾರ್ಯಕ್ರಮಗಳನ್ನು ನಡೆಸಲಾಯಿತು.

ದಿನಾಂಕ 22-02-2018ರಂದು ವಿದ್ಯಾರ್ಥಿನಿಯರಿಗೆ ನ್ಯಾಯಾಲಯದ ಕಾರ್ಯಕಲಾಪಗಳ ನೈಜ ಮತ್ತು ವಾಸ್ತವಾಂಶಗಳನ್ನು ಪರಿಚಯಿಸುವ ದೃಷ್ಠಿಯಿಂದ ರಾಜ್ಯಶಾಸ್ತ್ರ ವಿಭಾಗ ಮತ್ತು ಯುಜಿಸಿ ಪ್ರಾಯೋಜಿತವಾಗಿ "ಅಣಕು ನ್ಯಾಯಾಲಯ" ಕಾರ್ಯಕ್ರಮವನ್ನು ನಡೆಸಲಾಯಿತು. ಗೌರವಾನ್ವಿತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸ್ಥಾನಿಕ ನ್ಯಾಯಾಧೀಶರಾದ ಶ್ರೀ ಡಿ. ವಿನಯ್‌ರವರು ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶ್ರೀ ಎಸ್ ಜೆ ಕೃಷ್ಣ ರವರು ಆಗಮಿಸಿದ್ದರು.

ದಿನಾಂಕ 26-03-2018ರಂದು ವಿದ್ಯಾರ್ಥಿಗಳ ಜೊತೆಗೆ ಗೌರವಾನ್ವಿತ ನ್ಯಾಯಧೀಶರಾಗಿ ಶ್ರೀಮತಿ ಗೌರಮ್ಮಣಿ, ಮಹಿಳಾ ಸದಸ್ಯರು, ಜಿಲ್ಲಾ ಗ್ರಾಹಕರ ವೇದಿಕೆ, ಚಾಮರಾಜನಗರ ಇವರು "ಅಣಕು ನ್ಯಾಯಾಲಯ" ಕಾರ್ಯಕ್ರಮದಲ್ಲಿ ಭಾಗವಹಿಸಿ ನ್ಯಾಯಾಲಯದ ಕಾರ್ಯಕಲಾಪಗಳನ್ನು ನಡೆಸಿಕೊಟ್ಟರು.

ಶ್ರೀ ಕೆ.ಆರ್. ಗುರುಪ್ರಸಾದ್
ಮುಖ್ಯಸ್ಥರು

## ಭೂಗೋಳಶಾಸ್ತ್ರ ವಿಭಾಗ

◆

ಭೂಮೇಲ್ಮೈ ಒಳಗೊಂಡಿರುವ ನಾಲ್ಕು ಆಯಾಮಗಳಾದ ಶಿಲಾಗೋಳ, ವಾಯುಗೋಳ, ಜಲಗೋಳ ಮತ್ತು ಜೀವಗೋಳ ಇವುಗಳ ಸಂಪೂರ್ಣ ಅಧ್ಯಯನವೇ ಭೂಗೋಳಶಾಸ್ತ್ರವಾಗಿದೆ. ಮಣ್ಣಿನ ರಚನೆ, ಅರಣ್ಯಗಳ ಹಂಚಿಕೆ, ಸಾಗರಗಳ ರಚನೆ, ಮಳೆಯ ರಚನೆ, ಬೆಳೆಯ ವಿಧಗಳು ಮಾನವ ಸಮುದಾಯದ ಹಂಚಿಕೆ. ಆಚಾರ – ವಿಚಾರ, ಸಂಸ್ಕೃತಿಯ ಉಗಮ, ಬೆಳವಣಿಗೆ ಹೀಗೆ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ವಿಚಾರಗಳ ಸಾವಿರಾರು ಮಾದರಿಯನ್ನು ಒಳಗೊಂಡ ವಿಭಾಗವೇ ಭೂಗೋಳಶಾಸ್ತ್ರ.

ಈ ವಿಭಾಗವು ಕೇವಲ ಪ್ರಗತಿಪರ ಅಧ್ಯಯನವಲ್ಲದೇ ಜನರಿಗೆ ಜಾಗೃತಿಯನ್ನು ಮೂಡಿಸುವ ಅನೇಕ ವಿಚಾರಗಳನ್ನು ಒಳಗೊಂಡಿದೆ. ಅಂದರೆ ವಾಯುಮಾಲಿನ್ಯ, ಜಲಮಾಲಿನ್ಯ, ಪರಿಸರನಾಶ, ಪ್ರಕೃತಿ ವಿಕೋಪಗಳ ಬಗೆಗಿನ ಅರಿವನ್ನು ಮೂಡಿಸುವುದರೊಂದಿಗೆ ವಿದ್ಯಾರ್ಥಿನಿಯರಿಗೆ ಸಾಕಷ್ಟು ಮಾಹಿತಿಯನ್ನು ನೀಡಲಾಗುತ್ತಿದೆ.

ವಿಭಾಗವು "ಎಕೊ ಕ್ಲಬ್" ಹೊಂದಿದ್ದು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಬಿ. ಮಂಜುನಾಥ್‌ರವರು ಸಂಚಾಲಕರಾಗಿರುತ್ತಾರೆ. ವಿಭಾಗದ ಯಾವುದೇ ಶೈಕ್ಷಣಿಕ ಚಟುವಟಿಕೆಗಳು ಮತ್ತು ಪರಿಸರ ಸಂಬಂಧಿತ ವಿವಿಧ ಆಚರಣೆಗಳನ್ನು ಈ ಬ್ಯಾನರ್ ಅಡಿಯಲ್ಲಿ ಆಯೋಜಿಸಲಾಗುತ್ತದೆ.

ದಿನಾಂಕ 24–02–2018ರಂದು ಬೆಂಗಳೂರಿನ ಜಿ.ಐ.ಎಸ್. ಕಂಪನಿ ತರಬೇತಿ ಅಧಿಕಾರಿಯಾದ ಶ್ರೀ ಮಧು ಬಲ್ಲಪ್ಪಸ್ವಾಮಿ, ಕೆ.ಎಸ್ ರವರಿಂದ "ಭೂಗೋಳ ಮಾಹಿತಿ ವ್ಯವಸ್ಥೆಯ ವೈವಿಧ್ಯತೆಗಳು" ಎಂಬ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು.

ದಿನಾಂಕ 22–03–2018ರಂದು ಪ್ರೊ. ಉಮೇಶ, ಸಹ ಪ್ರಾಧ್ಯಾಪಕರು, ಮಾನವಿಕ ವಿಜ್ಞಾನ ವಿಭಾಗ ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಂದ "ವಿಶ್ವ ಜಲ ದಿನಾಚರಣೆ"ಯ ಅಂಗವಾಗಿ "ಜಲವೇ ಜೀವ" ಎಂಬ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು.

ಪ್ರತೀ ವರ್ಷದಂತೆ ಈ ವರ್ಷವೂ ವಿದ್ಯಾರ್ಥಿನಿಯರಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ವಿಷಯಗಳ ಆಯ್ಕೆ, ತರಬೇತಿ ಕಾರ್ಯಕ್ರಮಗಳ ಮಾಹಿತಿಗೆ ಸಂಬಂಧಿಸಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.

**ಶ್ರೀಮತಿ ಎ.ಎಸ್. ಸ್ಮಿತಾ**
ಮುಖ್ಯಸ್ಥರು

# Department of Commerce

The Department of Commerce, having a mission "To create Global Enterpreneur" and a vision of giving a practical edge to the curriculum along with an emphasis on all around programme for total personality development. It has a number of activities during the academic year 2017-18.

The Department has a "Commerce Club" with the HOD as Chairperson, teacher and students as members. Under this banner all programmes of the department will be hosted.

As a regular feature the Department has maintained "Book Bank" which helps the students to enhance their skill and competencies by providing skill development materials in addition to books and question bank. It has conducted remedial classes for slow learners, compensatory classes for absentees.

The Department always encourages the students by preparing and sending them to campus interview arranged in our sister Institutions and other colleges and as a result Kum. Sangeetha M, Kum. Inbha R, Kum Pavithra R, Kum. Balkis Banu, Kum Manisha Y and Kum. Kavya S were selected in the campus interview held in our college on 09-03-2018 in association with Infosys - BPM.

As a regular feature Department conducted five special lectures by inviting experts and resource persons for enabling the students to be very much potential in this global competitive world.

| Sl.No. | Date | Resource Person | Topic |
|---|---|---|---|
| 1 | 20-09-2017 | Prof. Kumar, Syndicate Member University of Mysore, Mysuru | Opportunities for Graduates |
| 2 | 12-10-2017 | Sri Umesh, Chartered Accountant Mysuru | The Role of Capital Market in Industrial Development |
| 3 | 09-01-2018 | Adithya Ramana Nargunda Foundation for Education Trust, Kollegal | Preparation for competitive examinations |
| 4 | 26-02-2018 | Prof. Sudhakar R Kulakarni Bharathiya Vidya Bavana, Bangalore | P. G Courses and prospects |
| 5 | 15-03-2018 | Sri Venkatachala Senior Advocate, Kollegala | Consumer Rights |

**Dr. M. Prabhu**
HoD

## Post Graduate Department of Commerce

The Post Graduate Department of Commerce was started in 2001-02 with a Vision "To develop Post Graduate Centre as hub of Academicians and Research activities in Rural". The Mission of the Department is to take the Post Graduate degree in Commerce to the doorsteps of Commerce graduates in the remote taluk place of Chamrajnagar District. Department plans and conducts several academic activities during the academic year to enhance and enrich the knowledge of the students for their overall development. In these 17 years Department is able to increase the number of M.Com degree holders in this area.

The Department has well qualified and experienced teaching faculties. Teachers are enabled in using ICT for effective teaching. Class rooms and seminar hall have LCD facilities. The department is using well equipped Internet, enabled Computer Lab in the college for data sourcing and research activities. The computer lab has SPSS software in all our systems.

Library is well equipped with latest editions of books abundant for our students. It has professional Journal including facility of online journals. The department is proud that 15 batches have already completed their degree successfully. Most of the students are well placed by occupying better positions

We have very good results all the years with many ranks to the University. During 2016-17 all the students have secured first class with more than 6 CGPA points under CBCS.

The Department arranged special lecture programmes for the benefit of students during the year as a regular annual feature.

On 12-10-2017 Mr Umesha, Chartered Accountant delivered a lecture on "Role of Quality of Education"

On 14-10-2017 A one day workshop on Competitive Examination (NET/ SLET,IBPS,KAS,FDA/SDA) was organised. Prof R. M Chintamani, Professor Emeritus, presided over the workshop. Smt Shruthi Chetan, Assistant Commissioner of Commercial Tax, Mysuru, gave the inaugural speech.

A four week duration free coaching classes for NET and KSET were conducted from 16-10-2017 to 20-11-2017.

A special lecture on Entrepreneurship - Issues and Challenges was arranged on 15-03-2018. Mr Kumar Krishna, Proprietor, YEPS group was the resource person.

A special lecture on "Linear Programming and Integer Model" and "Transportation and Assignment Problems" were arranged on 12-3-2018 and 13-5-2018 respectively. Dr.P Nagesh, Professor and Head, JSS Centre for Management Studies, JSS Science and Technology University, SJCE Campus, Mysuru, was the resource person.

The Department encourages and motivates the students and faculties to participate and to present the research papers in National and International conference. The Department faculties have participated and presented the eight research papers in International and National conference and publish their articles in Peer reviewed Journals. Our students also participated and presented the papers in national level Seminar. The following table shows the students' participation in seminar / conference / workshop.

| Date | Organised By | Topic |
|---|---|---|
| 25-10-2017 | Teresian College, Mysuru | Goods and Service Tax |
| 22-11-2017 | JSS College of Arts, Commerce and Science, Mysuru | Goods and Service Tax |
| 09-03-2018 | JSS College of Arts, Commerce and Science, Nanjangud | Health Insurance Challenges and Prospects in India |
| 20-03-2018 and 21-03-2018 | DoS in Commerce, University of Mysore, Mysuru | Sustainable Development: Role of Business Education and Research |
| 16-04-2018 and 17-04-2018 | Teresian College, Mysuru | Personality Development |

**Dr. M. Prabhu**
HoD

## Department of Management

◆

The Bachelor of Business Management programme not only enables students to achieve a professional qualification but also assists management graduates relating to their skills to the needs of business. The programme will equip students with first class communication, team work and leadership skill. Keeping this vision in mind the Department was started in the year 2008-09 exclusively for girls under self financing scheme in the college to develop their managerial abilities.

Department maintains question bank so that teacher and students can refer them to have proper understanding of the pattern of examination

As a regular feature this year also department conducted bridge course classes for non-commerce students and conducted orientation programme for the first year students to acquaint themselves to the new environment.

Department always encourages the students by preparing and sending them to campus recruitment arranged in our sister-institutions and other colleges. From the last few years campus recruitment drive has been held in our college regularly in association with Infosys, BPM Company and students of the department participated in this drive.

Department organises special lectures, workshop, group discussions, mock-interviews, to bring about attitudinal changes in students as well as teachers.

As a regular feature department conducted special lectures by inviting experts and resource persons for enabling the students to be very much potential in this global competitive world.

| Sl.No. | Date | Resource Person | Topic |
|---|---|---|---|
| 1 | 03-08-2017 | Sri Vekatachala<br>Senior Advocate, Kollegal | Awareness of Law |
| 2 | 10-08-2017 | Prof R M Chintamani<br>Rtd Director, JSS PG centre, Kollegal | Goods and Service Tax |
| 3 | 09-02-2018 | Prof Kumar<br>Governing Council Member<br>JSS College for women, Kollegal | Professional Life - Challenges and Remedies |
| 4 | 12-02-2018 | Smt Suma S.N., Coordinator<br>National skill Development Corporation | Skill on Wheel |
| 5 | 12-03-2018 | Sri Pradhan Shetty<br>Logistic School Of Management, Mysuru | Professional Guidelines |

**S. Mamatha**
HoD

## ಅರ್ಥಶಾಸ್ತ್ರ ವಿಭಾಗ

2017–18ನೇ ಸಾಲಿನಲ್ಲಿ ಅರ್ಥಶಾಸ್ತ್ರ ವಿಭಾಗವು ಪಠ್ಯ ಚಟುವಟಿಕೆಗಳಿಗೆ ಪೂರಕವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಯೋಜನಾ ವೇದಿಕೆಯ ಅಡಿಯಲ್ಲಿ ಅರ್ಥಶಾಸ್ತ್ರ ವಿಭಾಗವು ಪಠ್ಯ ಚಟುವಟಿಕೆಗೆ ಪೂರಕವಾಗಿ ದಿನಾಂಕ 03–10–2017ರಂದು "ಸರಕು ಮತ್ತು ಸೇವಾ ತೆರಿಗೆ" ಎಂಬ ವಿಷಯವನ್ನು ಕುರಿತು ಪ್ರೊ. ಆರ್ ಎಂ ಚಿಂತಾಮಣಿ, ನಿವೃತ್ತ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕರು ಅವರಿಂದ ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು.

ಪ್ರೊ. ಬಿ. ಸೋಮಣ್ಣ
ಮುಖ್ಯಸ್ಥರು

## Computer Section

The Computer Lab, Inaugurated by the then Higher Education Minister, G.Parameshwar in the academic year 2000-2001, has been facilitated with more than 30 Higher-End Systems, Printers, Scanners, Copier and LCD Projector with the object of imparting quality education in the field of Computer Science.

It has completely Wi-Fi internet connectivity with LAN. As the technology is advancing at a fast pace the students need to be trained to develop more confidence. With this in mind the department organizes special lectures very often. It has been also offering short term courses for the campus students as well as outsiders.

Smt. Geetha
HoD

# Library and Information Centre

◆

Library and Information Centre management is the base and core activity which helps the user community in identifying and accessioning knowledge resources in an academic institution. Effective management of the library supports excellence in the students support divergent research needs on and off the campus, continues to adopt change and contributes in strengthening the academic life in the campus of the institution in all respect.

**Maintenance of service area**

Calm and neat atmosphere has been maintained. Users are provided with a clean and silent environment including dust free environment in the stack and reading areas. For their cleaning and mopping activities including maintenance of reading tables, chairs etc sare outsourced.

**Special deposit scheme**

Under this scheme it provides an opportunity to off campus users especially economically backward classes to avail the books and other materials at affordable cost.

**Library book exhibition**

As a regular annual feature a set of reputed book publishers and distributors are invited to display the recently published books in an exhibition. So that book selection process is possible for faculty members and students.

**Extended hours of services**

It is kept open from 9.00 am to 5.00 pm except Sunday (Saturday 9 am to 1.30pm) and public holidays. Circulation of books is available during the library hours.

**Information Literacy programme**

It conducts an orientation programme for the new students admitted every year. They find it useful to know about the resources available in their discipline and all other facilities they are provided.

**Library best User Award**

It provides every year best user award in the form of Cash/Book to the best user from the each discipline. So that more students can be attracted to visit the library and use the resource.

**User feedback practice through suggestion box & Feedback form**

It has user feedback practice by maintaining suggestion box and getting user feedback on various services provided to them. So that user satisfaction level can be increased.

**Internet access facility – Easy access to e-resources**

It provides internet access facilities to the users for e mails, browsing, internet accessioning, e-resources/ e-journals database OPAC in easylib software. It is fully computerized with Barcode technology and also LAN facility, UPS connectivity etc.

**Automation of in house services**

It provides a database of all the documents available in the library to fully automate all the library functions and services in networked environment.

**Library Resources**

| Sl . | Particulars | Nos |
|---|---|---|
| 1 | Books | 19,611 |
| 2 | Periodicals | 48 |
| 3 | News papers | 17 |
| 4 | Cds | 310 |
| 5 | Atlasses | 21 |
| 6 | Maps | 41 |

**Facilities and services offered**

| Facilities | services |
|---|---|
| ◆ Text books | ❑ Information Display |
| ◆ Reference books | ❑ Current Awareness Services |
| ◆ Journals | ❑ Reference Services |
| ◆ Magazines | ❑ Circulation |
| ◆ News papers | ❑ Referral Services |
| ◆ Biographies | ❑ Chat with Librarian |
| ◆ Old Question papers | ❑ Photocopying Services |
| ◆ Dictionaries and Encyclopedias | ❑ Document Delivery Services |
| ◆ Gazetteers | ❑ Literature Search |
| ◆ Atlases | ❑ CD-Rom Services |
| ◆ Maps | ❑ Open Access to Library Members |
| ◆ Local History Guides | ❑ Computerized Library Services |
| ◆ Telephone directory | ❑ Easy Access through EASYLIB Software |
| ◆ CD-ROM | ❑ OPAC |
| ◆ E-Resource Centre with INTERNET | ❑ INFLIBNET N-List Programme service |
| ◆ OPAC | ❑ E-Resource Centre with Internet services |
| ◆ INFLIBNET N-List Programme | ❑ Others |

**Sri. Srinivasa**
Librarian

# ಸಂಸ್ಥಾಪಕರ 102ನೇ ಜಯಂತಿ ಮಹೋತ್ಸವ

◆

ತಮ್ಮ ಶಿಕ್ಷಣವನ್ನು ಮೊಟುಕುಗೊಳಿಸಿ ಸಮಾಜದ ಎಲ್ಲಾ ವರ್ಗದವರಿಗೆ ಶಿಕ್ಷಣ ನೀಡಲು ತಮ್ಮ ಜೀವನವನ್ನೆ ಮುಡಿಪಾಗಿಟ್ಟ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೇ ಜಯಂತಿ ಮಹೋತ್ಸವವನ್ನು ಆಚರಿಸಲಾಯಿತು. ಮಂಡ್ಯದ ಸರ್ಕಾರಿ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಕುಮಾರ್ ಬೆಳಲೆ ರವರು ಶ್ರೀಗಳವರ ಕುರಿತು ನುಡಿನಮನ ಸಲ್ಲಿಸಿದರು.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ವೀರಸಿಂಹಾಸನ ಮಠಕ್ಕೆ ಬಹುಮುಖ ಆಯಾಮ ನೀಡಿದವರು ಪೂಜ್ಯರು. ಸದಾ ವಿದ್ಯಾರ್ಥಿಗಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು ಮಾಡಿದ ಸೇವೆ, ಇಂದು ನೂರಾರು ಸಂಸ್ಥೆಗಳ ಮೂಲಕ ನಾವು ನೋಡಬಹುದು. ಸಮಾಜದಲ್ಲಿ ಬಡತನ, ಅಸಮಾನತೆ, ಅನಾರೋಗ್ಯ, ಅನೈರ್ಮಲ್ಯಗಳಿಗೆ ವಿದ್ಯೆ ಇಲ್ಲದಿರುವುದೇ ಮೂಲ ಕಾರಣ ಎಂದು ತಿಳಿದ ಶ್ರೀಗಳ ದೂರದೃಷ್ಟಿ ಫಲವಾಗಿ 1954ರಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠ ಸ್ಥಾಪನೆಯಾಗಿ ಇಂದು ಲಕ್ಷಾಂತರ ವಿದ್ಯಾರ್ಥಿಗಳು ರಾಜ್ಯ, ದೇಶ ಹಾಗೂ ವಿದೇಶಗಳಲ್ಲಿ ಕಲಿಯಲು ಸಾಧ್ಯವಾಗಿದೆ. ಕೇವಲ ವಿದ್ಯೆಗೆ ಪ್ರಾಮುಖ್ಯತೆ ನೀಡದೆ, ಅನ್ನದಾಸೋಹ ನೀಡಿದರಲ್ಲದೆ ಸಾಂಸ್ಕೃತಿಕ ಜಗತ್ತನ್ನು ಶ್ರೀಮಂತಗೊಳಿಸಿದರು. ಪರಿಣಾಮವಾಗಿ ಕಲೆ, ಸಾಹಿತ್ಯ, ಸಂಸ್ಕೃತಿಗೂ ಆದ್ಯತೆ ನೀಡಿದರು. ಪ್ರಸ್ತುತ ವಿದ್ಯಾಪೀಠ ಜಗದಗಲ ಮುಗಿಲಗಲ ಎಂಬಂತೆ ದೇಶ ವಿದೇಶಗಳಲ್ಲಿ ಸೇವಾ ಕ್ಷೇತ್ರ ವಿಸ್ತರಿಸಿಕೊಂಡಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮಾನಸಗಂಗೋತ್ರಿಯ ಗಣಕ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಆಗಿರುವ ಡಾ. ಡಿ ಎಸ್ ಗುರು ಮಾತನಾಡುತ್ತಾ – ಶ್ರೀಗಳವರ ಸಮಾಜಮುಖಿ ಕಾರ್ಯಗಳು ಎಲ್ಲರಿಗೂ ಮಾದರಿಯಾಗಿವೆ. ಅವರಿಗಿರುವ ತಪಃಶಕ್ತಿ, ದೂರದೃಷ್ಟಿಯಿಂದ ಗ್ರಾಮಾಂತರ ಭಾಗದಲ್ಲೂ ವಿದ್ಯಾ ಕೇಂದ್ರಗಳು, ಪ್ರಸಾದ ನಿಲಯಗಳು ಸ್ಥಾಪನೆಯಾಗಿ ಅಂಧಕಾರದಲ್ಲಿ ಮುಳುಗಿದ್ದ ಸಾಮಾನ್ಯರಿಗೂ ವಿದ್ಯೆ ಲಭಿಸುವಂತೆ ನೋಡಿಕೊಂಡರು. ಉತ್ತಮ ಸಮಾಜ ನಿರ್ಮಾಣದಲ್ಲಿ ಶ್ರೀಗಳವರ ಕೊಡುಗೆ ಸಾಕಷ್ಟಿದೆ. ಹಾಗೆಯೆ ಅವರ ಕಾರ್ಯಕ್ರಮಗಳು ಸಂಸ್ಥೆಯ ನೌಕರರಲ್ಲಿ ಸೇವಾ ಮನೋಭಾವನೆ ಮೂಡುವಂತೆ ಮಾಡಿವೆ ಎಂದು ತಿಳಿಸಿದರು.

ಸಮಾರಂಭದ ಸಮ್ಮುಖ ವಹಿಸಿ ಆಶೀರ್ವಚನ ನೀಡಿದ ಮುಡಿಗುಂಡಂ ವಿರಕ್ತ ಮಠದ ಶ್ರೀ ಶ್ರೀಕಂಠಸ್ವಾಮಿಗಳು ಶ್ರೀಗಳವರು ಜಗವೆಲ್ಲ ನಗುತಿರಲಿ, ಜಗದಳಲು ನನಗಿರಲಿ ಎಂಬ ಕವಿವಾಣಿಯಂತೆ ಕಷ್ಟದ ಸಂದರ್ಭಗಳಲ್ಲಿಯೂ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನೋಡಿಕೊಂಡರೆಂಬುದನ್ನು ಸ್ಮರಿಸಿ ವಿದ್ಯಾಸಂಪನ್ನ ಉತ್ತಮ ಸಮಾಜ ನಿರ್ಮಿಸಿದರೆಂದು ತಿಳಿಸಿದರು.

ಸ್ನಾತಕೋತ್ತರ ವಿಭಾಗದ ನಿವೃತ್ತ ನಿರ್ದೇಶಕರಾದ ಪ್ರೊ. ಆರ್.ಎಂ. ಚಿಂತಾಮಣಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಮೂರು ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.

ಜಯಂತಿ ಮಹೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು :

* ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಹಾಗೂ ಚಾಮರಾಜನಗರ ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಸುಮತಿರವರನ್ನು ಸನ್ಮಾನಿಸಲಾಯಿತು.
* 2016–17ನೇ ಸಾಲಿನ ವಿವಿಧ ತರಗತಿಗಳಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.
* ಜಯಂತಿ ಮಹೋತ್ಸವದ ಅಂಗವಾಗಿ ಕೊಳ್ಳೇಗಾಲ ತಾಲ್ಲೂಕು ಅಂತರ ಕಾಲೇಜು ಮಟ್ಟದ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.
* ವೇದಿಕೆ ಸಮಾರಂಭಕ್ಕೂ ಮುನ್ನ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿನ ರೋಗಿಗಳಿಗೆ ಹಣ್ಣು ಮತ್ತು ಬ್ರೆಡ್ ವಿತರಿಸಲಾಯಿತು.
* ಜಯಂತಿ ಮಹೋತ್ಸವದ ಅಂಗವಾಗಿ ಕ್ಯಾಂಪಸ್‌ನಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮ ನಡೆಸಲಾಯಿತು.

**ಶ್ರೀ ಹೆಚ್.ಜಿ. ನಟರಾಜನ್**
ಸಂಚಾಲಕರು

## ಸಾಂಸ್ಕೃತಿಕ ವೇದಿಕೆ

◆

ಭಾರತೀಯ ಸಂಸ್ಕೃತಿ ಇಡೀ ಜಗತ್ತಿಗೆ ಮಾದರಿ. ಭಾರತ ಎಂದ ಕೂಡಲೇ ಎಲ್ಲರ ಮನದಲ್ಲಿ ಮೂಡುವುದು ಇಲ್ಲಿ ಆಚರಿಸಲ್ಪಡುವ ಸಂಪ್ರದಾಯ, ಸಂಸ್ಕೃತಿ, ಬಣ್ಣ ಬಣ್ಣದ ಹಬ್ಬಗಳು, ಮನಸೆಳೆಯುವ ಮೆರವಣಿಗೆಗಳು ಇತ್ಯಾದಿ. ಗ್ರಾಮಗಳಿಂದಲೇ ತುಂಬಿರುವ ಈ ದೇಶದಲ್ಲಿ ಗ್ರಾಮಗಳ ದೈನಿಕ ಬದುಕು ಆರಂಭವಾಗುವುದೇ ಇಂತಹ ಜನಪದ ಹಾಡು, ಹಬ್ಬ ಆಚರಣೆಗಳಿಂದ. ಆದರೆ ಇಂದಿನ ,ವಿಜ್ಞಾನ ಮತ್ತು ತಂತ್ರಜ್ಞಾನ ಯುಗವು ನಮ್ಮ ಪರಂಪರಾಗತ ಕಲೆಗಳನ್ನು ಮರೆಸುವಂತೆ ನಾಗಾಲೋಟಕ್ಕೆ ಓಡುತ್ತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸ್ಪರ್ಧಾತ್ಮಕ ಯುಗದ ಕೇಂದ್ರ ಬಿಂದುಗಳಾದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಶೈಕ್ಷಣಿಕ ಮತ್ತು ಶೈಕ್ಷಣೇತರ ಚಟುವಟಿಕೆಗಳು ಪ್ರಮುಖ ಪಾತ್ರ ವಹಿಸುವ ಹಿನ್ನೆಲೆಯಲ್ಲಿ ಕಾಲೇಜಿನಲ್ಲಿ ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಿ ತನ್ಮೂಲಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಹತ್ವದ ಹೆಜ್ಜೆಗಳನ್ನು ಕಾಲೇಜು ಪ್ರಾರಂಭವಾದಾಗಿ ನಿಂದಲೂ ಇಡುತ್ತಿರುವುದು ಹೆಮ್ಮೆಯ ಸಂಗತಿ. ವೇದಿಕೆಯು ವಿದ್ಯಾರ್ಥಿನಿಯರು ಕಾಲೇಜಿನಲ್ಲಿ ನಡೆಯುವ ಅಂತರ ತರಗತಿ, ಅಂತರ ಪದವಿ ಸ್ಪರ್ಧೆಗಳಷ್ಟೇ ಅಲ್ಲದೆ ಅಂತರ ಕಾಲೇಜು, ವಿಶ್ವವಿದ್ಯಾನಿಲಯ, ಅಂತರ ಜಿಲ್ಲಾ, ಅಂತರ ವಲಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಎಲ್ಲಾ ರೀತಿಯ ಪ್ರೋತ್ಸಾಹ ನೀಡುತ್ತಿದೆ.

ದಿನಾಂಕ 25-07-2017 ರಂದು 2017-18ನೇ ಸಾಲಿನ ಸಾಂಸ್ಕೃತಿಕ ವೇದಿಕೆಯ ಸಂಚಾಲಕರು, ಸದಸ್ಯರು ಹಾಗೂ ತರಗತಿ ಪ್ರತಿನಿಧಿಗಳನ್ನು ಈ ಕೆಳಕಂಡಂತೆ ಆಯ್ಕೆ ಮಾಡಲಾಯಿತು.

### ಸಾಂಸ್ಕೃತಿಕ ವೇದಿಕೆ

| | | | |
|---|---|---|---|
| 01. | ಕು. ಆರ್.ಪಿ. ಸೌಮ್ಯ | ವಾಣಿಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರು | ಸಂಚಾಲಕರು |
| 02. | ಶ್ರೀ ಎಂ. ಬಸವರಾಜು | ಕನ್ನಡ ವಿಭಾಗ | ಸದಸ್ಯರು |
| 03. | ಶ್ರೀಮತಿ ಎನ್. ವಾಣಿ | ನಿರ್ವಹಣಾ ವಿಭಾಗ | ಸದಸ್ಯರು |
| 04. | ಶ್ರೀಮತಿ ಜಿ.ಎಸ್. ಸುಮ | ರಾಜ್ಯಶಾಸ್ತ್ರ ವಿಭಾಗ | ಸದಸ್ಯರು |
| 05. | ಶ್ರೀ ಸಿ.ಎಸ್. ಬಸವದತ್ತ ಮಹದೇವಪ್ರಸಾದ್ | ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |

### ತರಗತಿ ಪ್ರತಿನಿಧಿಗಳು

| | | |
|---|---|---|
| 01. | ಕು. ಅಂಜನ | ಪ್ರಥಮ ಬಿ.ಎ ಹೆಚ್.ಇ.ಪಿ |
| 02. | ಕು. ರಕ್ಷಿತ | ದ್ವಿತೀಯ ಬಿ.ಎ ಹೆಚ್.ಇ.ಜಿ |
| 03. | ಕು ಸುಷ್ಮ | ಅಂತಿಮ ಬಿ.ಎ ಹೆಚ್.ಇ.ಪಿ. |
| 04. | ಕು. ಮೇಘನ | ಪ್ರಥಮ ಬಿ.ಕಾಂ |

05. ಕು. ಅಶ್ವಿನಿ ಸಿ ದ್ವಿತೀಯ ಬಿ.ಕಾಂ
06 ಕು. ಕಾವ್ಯ ಎಸ್ ಅಂತಿಮ ಬಿ.ಕಾಂ
07. ಕು. ರಚನ ಪ್ರಥಮ ಬಿ.ಬಿ.ಎ
08. ಕು. ಸೋನಾಕ್ಷಿ ದ್ವಿತೀಯ ಬಿಬಿ.ಎ
09. ಕು. ರಶ್ಮಿ ಅಂತಿಮ ಬಿಬಿಎಂ

ದಿನಾಂಕ 8-8-2017 ಹಾಗೂ 9-8-2017ರಂದು ಪ್ರತಿಭಾಶೋಧ ಕಾರ್ಯಕ್ರಮವನ್ನು ನಡೆಸಲಾಯಿತು. ಇದರ ಪ್ರಯುಕ್ತ ಭಾವಗೀತೆ, ಆಶುಭಾಷಣ ಸ್ಪರ್ಧೆ, ಏಕವ್ಯಕ್ತಿ ನೃತ್ಯ, ಅಂತ್ಯಾಕ್ಷರಿ, ವಿವಿಧ ವೇಷಭೂಷಣ, ಮಿಸ್ ಜೆಎಸ್ಎಸ್, ಚರ್ಚಾ ಸ್ಪರ್ಧೆ, ರಂಗೋಲಿ ಸ್ಪರ್ಧೆ ಹಾಗೂ ಇನ್ನಿತರ ಸ್ಪರ್ಧೆಗಳನ್ನು ನಡೆಸಲಾಯಿತು.

ದಿನಾಂಕ 11-08-2017ರಂದು ಪ್ರಥಮ ಪದವಿ ವಿದ್ಯಾರ್ಥಿನಿಯರಿಗೆ ಹಿರಿಯ ವಿದ್ಯಾರ್ಥಿನಿಯರಿಂದ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಯಿತು.

ದಿನಾಂಕ 15-8-2017ರಂದು 70ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಕೆ ಎಸ್ ಪ್ರಕಾಶ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸ್ವಾತಂತ್ರ್ಯ ದಿನಾಚರಣೆ ಸಂದೇಶ ನೀಡಿದರು.

ದಿನಾಂಕ 1-9-2017ರಂದು ಸಾಂಸ್ಕೃತಿಕ ವೇದಿಕೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಸಿ.ಜೆ ಉಷಾದೇವಿ, ನಿವೃತ್ತ ಸಹ ಪ್ರಾಧ್ಯಾಪಕರು ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಡಾ. ವೆಂಕಟೇಶ್, ಸಹ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಾಧ್ವನಾಯಕ್, ಆರಕ್ಷಕ ಉಪನಿರೀಕ್ಷಕರು, ನಗರ ಪೋಲೀಸ್ ಠಾಣೆ, ಕೊಳ್ಳೇಗಾಲ ಇವರು ವಹಿಸಿದ್ದರು.

ದಿನಾಂಕ 5-9-2017 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ದಿನಾಂಕ 15-9-217ರಂದು ಮೈಸೂರಿನಲ್ಲಿ ಜರುಗಿದ ದಸರಾ ಮಹೋತ್ಸವದ ಪ್ರಯುಕ್ತ ಯುವ ಸಂಭ್ರಮ 2017 ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಾಲೇಜಿನಿಂದ 45 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 20-09-2017ರಂದು ಶ್ರೀ ಬಸವಲಿಂಗಪ್ಪ ಪದವಿಪೂರ್ವ ಕಾಲೇಜು, ಕೊಳ್ಳೇಗಾಲ ಇಲ್ಲಿ ನಡೆದ ಕಲಾ ಚೇತನ ವಿಶ್ಯುವಲ್ ಆರ್ಟ್ ಅಕಾಡೆಮಿ ಇವರ ಆಯೋಜನೆಯಲ್ಲಿ ಶ್ರೀ ಹೆಚ್. ಕೃಷ್ಣಸ್ವಾಮಿಯವರ 13ನೇ ಸಂಸ್ಮರಣೆ ಪ್ರಯುಕ್ತ ಜಿಲ್ಲಾ ಮಟ್ಟದ ಅಂತರ ಕಾಲೇಜು ಜಾನಪದ ಸಮೂಹ ನೃತ್ಯ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ 22 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 24-09-2017ರಂದು ಕಾವೇರಿ ವನ್ಯಜೀವಿ ವಿಭಾಗ ಮತ್ತು ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ಇವರ ವತಿಯಿಂದ ಶ್ರೀ ಲಯನ್ಸ್ ವಿದ್ಯಾಕೇಂದ್ರ, ಕೊಳ್ಳೇಗಾಲ ಇಲ್ಲಿ ನಡೆದ ಅಂತರ ಕಾಲೇಜು ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಬಿ.ಎ ವಿದ್ಯಾರ್ಥಿನಿಯರಾದ ಕು. ರಂಜಿತ ವಿ. ಹಾಗೂ ಕು. ರಕ್ಷಿತ ಆರ್. ಆಚಾರ್ಯ

ಇವರುಗಳು ಭಾಗವಹಿಸಿರುತ್ತಾರೆ.

ದಿನಾಂಕ 25-09-2017ರಂದು ಚಾಮರಾಜನಗರದಲ್ಲಿ ಜರುಗಿದ ನಾಡಹಬ್ಬ ದಸರಾ ಪ್ರಯುಕ್ತ ಯುವ ಸಂಭ್ರಮ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಾಲೇಜಿನ 25 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ 04-10-2017ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜಯಂತ್ಯೋತ್ಸವ ಅಂಗವಾಗಿ ಕಾಲೇಜಿನಲ್ಲಿ ಕೊಳ್ಳೇಗಾಲ ತಾಲ್ಲೂಕು ಅಂತರ ಕಾಲೇಜು ಮಟ್ಟದ ಭಾವಗೀತೆ, ಜನಪದ ಗೀತೆ ಹಾಗೂ ವಚನಗಾಯನ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕು. ಚೈತ್ರ ಎನ್ ಅಂತಿಮ ಬಿ.ಕಾಂ, ಕು. ರಕ್ಷಿತಾ ಆರ್. ಆಚಾರ್ಯ ಪ್ರಥಮ ಬಿ.ಎ ಹಾಗೂ ಕು. ಧನುಷಾ ಎಂ ಪ್ರಥಮ ಬಿ.ಕಾಂ ರವರು ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ.

ದಿನಾಂಕ 6-1-2018ರಂದು ಶ್ರೀ ವಾಸವಿ ವಿದ್ಯಾಸಂಸ್ಥೆ, ಕೊಳ್ಳೇಗಾಲದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕೊಳ್ಳೇಗಾಲ ಘಟಕ ಇವರ ವತಿಯಿಂದ ಆಯೋಜಿಸಿದ್ದ ಅಂತರ ಕಾಲೇಜು, ವಚನ ಗಾಯನ, ಸಮೂಹ ವಚನಗಾಯನ ಹಾಗೂ ಚರ್ಚಾ ಸ್ಪರ್ಧೆಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ.

ದಿನಾಂಕ 13-01-2018 ರಂದು ಸುತ್ತೂರಿನಲ್ಲಿ ಜರುಗಿದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರು ಸಮೂಹ ನೃತ್ಯ, ಸಮೂಹ ಗಾಯನ ಹಾಗೂ ಶಾಸ್ತ್ರೀಯ ನೃತ್ಯ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ದಿನಾಂಕ 26-01-2018ರಂದು 69ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ವಕೀಲರಾದ ಶ್ರೀ ವೆಂಕಟಾಚಲರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಂವಿಧಾನದ ಪ್ರಾಮುಖ್ಯತೆಯನ್ನು ವಿವರಿಸಿದರು.

ದಿನಾಂಕ 23-03-2018ರಂದು ಸಂಸ್ಕೃತಿ ದಿನಾಚರಣೆ ಮತ್ತು ಸರಸ್ವತಿ ಪೂಜೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ದಿನಾಂಕ 6-4-2018ರಂದು ಸಾಂಸ್ಕೃತಿಕ ವೇದಿಕೆಯ ಸಮಾರೋಪ ಸಮಾರಂಭವನ್ನು ನಡೆಸಲಾಯಿತು. ಡಾ. ಗುಬ್ಬಿಗೂಡು ರಮೇಶ, ಸಂಸ್ಕೃತಿ ಚಿಂತಕರು ಹಾಗೂ ಖ್ಯಾತ ಅಂಕಣಕಾರರು, ಇವರು ಸಮಾರೋಪ ಭಾಷಣ ನೀಡಿದರು. ಪ್ರೊ. ಮೈಸೂರು ಕೃಷ್ಣಮೂರ್ತಿ, ಸಹ ಪ್ರಾಧ್ಯಾಪಕರು, ಮಹಾರಾಣಿ ಮತ್ತು ನಿರ್ವಹಣಾ ಕಾಲೇಜು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಿವೃತ್ತ ಪ್ರಾಚಾರ್ಯರಾದ ಪ್ರೊ. ಎಂ.ಪಿ. ನಟರಾಜು ರವರು ಅಧ್ಯಕ್ಷತೆ ವಹಿಸಿದ್ದರು.

ದಿನಾಂಕ 9-4-2018ರಂದು ಕಿರಿಯ ವಿದ್ಯಾರ್ಥಿನಿಯರಿಂದ ಹಿರಿಯ ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

**ಆರ್.ಪಿ. ಸೌಮ್ಯ**

ಸಂಚಾಲಕರು

## ದೈಹಿಕ ಶಿಕ್ಷಣ ವಿಭಾಗ

ದೈಹಿಕ ಶಿಕ್ಷಣವು ಶಿಕ್ಷಣದ ಒಂದು ಅಂಗವಾಗಿದೆ. ಇದು ವಿದ್ಯಾರ್ಥಿಗಳ ಶಾರೀರಕ ಹಾಗೂ ಮಾನಸಿಕ ಬೆಳವಣಿಗೆಗೆ ಪೂರಕವಾಗಿ ವ್ಯಕ್ತಿಯು ಪರಿಪೂರ್ಣವಾಗಿ ಬೆಳೆಯಬೇಕಾದರೆ ದೈಹಿಕ ಶಿಕ್ಷಣವು ಬಹಳ ಮುಖ್ಯವಾದದ್ದು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ದೈಹಿಕ ಶಿಕ್ಷಣವು ಪ್ರಮುಖ ಪಾತ್ರವನ್ನು ಹೊಂದಿದೆ.

ಆಡಳಿತ ಮಂಡಳಿ ಹಾಗೂ ಯುಜಿಸಿ ನೆರವಿನಿಂದ ಕಾಲೇಜಿನಲ್ಲಿ ಉನ್ನತ ದರ್ಜೆಯ ಜಿಮ್ ಸೌಲಭ್ಯವಿದ್ದು ಇದು ವಿದ್ಯಾರ್ಥಿಗಳ ದೈಹಿಕ ಶಿಕ್ಷಣಕ್ಕೆ ಪೂರಕವಾಗಿದೆ.

ದಿನಾಂಕ 25–7–2018 ರಂದು ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 2017–18ನೇ ಸಾಲಿನ ಕ್ರೀಡಾ ವೇದಿಕೆಯನ್ನು ರಚಿಸಲಾಯಿತು.

ಕ್ರೀಡಾ ವೇದಿಕೆ

| | | | |
|---|---|---|---|
| 01. | ಶ್ರೀಮತಿ ಕೆ.ಆರ್. ಉಮಾದೇವಿ | ದೈಹಿಕ ಶಿಕ್ಷಣ ನಿರ್ದೇಶಕರು | ಸಂಚಾಲಕರು |
| 02. | ಶ್ರೀ ಬಿ. ಮಂಜುನಾಥ್ | ಭೂಗೋಳಶಾಸ್ತ್ರ ವಿಭಾಗ | ಸದಸ್ಯರು |
| 03. | ಶ್ರೀಮತಿ ಪುಟ್ಟಮ್ಮ | ಅರ್ಥಶಾಸ್ತ್ರ ವಿಭಾಗ | ಸದಸ್ಯರು |
| 04. | ಶ್ರೀಮತಿ ಜಿ.ಎಸ್. ಸುಮ | ರಾಜ್ಯಶಾಸ್ತ್ರ ವಿಭಾಗ | ಸದಸ್ಯರು |

ಕ್ರೀಡಾ ಪ್ರತಿನಿಧಿಗಳು

| | | |
|---|---|---|
| 01. | ಕು. ಮೇಘ ಎಂ. | ಪ್ರಥಮ ಬಿ.ಎ |
| 02. | ಕು. ಶಬರಿನ್ | ದ್ವಿತೀಯ ಬಿ.ಎ |
| 03. | ಕು ಅರುಣ ಅಮಲಿ | ಅಂತಿಮ ಬಿ.ಎ |
| 04. | ಕು. ಕಾವ್ಯ ಎಸ್. | ಪ್ರಥಮ ಬಿ.ಕಾಂ |
| 05. | ಕು. ಸಲೀನ್ ಅಮೃತ | ದ್ವಿತೀಯ ಬಿ.ಕಾಂ |
| 06 | ಕು. ಮೇಘನ ಸಿ. | ಅಂತಿಮ ಬಿ.ಕಾಂ |
| 07. | ಕು. ಅರ್ಪಿತ ಸಿ. | ಪ್ರಥಮ ಬಿ.ಬಿ.ಎ |
| 08. | ಕು. ಮಾಲಾಶ್ರೀ ಹೆಚ್. | ದ್ವಿತೀಯ ಬಿಬಿ.ಎ |
| 09. | ಕು. ಪಲ್ಲವಿ ಆರ್. | ಅಂತಿಮ ಬಿಬಿಎಂ |

ದಿನಾಂಕ 10-08-2017 ಮತ್ತು 11-08-2017ರಂದು ಮೈಸೂರು ವಿಶ್ವವಿದ್ಯಾನಿಲಯ ಪೆವಿಲಿಯನ್, ಮೈಸೂರಿನಲ್ಲಿ 2017–18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾಲಿಬಾಲ್ ತಂಡದ ಆಯ್ಕೆಗೆ ಕು. ರಾಜೇಶ್ವರಿ ಬಿ., ದ್ವಿತೀಯ ಬಿ.ಎ. ಹೆಚ್.ಇ.ಪಿ ಇವರು ಭಾಗವಹಿಸಿದ್ದರು.

ದಿನಾಂಕ 29–08–2017 ರಂದು 2017–18ನೇ ಸಾಲಿನ ತಾಲ್ಲೂಕು ಮಟ್ಟದ ಕ್ರೀಡಾಕೂಟವು ಶ್ರೀ ಮಹದೇಶ್ವರ ಪ್ರಥಮ ದರ್ಜೆ ಸರ್ಕಾರಿ ಕಾಲೇಜು, ಕೊಳ್ಳೇಗಾಲದಲ್ಲಿ ಜರುಗಿತು. ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಥ್ರೋಬಾಲ್

ಮತ್ತು 100 ಮೀಟರ್ ಓಟದಲ್ಲಿ ಭಾಗವಹಿಸಿದ್ದರು.

ದಿನಾಂಕ 30–08–2017ರಂದು ರಾಷ್ಟ್ರೀಯ ಕ್ರೀಡಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಆರ್ ನಟರಾಜಪ್ಪ, ನಿವೃತ್ತ ದೈಹಿಕ ಶಿಕ್ಷಕರು (ಹಿರಿಯ ಕ್ರೀಡಾಪಟು) ಮುಖ್ಯ ಅತಿಥಿಗಳಾಗಿ ಆಗಮಿಸಿ ಕ್ರೀಡಾ ಲೋಕದ ಮೊದಲ ಸೂಪರ್‌ಸ್ಟಾರ್ ಹಾಕಿ ಕ್ರೀಡಾಪಟು ಧ್ಯಾನ್‌ಚಂದ್ ಬಗ್ಗೆ ಮಾತನಾಡಿದರು.

ದಿನಾಂಕ 1–9–2017ರಂದು ಕ್ರೀಡಾ ವೇದಿಕೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಸಿ.ಜೆ ಉಷಾದೇವಿ, ನಿವೃತ್ತ ಸಹ ಪ್ರಾಧ್ಯಾಪಕರು, ಮೈಸೂರು ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಸಿ. ವೆಂಕಟೇಶ್, ಸಹ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ವಿಜ್ಞಾನ, ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಭಾಗವಹಿಸಿದ್ದರು.

ದಿನಾಂಕ 4–10–2017ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 102ನೆಯ ಜಯಂತಿ ಮಹೋತ್ಸವದ ಅಂಗವಾಗಿ ಕೊಳ್ಳೇಗಾಲ ತಾಲ್ಲೂಕು ಮಟ್ಟದ ಅಂತರ ಕಾಲೇಜು ಕ್ರೀಡಾ ಸ್ಪರ್ಧೆಗಳನ್ನು ನಡೆಸಲಾಯಿತು. ನಮ್ಮ ಕಾಲೇಜಿನ ಕ್ರೀಡಾಪಟುಗಳು ಥ್ರೋಬಾಲ್ ಹಾಗೂ ವಾಲಿಬಾಲ್‌ನಲ್ಲಿ ಪ್ರಥಮ ಸ್ಥಾನಗಳಿಸಿದರು.

ದಿನಾಂಕ 10–01–2018ರಂದು ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರದಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯ ಚಾಮರಾಜವಲಯ ಮಟ್ಟದ ಪಂದ್ಯಾವಳಿಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಥ್ರೋಬಾಲ್‌ನಲ್ಲಿ ಪ್ರಥಮ ಹಾಗೂ ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನವನ್ನು ಗಳಿಸಿ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು, ಅಂತರ ವಲಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ದಿನಾಂಕ 17–01–2018ರಂದು ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರದಲ್ಲಿ ನಡೆದ 2017–18ನೇ ಸಾಲಿನ ವಿಶ್ವವಿದ್ಯಾನಿಲಯ ಚಾಮರಾಜವಲಯ ಮಟ್ಟದ ಪಂದ್ಯಾವಳಿಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಶಟಲ್‌ನಲ್ಲಿ ದ್ವಿತೀಯ ಹಾಗೂ ಟೆನ್ನಿಕಾಯ್ಟ್‌ನಲ್ಲಿ ದ್ವಿತೀಯ ಸ್ಥಾನ ಗಳಿಸಿ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರ ವಲಯ ಮಟ್ಟಕ್ಕೆ ಆಯ್ಕೆಯಾರುತ್ತಾರೆ.

ದಿನಾಂಕ 08–03–2018 ರಿಂದ 10–03–2018ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜುಗಳ ಅಂತರ ವಲಯ ಮಹಿಳಾ ಕ್ರೀಡಾಕೂಟವು ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು, ಹಾಸನ ಇಲ್ಲಿ ನಡೆಯಿತು. ಈ ಕ್ರೀಡಾಕೂಟದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಥ್ರೋಬಾಲ್ ಹಾಗೂ ಟೆನ್ನಿಕಾಯ್ಟ್‌ನಲ್ಲಿ ಭಾಗವಹಿಸಿದ್ದರು.

ದಿನಾಂಕ 20–03–2018ರಿಂದ 26–03–2018ರ ವರೆಗೆ ಕಾಲೇಜಿನ ವಾರ್ಷಿಕ ಕ್ರೀಡಾ ಸ್ಪರ್ಧೆಗಳನ್ನು ನಡೆಸಲಾಯಿತು. ಕಾಲೇಜಿನಲ್ಲಿ ಥ್ರೋಬಾಲ್, ವಾಲಿಬಾಲ್, ಕೇರಂ (ಡಬಲ್ಸ್) ಚೆಸ್, ಟೆನಿಕಾಯ್ಟ್ (ಡಬಲ್ಸ್) ಶಟಲ್ (ಸಿಂಗಲ್ಸ್) ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 03–04–2018ರಂದು 2017–18ನೇ ಶೈಕ್ಷಣಿಕ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ನಡೆಸಲಾಯಿತು.

ದಿನಾಂಕ 06–04–2018 ರಂದು ವೇದಿಕೆಯ ಸಮಾರೋಪ ಸಮಾರಂಭವನ್ನು ನಡೆಸಲಾಯಿತು. 2017–18ನೇ ಸಾಲಿನ ವಾರ್ಷಿಕ ಕ್ರೀಡಾ ಪಂದ್ಯಗಳು ಹಾಗೂ ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

**ಶ್ರೀಮತಿ ಕೆ ಆರ್ ಉಮಾದೇವಿ**
ಸಂಚಾಲಕರು

## ರಾಷ್ಟ್ರೀಯ ಸೇವಾ ಯೋಜನೆ

◆

ಯಾವುದೇ ರಾಷ್ಟ್ರ ಮುಂದುವರಿಯಬೇಕಾದರೆ ಆ ರಾಷ್ಟ್ರದ ಯುವ ಜನಾಂಗ ಅದರಲ್ಲೂ ವಿದ್ಯಾರ್ಥಿಗಳ ಸಾಮಾಜಿಕ ಕಳಕಳಿಯನ್ನು ಅವಲಂಬಿಸಿರುತ್ತದೆ. ಪ್ರಸ್ತುತ ಸಾಮಾಜಿಕ ಬದುಕಿನೊಂದಿಗೆ ನೇರ ಸಂಪರ್ಕವನ್ನು ಇಟ್ಟುಕೊಳ್ಳಬೇಕು ಎಂಬ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರ ಕನಸನ್ನು ನನಸಾಗಿಸಲು ಮತ್ತು ಯುವ ಸಮುದಾಯವನ್ನು ಜವಾಬ್ದಾರಿಯುತ ಮಾರ್ಗದಲ್ಲಿ ನಡೆಸಲು ಕೈಗೊಂಡ ಅನೇಕ ಕಾರ್ಯಕ್ರಮಗಳಲ್ಲಿ "ರಾಷ್ಟ್ರೀಯ ಸೇವಾ ಯೋಜನೆ" ಅತಿ ಮುಖ್ಯವಾಗಿದೆ.

ವಿದ್ಯಾರ್ಥಿಗಳಲ್ಲಿ ವ್ಯಕ್ತಿಗೌರವ, ಉತ್ತಮ ನಾಯಕತ್ವ, ಸಹಬಾಳ್ವೆ, ಭ್ರಾತೃತ್ವ, ಜಾತ್ಯಾತೀತ ಮನೋಭಾವ, ಭಾವೈಕ್ಯತೆ, ಹೀಗೆ ಅನೇಕ ಉತ್ತಮ ಗುಣಗಳನ್ನು ಹುಟ್ಟು ಹಾಕಿ ಸಮಾಜದೊಂದಿಗೆ ನೇರ ಸಂಪರ್ಕವನ್ನು ಪಡೆದು ಸಮಾಜದ ನೋವು ನಲಿವುಗಳಲ್ಲಿ ಭಾಗಿಯಾಗಿ ಸಮಾಜದಲ್ಲಿನ ಅನೇಕ ಮೌಢ್ಯತೆಗಳನ್ನು ದೂರ ಮಾಡುವ ಹಾಗೂ ಭಾವನಾತ್ಮಕವಾಗಿ ಸಮಾಜದ ಜೊತೆಗೆ ಸ್ಪಂದಿಸುವ ನಿಟ್ಟಿನಲ್ಲಿ ನಮ್ಮ ಕಾಲೇಜು ಒಂದು ರಾಷ್ಟ್ರೀಯ ಸೇವಾ ಯೋಜನೆ ಘಟಕವನ್ನು ಹೊಂದಿದೆ.

ಈ ರಾ.ಸೇ.ಯೋ ಘಟಕದಲ್ಲಿ 100 ಜನ ವಿದ್ಯಾರ್ಥಿನಿಯರು ನೋಂದಣಿಯನ್ನು ಪಡೆದಿರುತ್ತಾರೆ. ಇದರೊಂದಿಗೆ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಒಂದು ಸಲಹಾ ಸಮಿತಿಯನ್ನು ಹೊಂದಿದ್ದು ಈ ಸಭೆಯ ಅನ್ವಯದಂತೆ 100 ಜನ ಸ್ವಯಂ ಸೇವಕಿಯರನ್ನು ಒಳಗೊಂಡ ಈ ಘಟಕವು ಸಾಕಷ್ಟು ಸಮಾಜಮುಖಿ ಕಾರ್ಯಗಳನ್ನು ಮತ್ತು ಕೆಲವು ಪ್ರಮುಖ ಆಚರಣೆಗಳನ್ನು ಆಯೋಜಿಸಿರುತ್ತದೆ.

### ಸಲಹಾ ಸಮಿತಿ

| | | | |
|---|---|---|---|
| 01 | ಪ್ರೊ. ಉಮೇಶ | ಪ್ರಾಚಾರ್ಯರು | ಅಧ್ಯಕ್ಷರು |
| 02 | ಶ್ರೀಮತಿ ಎ.ಎಸ್. ಸ್ಮಿತಾ | ಮುಖ್ಯಸ್ಥರು, ಭೂಗೋಳಶಾಸ್ತ್ರ ವಿಭಾಗ | ಕಾರ್ಯಕ್ರಮಾಧಿಕಾರಿ |
| 03 | ಪ್ರೊ. ಎಂ. ಬಸವರಾಜು | ಮುಖ್ಯಸ್ಥರು, ಕನ್ನಡ ವಿಭಾಗ | ಸದಸ್ಯರು |
| 04 | ಶ್ರೀ ಬಸವದತ್ತ ಮಹದೇವ ಪ್ರಸಾದ್ | ಸಹಾಯಕ ಪ್ರಾಧ್ಯಕರು, ವಾಣಿಜ್ಯಶಾಸ್ತ್ರ ವಿಭಾಗ | ಸದಸ್ಯರು |
| 05 | ಶ್ರೀ ಸಿ. ರೂಪಶ್ರೀ | ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ | ಸದಸ್ಯರು |
| 06 | ಶ್ರೀಮತಿ ಎಂ. ನಾಗರತ್ನ | ದ್ವಿತೀಯ ದರ್ಜೆ ಸಹಾಯಕರು | ಸದಸ್ಯರು |
| 07 | ಕು. ರಶ್ಮಿ | ತೃತೀಯ ಬಿಬಿಎಂ | ಸದಸ್ಯರು |
| 08 | ಕು. ಅಂಜು | ತೃತೀಯ ಬಿ.ಎ | ಸದಸ್ಯರು |

ಪ್ರತೀ ವರ್ಷದಂತೆ 17-07-2017ರಂದು ಪರಿಚಯಾತ್ಮಕ ಮತ್ತು ರಾ.ಸೇ.ಯೋ ಅರಿವು ಕಾರ್ಯಕ್ರಮವನ್ನು ನಡೆಸಲಾಯಿತು. ಪ್ರೊ. ಕೆ.ಎಂ. ಪ್ರಸನ್ನ ಕುಮಾರ್ ಆಂಗ್ಲಭಾಷಾ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ

ಕಾಲೇಜು, ಸಿದ್ದಾರ್ಥನಗರ, ಮೈಸೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು.

ದಿನಾಂಕ 16-08-2017ರಂದು ಶ್ರೀ ಸಿದ್ದಲಿಂಗೇಗೌಡ, ಆರಕ್ಷಕರು, ಕೊಳ್ಳೇಗಾಲ ಪಟ್ಟಣ ಪೋಲೀಸ್ ಠಾಣೆ ಇವರಿಂದ ರಾ.ಸೇ.ಯೋ ಘಟಕದ ದೈನಂದಿನ ಚಟುವಟಿಕೆಗಳ ಉದ್ಘಾಟನೆ ಕಾರ್ಯಕ್ರಮವನ್ನು ನಡೆಸಲಾಯಿತು.

ದಿನಾಂಕ 27-9-2017ರಂದು ನಗರದ ರೋಟರಿ ಸಂಸ್ಥೆ ಮತ್ತು ಅರಣ್ಯ ಇಲಾಖೆಯ ಸಹಯೋಗ ದೊಂದಿಗೆ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ನಡೆಸಲಾಯಿತು.

ದಿನಾಂಕ 16-10-2017ರಂದು ಕಾಲೇಜಿನ ಸಭಾಂಗಣದಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಪಟಾಕಿ ವಿರೋಧಿ ಅಭಿಯಾನ ಕಾರ್ಯಕ್ರಮ ನಡೆಸುವ ಮೂಲಕ ವಿದ್ಯಾರ್ಥಿನಿಯರಿಗೆ ವಾಯುಮಾಲಿನ್ಯ ಕುರಿತು ಅರಿವು ಮೂಡಿಸಲಾಯಿತು.

ದಿನಾಂಕ 12-01-2018ರಂದು ರಾ.ಸೇ.ಯೋ ದಿನಾಚರಣೆಯನ್ನು ಆಯೋಜಿಸಿ ಶ್ರೀ ಸಿ.ಎಂ. ನರಸಿಂಹಮೂರ್ತಿ ಅಂತರರಾಷ್ಟ್ರೀಯ ಜನಪದ ಗಾಯಕರು ಇವರಿಂದ "ನಿರಂತರ ಹೋರಾಟವೇ ಜೀವನ" ಎಂಬ ವಿಷಯದ ಮೇಲೆ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು.

ದಿನಾಂಕ 20-01-2018ರಂದು ವಿದ್ಯಾರ್ಥಿನಿಯರಿಗೆ ಪರಿಸರ ಮಾಲಿನ್ಯ ಕುರಿತ ಪರಿಸರ ಮಾಲಿನ್ಯ - ಸರ್ವ ವಿನಾಶ ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು.

ಹೀಗೆ ಮೇಲಿನ ಕಾರ್ಯಕ್ರಮಗಳೊಂದಿಗೆ ರಾಷ್ಟ್ರೀಯ ಮತದಾನ, ರಾಷ್ಟ್ರೀಯ ಯುವ ದಿನಾಚರಣೆ, ಮಾನಸಿಕ ದುರ್ಬಲತೆ ಮುಂತಾದ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಮಾಜದ ಸ್ವಚ್ಛತೆಗೆ ಪ್ರಯತ್ನಿಸುವುದರೊಂದಿಗೆ ಸಾಪ್ತಾಹಿಕ ಕಾಲೇಜು ಆವರಣ ಸ್ವಚ್ಛತೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇದರೊಂದಿಗೆ ವಿಶ್ವವಿದ್ಯಾನಿಲಯವು ಆಯೋಜಿಸಿರುವ ಅನೇಕ ರಾಜ್ಯ, ರಾಷ್ಟ್ರ, ತಾಲ್ಲೋಕು ಮತ್ತು ಜಿಲ್ಲಾ ಮಟ್ಟದ ಕಾರ್ಯಕ್ರಮಗಳಲ್ಲಿ ಸ್ವಯಂ ಸೇವಕಿಯರು ಭಾಗವಹಿಸಿರುತ್ತಾರೆ.

ದಿನಾಂಕ 6-4-2018ರಂದು ರಾ.ಸೇ.ಯೋ ಘಟಕದ ಸಮಾರೋಪ ಸಮಾರಂಭವನ್ನು ನಡೆಸಲಾಯಿತು

ಶ್ರೀಮತಿ ಎ.ಎಸ್. ಸ್ಮಿತಾ
ಕಾರ್ಯಕ್ರಮಾಧಿಕಾರಿ



ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ರಥಯಾತ್ರೆ ಬೀಳ್ಕೊಡುಗೆ



ನಿವೃತ್ತ ಸಹಪ್ರಾಧ್ಯಾಪಕರಾದ ಡಾ। ಸಿ.ಜಿ. ಉಷಾದೇವಿ ಅವರಿಂದ ಸಾಂಸ್ಕೃತಿಕ ಹಾಗೂ ಕ್ರೀಡಾವೇದಿಕೆ ಉದ್ಘಾಟನೆ



ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದ ಸಮಾರೋಪ ಭಾಷಣ : ಡಾ। ಗುಬ್ಬಿಗೂಡು ರಮೇಶ್ ಅವರಿಂದ



Printers & Publishers, Shivarampete, Mysuru. Ph : 2476019